ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 1 ಸಂಚಿಕೆ 30

ಡಿಸೆಂಬರ್ 23, 2007

ಕನ್ನಡ ವಾರಪತ್ರಿಕೆ

ರೂ. 5/-

ಪೇಜ್ 8



ಸಾಹಿತ್ಯ ಸಮ್ಮೇಳನ - ಅದ್ದೂರಿ ಜಾತ್ರೆ

ಗುಜರಾತ್ ಚುನಾವಣೆ

ಪೇಜ್ 9



ಮುಖವಾಡ ಕಳಚಿದ ಮೋದಿ



ನ್ಯಾಯಾಂಗದ ಅತೀ ಕ್ರಿಯಾಶೀಲತೆ : ಮೈಲುಗಲ್ಲಾದ ತೀರ್ಪು

ನಂದಿಗ್ರಾಮ : ಶಾಂತಿ ಶತ್ರುಗಳ ಸೋಲು



ಈಗಿನ ಜಮಾನಕ್ಕಲ್ಲ !

ಸುದ್ದಿ...ಸುದ್ದಿ...ಸುದ್ದಿ...!

ಇದೊಂದು ಸುದ್ದಿ, ಬರೀ ಸುದ್ದಿಯಲ್ಲ, ಮಾರಾಯರ್ರೆ! ಮಾವೋವಾದಿಗಳಿಗೆ ಸಂಬಂಧಿಸಿದ ಸುದ್ದಿ. ಸುದ್ದಿ ಮಾಡೋದೆ ಅವರ ಕ್ರಾಂತಿ ಅಂತೀರಾ? ಅವರು ಗನ್ನು ಹಿಡಿದರೂ ಸುದ್ದಿ, ಪೆನ್ನು ಹಿಡಿದರೂ ಸುದ್ದಿ. ತಲೆಮರೆಸಿಕೊಂಡರೂ ಸುದ್ದಿ. ತಲೆ ತೆಗೆದರೂ ಸುದ್ದಿ... ಸುದ್ದಿ...ಸುದ್ದಿ, ಬರೇ ಸುದ್ದಿ ಈ ಮಂದಿಯದು ಅಂತೀರಾ? ಇಲ್ಲಿದೆಯಲ್ಲ, ಈ ಸುದ್ದಿ ಕೊಂಚ ಬೇರೆ ತರಹದ್ದು.

ಮೊನ್ನೆಯಷ್ಟೇ ಆಂಧ್ರ ಪೋಲೀಸರು ಬಂಧಿತ ಮಾವೋವಾದಿ ಎನ್.ಪಾಂಡುರಂಗ ರೆಡ್ಡಿ ಅಲಿಯಾಸ್ ಸಾಗರ್ ಅಲಿಯಾಸ್ ಪ್ರತಾಪ್ ಎಂಬಾತ ನೀಡಿದ ಮಾಹಿತಿಯ ಮೇರೆಗೆ ಪ್ರಕಾಶಂ ಜಿಲ್ಲೆಯಲ್ಲಿ ಮಾವೋವಾದಿಗಳು ಹೂತಿಟ್ಟಿದ್ದ ಕೆಲವು ಪದಾರ್ಥಗಳನ್ನು ಅಗೆಸಿ ತೆಗೆದರಂತೆ. ನಿಮ್ಮ ಊಹೆ ಸರಿ. ಅಲ್ಲಿ ಸಿಕ್ಕಿದ್ದು ಶಸ್ತ್ರಾಸ್ತ್ರಗಳು. ಒಂದು ಏಕೆ 47, ಎರಡು ಮ್ಯಾಗಜೈನ್ ತುಂಬ ಬುಲೆಟ್‌ಗಳು ಮತ್ತೆ 60 ಬಗೆಯ ಶಸ್ತ್ರಗಳು(ಇವೆಲ್ಲ ಏಕೆ ಅಂತ ಕೇಳುವಷ್ಟು ದಡ್ಡರಲ್ಲ ನೀವು, ಅಲ್ಲವೇ? ಯಾಕೆಂದರೆ ಇವೇ ತಾನೇ, ಅವರ ಕ್ರಾಂತಿಯ ದಾರಿ!) ಆದರೆ ಇವೆಲ್ಲದರ ಜೊತೆ ಕೆ.ಜಿ. ಚಿನ್ನ, 7.41 ಲಕ್ಷ ಕ್ಯಾಷ್ ಕೂಡಾ ಇದ್ದವಂತೆ. ಅರೆ ಇಸ್ಕೀ....! ಮಾವೋವಾದಿಗಳಿಗೆ ಚಿನ್ನಯಾಕೆ ಅಂತೀರಾ? ವೃತ್ತಿ ನಿರತ ಕಳ್ಳರೂ ಇಷ್ಟೊಂದು ಚಿನ್ನ ಕದ್ದು ಹೂತಿಡಲಾರರು ಎಂಬುದು ಪೋಲೀಸರ ಅಂಬೋಣವಂತೆ(ಇದು ನಮ್ಮ ಅಂಬೋಣವೂ ಹೌದು)

ಮಾವೋವಾದಿಗಳ ವಾದ ಮಾತ್ರ ಲೋಡು ಮಾಡಿದ ಬುಲೆಟ್ಟಿನಂತೆ ರೆಡಿ ಇದೆ ಸಿಡಿಯಲು. ಚಿನ್ನ ಮಾರಿದ ದುಡ್ಡಲ್ಲಿ ಹೊಸ ಹೊಸ ಬಂದೂಕು, ಬಂದೂಕಿನಿಂದ (ಹಲ್ಲೆ, ಹಲ್ಲೆಯಿಂದ ಕೊಲೆ, ಕೊಲೆಯಿಂದ) ಕ್ರಾಂತಿ ಇವರ ಟಾರ್ಗೇಟ್ ಅಂತೆ. ಇದೆಂತಹ ಸೂತ್ರ ಅಂತ ನೀವು ಹುಬ್ಬೇರಿಸಿದರೆ ಅವರ ವಾದದ ಪ್ರಕಾರ ಬರೀ ಮಾತಿನ ಸೋಂಬೇರಿಗಳಾಗುವಿರಿ. ಆದರೆ ಇಂತಹ ಚಿನ್ನದ ಸೂತ್ರ ಮಾತ್ರ ಮಾವೋವಾದಿಗಳಿಗೆ, ನಕ್ಸಲರಿಗೆ ಕರತಲಾಮಲಕವಾಗಿದೆ.

ಒಟ್ಟಾರೆ, ಪ್ರಜಾಪ್ರಭುತ್ವ ವಿರೋಧಿಗಳಿಗೆ ಚಿನ್ನ ಬೇಕು, ನಗದು ಬೇಕು ಅವನ್ನು ಯಾರಿಗೂ ಸಿಗದಂತೆ ಹೂತಿಡಬೇಕು. ಯಾಕೆಂದರೆ ಯಾವ ಬ್ಯಾಂಕು ಕದ್ದ ಮಾಲಿಗೆ ರಕ್ಷಣೆ ಕೊಡುತ್ತೆ ಹೇಳಿ? ಅಂತೂ ಮಾವೋವಾದಿಗಳ ತಲೆಯೇ ತಲೆ, ತಲೆಗೊಂದು ಬಂದೂಕು. ಎದುರಾಡಿದವರ ತಲೆಗೆ ಬುಲೆಟ್ಟು, ಏನೋ, ಎಂತೋ, ಮಾವೋವಾದಿಗಳಿಗೆ ಚಿನ್ನಬೇಕು.

ಅಂದಹಾಗೆ ಬಸವನಗುಡಿಯ ಚಾರ್ವಾಕ ಮಹಾಶಯರಿಗೆ ಈ ಸುದ್ದಿ ಇನ್ನೂ ಸಿಕ್ಕಿಲ್ಲವಂತೆ ಪಾಪ! ಅವರಿನ್ನೂ ಪೆನ್ನು ಹಿಡಿದು ಝುಳಪಿಸುತ್ತಾ ಬಾಯಿ ಬಡಿದುಕೊಳ್ಳುತ್ತಿದ್ದಾರಂತೆ 'ನಂದಿಗ್ರಾಮದಲ್ಲಿ ನೈಜ ಕಮ್ಯುನಿಸ್ಟ್‌ರನ್ನು ಸಿ.ಪಿ.ಐ(ಎಂ)ನವರು ಕೊಂದರು, ಕೊಂದರು... ಅಯ್ಯಯ್ಯಪ್ಪೋ' ಅಂತ.

ಯಾರಾದರೂ ಈ ಚಿನ್ನದ ಸುದ್ದಿಯನ್ನು ಚಾರ್ವಾಕರ ಕಿವಿಗೆ ಹಾಕುತ್ತೀರಾ? ಯಾಕಂದ್ರ ನಾವು ಬಸವನಗುಡಿಯಿಂದ ಬಾಳಾ ದೂರ ಇದ್ದೀವಿ. ಅದಕ್ಕ.

-ಕ್ಯಾತೇ ಕುಮಾರ್

ಬಂಡಾಯ

ಬಂಡಾಯ ಬರಿಬರಿದೆ ಹುಟ್ಟಿದ್ದು ಅಲ್ಲ
ಕೆಂಡದೊಳು ಬೆಂದವರು ಈ ಜನರು ಎಲ್ಲ
ಗೊತ್ತೇನು ಇವರೆಡೆಗೆ ಬರದಂತೆ ಬೆಳಕು
ಮುಚ್ಚಿಟ್ಟು ಕೆಲವು ಜನ ಮಾಡಿದರು ಹುಳುಕು.

- ವಿಡಂಬಾರಿ

ಕಾಂ. ಎಸ್.ಎಫ್.ಕ್ಯಾದಗಿ ಇನ್ನಿಲ್ಲ

ರಾಜ್ಯದ ಕೈ ಮಗ್ಗದ ನೇಕಾರರನ್ನು ಸಂಘಟಿಸಿ ಅವರ ಹಕ್ಕುಗಳಿಗಾಗಿ ಹೋರಾಟ ನಡೆಸಲು ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದ ಕಾಂ: ಎಸ್.ಎಫ್.ಕ್ಯಾದಗಿ ಅವರು ಇದೇ ಡಿಸೆಂಬರ್ 7ರ ಮಧ್ಯರಾತ್ರಿ ರಾಣೇಬೆನ್ನೂರ್ ತಾಲ್ಲೂಕಿನ ತುಮ್ಮಿನಕಟ್ಟಿಯಲ್ಲಿ ನಿಧನರಾದರು. ಅವಿವಾಹಿತರಾಗಿದ್ದ ಅವರಿಗೆ 66 ವರ್ಷ ವಯಸ್ಸಾಗಿತ್ತು. ಕಳೆದ ಕೆಲವು ವರ್ಷಗಳಿಂದ ಅವರು ಶ್ವಾಸಕೋಶದ ಕಾಯಿಲೆಯಿಂದ ನರುಳುತ್ತಿದ್ದರು. ಇತ್ತೀಚಿಗೆ ಕಾಯಿಲೆ ಉಲ್ಬಣಗೊಂಡಾಗ ಅವರನ್ನು ಬೆಂಗಳೂರಿಗೆ ತಂದು ನಿಮಾನ್ಸ್ ಆಸ್ಪತ್ರೆಯ ಕ್ಷಯರೋಗ ವಿಭಾಗದಲ್ಲಿ ಒಳರೋಗಿಯಾಗಿ ದಾಖಲು ಮಾಡಿ ಚಿಕಿತ್ಸೆ ನೀಡಲಾಗಿತ್ತು.

ಕಾಂ: ಕ್ಯಾದಗಿಯವರು ಸಿಪಿಐ(ಎಂ) ಪಕ್ಷದ ಸದಸ್ಯರಾಗಿ ಕಳೆದ ಸುಮಾರು 30 ವರ್ಷಗಳಿಂದ ದುಡಿಯುವ ಜನರನ್ನು ಸಂಘಟಿಸುತ್ತಾ ಅವರ ಚಳುವಳಿಗಳಿಗೆ ನೇತೃತ್ವ ನೀಡುತ್ತಾ ಬಂದಿದ್ದರು. ರಾಣೇಬೆನ್ನೂರ್ ನಗರದ ವಸತಿ ರಹಿತ ಬಡವರನ್ನು ಸಂಘಟಿಸಿ, ನಗರಸಭೆ ವ್ಯಾಪ್ತಿಯಲ್ಲಿದ್ದ ಸರ್ಕಾರಿ ಜಾಗವನ್ನು ಅತಿಕ್ರಮಣ ಮಾಡಿ, ಅಲ್ಲಿ ನಿವೇಶನಗಳನ್ನು ನಿರ್ಮಿಸಿ, ಆ ನಿವೇಶನಗಳಲ್ಲಿ ಗುಡಿಸಲುಗಳನ್ನು ಹಾಕಿಸಿ, ಗುಡಿಸಲು ವಾಸಿಗಳಿಗೆ ಹಕ್ಕು ಪತ್ರಗಳು ದೊರೆಯುವವರೆಗೂ ಕಾಮ್ರೆಡ್ ಕ್ಯಾದಗಿ ಅವರು ಹೋರಾಟ ನಡೆಸಿದರು. ಹೀಗೆ ರಚನೆಯಾದ ಬಡಾವಣೆಗೆ 'ಎಕೆಜಿ ಕಾಲೋನಿ' ಎಂದು ಅವರು ಇಟ್ಟ ಹೆಸರು ಈಗ ರಾಣೇಬೆನ್ನೂರ್ ನಗರಸಭಾ ದಾಖಲೆಗಳಲ್ಲಿ ಸೇರಿಕೊಂಡಿದೆ.

ಕೈ ಮಗ್ಗ ಸಹಕಾರಿ ಸಂಘಗಳಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರ ಹಾಗೂ ನೇಕಾರ ಕಾರ್ಮಿಕರ ಶೋಷಣೆಯ ವಿರುದ್ಧ ಕಾ: ಕ್ಯಾದಗಿ ಅವರು ನಡೆಸಿದ ಹೋರಾಟದಿಂದಾಗಿ ಅವರು ಅನೇಕ ಜನ ಪಟ್ಟಭದ್ರ ಹಿತಾಸಕ್ತಿಗಳ ಬೆದರಿಕೆಗೆ ಒಳಗಾಗಿದ್ದರು. ವಿದ್ಯುತ್ ಮಗ್ಗದ ನೇಕಾರ ಕಾರ್ಮಿಕರ ವೇತನ ಪರಿಷ್ಕರಣೆಗಾಗಿ ನ್ಯಾಯಾಲಯದಲ್ಲಿಯೂ ಅವರು ಹೋರಾಟದಿಂದಾಗಿ ಅವರು ಅನೇಕ ಜನ ಪಟ್ಟಭದ್ರ ಹಿತಾಸಕ್ತಿಗಳ ಬೆದರಿಕೆಗೆ ಒಳಗಾಗಿದ್ದರು. ವಿದ್ಯುತ್ ಮಗ್ಗದ ನೇಕಾರ ಕಾರ್ಮಿಕರ ವೇತನ ಪರಿಷ್ಕರಣೆಗಾಗಿ ನ್ಯಾಯಾಲಯದಲ್ಲಿಯೂ ಅವರು ಹೋರಾಟ ನಡೆಸಿ ಯಶಸ್ವಿಯಾಗಿದ್ದರು. ಕೆಲವು ವರ್ಷಗಳ ಹಿಂದೆ ಕೈ ಮಗ್ಗದ ನೇಕಾರರ ಬೇಡಿಕೆಗಳಿಗಾಗಿ ರಾಣೇಬೆನ್ನೂರಿನಿಂದ ಧಾರವಾಡ ಜಿಲ್ಲಾಧಿಕಾರಿ ಕಛೇರಿವರೆಗೆ ನಡೆಸಲಾದ 4 ದಿನಗಳ ಪಾದಯಾತ್ರೆಯ ನೇತೃತ್ವವನ್ನು ಅವರು ವಹಿಸಿದ್ದರು.

'ದುಡಿಯುವ ವರ್ಗದ ಪ್ರಾಣ ಮಿತ್ರ' ಜನಶಕ್ತಿ ಕನ್ನಡ ವಾರ ಪತ್ರಿಕೆ ಬಳಗವು ಕಾಂ: ಕ್ಯಾದಗಿ ಅವರಿಗೆ ಗೌರವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತದೆ.


ಪತ್ರಿಕೆಗೆ ನೀತಿ ಸಂಹಿತೆ

ಲಂಚಗಳ ಕುರಿತಾಗಿ ಬರೆಯಲೇಬೇಡಿ
ಕೋಮು ಜಗಳದ ಕುರಿತು ಹೊಗಹೊಗಳಿ ಹಾಡಿ
ಅಟ್ಟಹಾಸದಿ ಕ್ರೂರ ಗುಂಡಾಗಳು ಇಲ್ಲಿ
ಕುಪ್ಪಳಿಸಿ ಕುಣಿವಾಗ ಕಣ್ಮುಚ್ಚಿಕೊಳ್ಳಿ

- ವಿಡಂಬಾರಿ

ಇಎಂಎಸ್ ಭವನ ನಿಧಿ

ಎರಡನೇ ಹಂತದ ಸಂಗ್ರಹ



ಹಿಂದಿನ ಸಂಚಿಕೆಯಿಂದ		
ಹಿತೈಷಿಗಳು		ರೂ. 8,24,306.00
ಬೆಂಗಳೂರು ಜಿಲ್ಲಾ ಸಮಿತಿ ಮೂಲಕ ಐಟಿಸಿ ಕಾರ್ಮಿಕರು		5,00,000.00
ಧಾರವಾಡ ಜಿಲ್ಲಾ ಸಂ.ಸಮಿತಿ ಮೂಲಕ		5,500.00
ಮಂಜುನಾಥ ಎನ್.ಪೈ, ಬೆಳಗಾವಿ	1000	
ಆರ್.ಶ್ರೀಪತಿ, ಬೆಳಗಾವಿ	500	
ಎಸ್.ಜಿ.ದೇವುರಕರ, ಬೆಳಗಾವಿ	3000	
ಕೆ.ಪಿ.ರಾಯಚೂರು, ಹುಬ್ಬಳ್ಳಿ	750	
ವಿಮಾ ಸಂಗಾತಿಗಳು, ದಾಂಡೇಲಿ	1500	6750.00
ಗೋಪಿಕುಮಾರ್ ಎಂ. ಬೆಂಗಳೂರು, ರಾಜಶೇಖರ ಮೂಲಕ		1000.00
ಶಂಭುಲಿಂಗ ಸೊನ್ನದ, ಆಭರಣ ವ್ಯಾಪಾರಿಗಳು, ಸವದತ್ತಿ		500.00
ಒಟ್ಟು		13,38,056.00

ಚಂದಾದಾರ ಬಂಧುಗಳೇ, ಏಜೆನ್ಸಿದಾರರೇ, ಇನ್ನು ಡಿ.ಡಿ./ಎಂ.ಓ. ಮಾಡಿಸಲು ಓಡಾಡಬೇಕಿಲ್ಲ, ಕೋರ್ ಬ್ಯಾಂಕಿಂಗ್ ಸೌಲಭ್ಯ ಬಳಸಿ

ನೀವು 'ಜನಶಕ್ತಿ ಕನ್ನಡ ವಾರಪತ್ರಿಕೆ'ಗೆ ಚಂದಾಹಣ ಅಥವಾ ಏಜೆನ್ಸಿ ಬಿಲ್ ಪಾವತಿಸುವವರಾದರೆ ಈ ವಿಚಾರ ಗಮನಿಸಿ.

'ಜನಶಕ್ತಿ' ಕನ್ನಡ ವಾರಪತ್ರಿಕೆ ಯ ಖಾತೆಗೆ ನೀವು ನಿಮ್ಮ ಊರುಗಳಲ್ಲಿದ್ದೇ ನೇರವಾಗಿ ಹಣ ತುಂಬಬಹುದು. ಈ ಕೆಳಗೆ ಬ್ಯಾಂಕ್ ಅಕೌಂಟ್ ಸಂಖ್ಯೆ ನೀಡಲಾಗಿದೆ.

ನೀವು ಮಾಡಬೇಕಾದುದಿಷ್ಟೆ, ನಿಮ್ಮ ಊರಿನಲ್ಲಿರುವ ಯಾವುದೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (ಎಸ್‌ಬಿಎಂ) ಶಾಖೆಗೆ ಹೋಗಿ ಇಲ್ಲಿ ನೀಡಲಾಗಿರುವ ಹೆಸರಿನ, ಸಂಖ್ಯೆಯ ಖಾತೆಗೆ ಹಣ ತುಂಬಿ. ಮತ್ತು ಇದನ್ನು ಮರೆಯಬೇಡಿ.

ಈ ರೀತಿ ನೀವು ಹಣ ತುಂಬಿದ ಕೂಡಲೇ ದಯವಾಡಿ ಹಣ ತುಂಬಿದ ವಿವರ, ಉದ್ದೇಶವನ್ನು ಕಛೇರಿಯ ವಿಳಾಸಕ್ಕೆ ಒಂದು ಕಾರ್ಡ್ ಬರೆದು ತಿಳಿಸಿ. ಚಂದಾ ಆದರೆ ವಿಳಾಸ ನೀಡಿ. ಪತ್ರ ಕಛೇರಿಗೆ ತಲುಪಿರುವ ಬಗ್ಗೆ ಫೋನ್ ಮಾಡಿ ಖಚಿತ ಮಾಡಿಕೊಳ್ಳಿ.

ಈ ಸಂಬಂಧ ನೀವು ಸಂಪರ್ಕಿಸಬೇಕಾದದ್ದು ವೀರಣ್ಣ ಕಲ್ಮನಿ : 9480430594,

ಪತ್ರಿಕೆಯ ಕಾರ್ಯಾಲಯದ ವಿಳಾಸ:
ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು 560 027,

ಖಾತೆ ಹೆಸರು
Janashakthi Kannada Varapathrike'
ಜನಶಕ್ತಿ ಕನ್ನಡ ವಾರಪತ್ರಿಕೆ,

ಬ್ಯಾಂಕ್ ಖಾತೆ ಸಂಖ್ಯೆ: 64020446625
ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (ಎಸ್‌ಬಿಎಂ), ಸಂಪಂಗಿರಾಮನಗರ ಶಾಖೆ, ಬೆಂಗಳೂರು.

ಡಿ.ಡಿ. ಮಾಡಿಸುವಾಗ ಕೊಡಬೇಕಾಗುವ ಶುಲ್ಕವನ್ನು ಇಲ್ಲೂ ಭರಿಸಬೇಕಾಗುತ್ತದೆ. ಚಲನ್‌ನಲ್ಲಿ ಏಜೆನ್ಸಿದಾರರ ಅಥವಾ ಚಂದಾದಾರರ ಹೆಸರು ಹಾಕುವುದು ಮರೆಯಬೇಡಿ.

ಸಂಪಾದಕೀಯ

ಕಡಿವಾಣ ಅಗತ್ಯ

ಕಳೆದೆರಡು ವಾರಗಳಲ್ಲಿ ಕೋಮು ಸಾಮರಸ್ಯ ಕದಡಿ, ದ್ವೇಷದ ಕಿಚ್ಚು ಹೊತ್ತಿಸುವಂತಹ ಪ್ರಯತ್ನಗಳು ಸರಣಿ ರಾಜ್ಯದಲ್ಲಿ ಪುನರಾರಂಭಗೊಂಡಿರುವುದು ಅತ್ಯಂತ ಆತಂಕದ ಸಂಗತಿಯಾಗಿದೆ. ತಿಪಟೂರುನಲ್ಲಿ, ದಕ್ಷಿಣ ಕನ್ನಡದ ಸುರತ್ಕಲ್‌ನಲ್ಲಿ ಡಿಸೆಂಬರ್ 6ರ ಬಾಬ್ರಿ ಮಸೀದಿ ಧ್ವಂಸದ 'ವಿಜಯೋತ್ಸವ' 'ಕರಾಳದಿನಗಳ ಆಚರಣೆ' ಸಂದರ್ಭದಲ್ಲಿ ಗಲಭೆಗಳು ನಡೆದವು. ಇದೀಗ ವಿಜಾಪುರದ ಇಂಡಿಯಲ್ಲಿ ಹನಮಂತನ ವಿಗ್ರಹ ಭಗ್ನಗೊಳಿಸಲಾಗಿದೆಯೆಂದು ಭಜರಂಗದಳದವರ ಪ್ರತಿಭಟನೆ ಆರಂಭವಾಗಿದೆ. ಮಸೀದಿಯೊಂದರ ಹಿಂದೆ ಈ ದೇವಸ್ಥಾನ ಇದೆಯೆಂಬುದು ಪ್ರತಿಭಟನಾಕಾರರ ಆರೋಪದ ಮುಳ್ಳು ಎತ್ತ ತಿರುಗಲಿದೆಯೆಂದು ಬೇರೆ ಹೇಳಬೇಕಿಲ್ಲ.

ಈ ಒಂದೆರಡು ತಿಂಗಳ ಹಿಂದೆಯೇ ಸೇತು ಸಮುದ್ರಂ ವಿವಾದದಲ್ಲಿ ಇಬ್ಬರನ್ನು ಜೀವಂತ ದಹಿಸಿ ಫ್ಯಾಸಿಸ್ಟ್ ಪೋಗ್ರಾಂ ಮಾದರಿ ಅನುಸರಿಸಲಾಗಿದೆ. ಇಂತಹ ಹತ್ತಾರು ಗಲಭೆಗಳನ್ನು ಸ್ಫೋಟಿಸಬಲ್ಲ ದತ್ತ ಜಯಂತಿ ಆಚರಣೆಯು ಆರಂಭಗೊಂಡಿದೆ. ಜೊತೆಗೆ ಸೇತು ಸಮುದ್ರಂ ಯೋಜನೆ ವಿರೋಧಿಸಿ ನೂರಾರು ರಥಗಳು ರಾಜ್ಯದಲ್ಲಿ ಸಂಚರಿಸುತ್ತಿವೆ. 'ರಾಮಭಕ್ತಿ' ಯನ್ನು ಕೆರಳಿಸುತ್ತಿವೆ. ಇನ್ನೂ ಗುಜರಾತ್ ಮಾದರಿ ಪ್ರಯೋಗಶಾಲೆಯಾಗಿರುವ ಕರಾವಳಿಯ ಪ್ರಯೋಗಗಳು ನಿಂತಿಲ್ಲ. ಇವೆಲ್ಲವೂ ಏನೋ ಕಾರಣಗಳಿಗೆ ಸಂಭವಿಸಿದ ಘಟನೆಗಳಲ್ಲ... ಇದರ ಹಿಂದೆ ವ್ಯವಸ್ಥಿತವಾದ ಕೈವಾಡ ಇರುವುದಕ್ಕೆ ಸಂಶೋಧನೆಯೇನೂ ಬೇಕಿಲ್ಲ.

ಮೈತ್ರಿ ಪತನದಿಂದ ಸೃಷ್ಟಿಗೊಂಡ 'ಅನುಕಂಪ' ದ ಅಲೆ ಹಿಡಿದು ಅಧಿಕಾರ ವಂಚಿತರೆಂಬ ಮುಖವಾಡದಲ್ಲಿ ಬಹುಮತಗಳಿಸಿ ತಾನೇ ಅಧಿಕಾರ ಹಿಡಿಯಬೇಕೆಂಬುದು ಬಿಜೆಪಿಯ ಹೊಂಚು. ಬಿಜೆಪಿಯನ್ನು ಅಧಿಕಾರಕ್ಕೇರಿಸಲೇಬೇಕು ಎಂಬುದು ಆರ್.ಎಸ್.ಎಸ್. ನ ನಿರ್ಧಾರ. ಒಂದೆಡೆ ಬಿಜೆಪಿಯ ರಾಜಕೀಯ ಯಾತ್ರೆಗಳ ಮೂಲಕ ಪ್ರಯತ್ನಗಳದ್ದರೆ. ವಿಶ್ವಹಿಂದೂ ಪರಿಷತ್, ಭಜರಂಗದಳಗಳು ದತ್ತಜಯಂತಿ ರಾಮಸೇತುವೆ ಹೆಸರಿನಲ್ಲಿ ಕೋಮು ವಿಭಜನೆಯ ಪೂರ್ವಭಾವಿ ಮನೋಭೂಮಿಕೆ ಸೃಷ್ಟಿಸುತ್ತಾ ಹೊರಟಿವೆ. ಕೋಮುಗಲಭೆಗಳ ಮೂಲಕ ವಿಭಜನೆಯ ಧೃವೀಕರಣ ತಂದು 'ಮತ ಬ್ಯಾಂಕ್' ಸೃಷ್ಟಿಸಲು ಇನ್ನೊಂದೆಡೆ ಕಾರ್ಯಪ್ರವೃತ್ತರಾಗಿದ್ದಾರೆ. ಕರ್ನಾಟಕವನ್ನು ಹತ್ಯಾಕಾಂಡದ ಗುಜರಾತನ್ನಾಗಿಸಲು ಹಲವಾರು ವರ್ಷಗಳಿಂದ 'ತ್ರಿಶೂಲ' ಕಾರ್ಯಾಚರಣೆ ಆರಂಭಿಸಲಾಗಿದೆ. ಹಿಂದೂ ಸಮಾಜೋತ್ಸವಗಳ ಬಳಕೆ, ಸ್ಥಳೀಯವಾಗಿ ವಿವಾದ ಎಬ್ಬಿಸಿ ಗಲಭೆ ಎಬ್ಬಿಸುವುದು, ದಕ್ಷಿಣ ಭಾರತದ ಅಯೋಧ್ಯೆಯನ್ನಾಗಿಸಲು ಬಾಬಾಬುಡನ್‌ಗಿರಿ ಬಳಕೆ ಇದರಲ್ಲಿ ಪ್ರಮುಖವು. ಆದ್ದರಿಂದಲೇ ರಾಜಕೀಯ ದುರುದ್ದೇಶ ಸ್ಪಷ್ಟವಾಗಿರುವಾಗ ಸಾಮರಸ್ಯಕ್ಕೆ ಕೊಳ್ಳಿ ಇಡುವ ಘಟನೆಗಳು ಇನ್ನಷ್ಟು ನಡೆಯಬಹುದು ಎಂಬ ಪ್ರಶ್ನೆ ಆತಂಕ ನಾಗರೀಕರಿಗೆ ಅದರಲ್ಲೂ ಅಲ್ಪಸಂಖ್ಯಾತರಿಗೆ ಆತಂಕ ಸಹಜ.

ಇಂದಿನ ಪ್ರಶ್ನೆ ಇವುಗಳನ್ನು ಸರ್ಕಾರ ಹಾಗೂ ಜನತೆ ಹೇಗೆ ಎದುರಿಸುವುದು ಎನ್ನುವುದು. ಗಲಭೆಯ ಘಟನೆಗಳ ಆರೋಪಿಗಳನ್ನು ಪತ್ತೆ ಹಚ್ಚುವ ಪ್ರಯತ್ನಗಳು ಆಗಿರಬಹುದು. ಇದಕ್ಕಾಗಿ ಒತ್ತಡ ಹೂಡುವ ಇಲ್ಲವೇ ಬಿಡುವ ಎಂದಿನ 'ಕರ್ತವ್ಯ'ವನ್ನು ಆಡಳಿತ ಪಾಲಿಸಿರಬಹುದು. ಆದರೆ ನಿಜವಾದ ಆರೋಪಿಗಳು ಪತ್ತೆಯೂ ಆಗದೇ (!) ಅವರು ದುಷ್ಕರ್ಮಿಗಳಾಗಿ ತಪ್ಪಿಸಿಕೊಳ್ಳಬಹುದು, ಅಂತಹ ಸ್ಥಿತಿಯನ್ನು ಆಡಳಿತವೇ ನಿರ್ಮಿಸಬಹುದು. ಇಡೀ ಆಡಳಿತಯಂತ್ರವೇ ಕೋಮುವಾದಿಕರಣಗೊಂಡಿಲ್ಲ ಎಂಬುದು ನಿಜವಾದರೂ ಅವರ ದಬಾವಣೆ ಬಲ ಇರುವಲ್ಲಿ ಯಾವುದೂ ಅಸಾಧ್ಯವಿಲ್ಲ. ಪ್ರಸ್ತುತವಾಗಿ ಜನತೆಗೆ ಉತ್ತರದಾಯಿತನವಿರುವ ಸರ್ಕಾರವಿಲ್ಲ. ಆದಾಗ್ಯೂ ಜನರ ಜೀವ-ಜೀವನ, ಆಸ್ತಿಗೆ, ಶಾಂತಿ-ಸುವ್ಯವಸ್ಥೆ ರಕ್ಷಣೆಗೆ ಆಡಳಿತ ಯಂತ್ರ ವಹಿಸಬೇಕಾದ ಪಾತ್ರ ಅತಿ ಮಹತ್ವದ್ದು, ಹೀಗಾಗಿ ಶಾಂತಿ-ಸುವ್ಯವಸ್ಥೆ ಕಾಪಾಡಿ, ಗಲಭೆಗಳನ್ನು ಮುಂಜಾರೂಕತೆಯಿಂದ ತಡೆಯುವ, ಗಲಭೆಯಾದಾಗ ಅದನ್ನು ಹತ್ತಿಕ್ಕಿ ಶಿಕ್ಷೆಗೊಳಪಡಿಸುವ ಪ್ರಕ್ರಿಯೆ ನಿಷ್ಠುರವಾಗಿ, ನಿಷ್ಪಕ್ಷಪಾತವಾಗಿ ಮಾಡುವ ಹೊಣೆಗಾರಿಕೆ ಹೆಚ್ಚಿನದ್ದಾಗಿದೆ.


ಈಗೇನೋ ಗಲಭೆ ನಡೆದಲ್ಲಿ ಕ್ರಮ ಕೈಗೊಳ್ಳಲಾಗಿದೆಯೆಂದು ಹೇಳಲಾಗುತ್ತಿದೆ. ಇಂತಹ ಸ್ಥಿತಿಯನ್ನೆದುರಿಸಲು ಕೇವಲ ದೈನಂದಿನ ಎಚ್ಚರ ಸಾಲುವುದಿಲ್ಲ. ಆದ್ದರಿಂದ ರಾಜ್ಯಪಾಲರು ಇಡೀ ಆಡಳಿತ ಯಂತ್ರಕ್ಕೆ ಸೂಕ್ಷ್ಮತೆ ತಂದು ಚುರುಕುಗೊಳಿಸಿ, ಸದಾ ಕ್ರಿಯಾಶೀಲವಾಗಿರಲು, ಉದ್ಭವಿಸುವ ಸನ್ನಿವೇಶ ಎದುರಿಸಲು ಸನ್ನದ್ಧವಾಗಿರಬೇಕು. ಕೋಮುವಾದಿ ಶಕ್ತಿಗಳನ್ನು ಮಟ್ಟಹಾಕುವುದಾಗಿಯೂ, ಅಂತಹ ಕೃತ್ಯಗಳನ್ನು ಸಹಿಸುವುದಿಲ್ಲ ಎಂಬ ಸ್ಪಷ್ಟ ಸಂದೇಶ ರವಾನಿಸಬೇಕು. ಈಗಾಗಲೇ ಆಡಳಿತದಲ್ಲಿ ಪಾಲು ಪಡೆದು ಆಡಳಿತ ಯಂತ್ರದ ಮೇಲೆ ಪ್ರಭಾವ ಬೀರಿರುವ ಬಿಜೆಪಿ ಸಂಘ ಪರಿವಾರದ ಬುಸುಗುಡುವಿಕೆಯ ಹಿನ್ನಲೆಯಲ್ಲಿ ಹೆಚ್ಚಿನ ಎಚ್ಚರ ಅಗತ್ಯ. ಯಾಕೆಂದರೆ ಈಗಲೂ ಬಿಜೆಪಿ ಪ್ರಾಬಲ್ಯವಿರುವ ಹಲವಾರು ಜಿಲ್ಲೆಗಳಲ್ಲಿ ಪೋಲಿಸ್ ಇಲಾಖೆಯನ್ನು ಒಳಗೊಂಡು ಆಡಳಿತವನ್ನು ಕಾರ್ಯನಿರ್ವಹಣೆ ನಿಯಂತ್ರಿಸುವಂತಹ ಪ್ರಯತ್ನಗಳ ಇದ್ದೇ ಇವೆ.

★


ಈಗ ಮತ್ತೇ ಸಂಘಪರಿವಾರವು ಬಾಬಾಬುಡನ್‌ಗಿರಿಯ ಸೌಹಾರ್ದ ಸಂಸ್ಕೃತಿ, ಆಚರಣೆಗಳ ಮೇಲೆ ದಾಳಿ ಆರಂಭಿಸಿದೆ. ದತ್ತಜಯಂತಿ ಆಚರಿಸುವುದು ದತ್ತ ರಥಯಾತ್ರೆ, ಅನುಸೂಯ ಪೂಜೆ, ಶೋಭಾಯಾತ್ರೆ, ಗುಹೆಯಲ್ಲಿ ಅಥವಾ ಗಿರಿಯಲ್ಲಿ ದತ್ತ ವಿಗ್ರಹ ಪೂಜೆ ಹವನ-ಹೋಮಗಳು ಹಿಂದೆ ಎಂದೂ ಇಲ್ಲದೆ, ಸಂಘ ಪರಿವಾರವೇ ಹುಟ್ಟು ಹಾಕಿದ ಆಚರಣೆಗಳಾಗಿವೆ. ಇದು ಸುಪ್ರಿಂಕೋರ್ಟ್‌ನ ತೀರ್ಪಿಗೆ ವಿರುದ್ಧವಾದ ಆಚರಣೆಗಳಾಗಿವೆ. ಆದ್ದರಿಂದ ರಾಜ್ಯ ಸರ್ಕಾರ ಗಿರಿಯಲ್ಲಾಗಲಿ ಅಥವಾ ರಾಜ್ಯದ ಎಲ್ಲೇ ಆಗಲಿ ಬಾಬಾಬುಡನ್‌ಗಿರಿಯ 'ದರ್ಗಾಪೀಠ'ಕ್ಕೆ ಸಂಬಂಧಿಸಿ ಸಾಮರಸ್ಯ ಹಾಳುಗೆಡವುವ ಸಂಘ ಪರಿವಾರದ ಚಟುವಟಿಕೆಗಳನ್ನು ನಿಷೇಧಿಸಬೇಕು. 1975ರ ಹಿಂದಿನ ಆಚರಣೆಗಳಿಗಷ್ಟೇ ಅವಕಾಶವಿರಬೇಕು.

ಇಂದಿನ ರಾಜಕೀಯ ಸಂದರ್ಭದಲ್ಲಿ ಆಡಳಿತಾತ್ಮಕ ಕ್ರಮಗಳ ಜೊತೆಗೆ ವಿವಿಧ ರಾಜಕೀಯ ಪಕ್ಷ/ಶಕ್ತಿಗಳು ಅಲ್ಲಿ ಸಾಮರಸ್ಯ ಕಾಯಲು, ಸಂಘಪರಿವಾರದ ಹುನ್ನಾರ ವಿಫಲಗೊಳಿಸಲು ಕ್ರಿಯಾಶೀಲರಾಗಬೇಕಿದೆ. ಇವುಗಳನ್ನು ಜನರೆದುರು ತೆರೆದಿಡಬೇಕು. ಜನತೆಯ ಜೀವನದ ಸಂಕಷ್ಟಗಳನ್ನು ಮೂಲೆಗೆ ತಳ್ಳಿ ಹಾದಿ ತಪ್ಪಿಸುವುದರ ವಿರುದ್ಧ ಎಡ, ಜಾತ್ಯಾತೀತ ಶಕ್ತಿಗಳು ತೊಡಗಬೇಕು.

ವಲಸೆ ನಾಯಕರು ಎತ್ತ, ಏನು?



ಕರ್ನಾಟಕದಲ್ಲಿ ರಾಜಕಾರಣದಲ್ಲೀಗ 'ಆಯಾರಾಂ ಗಯಾರಾಂ'. ವಿಶೇಷ ಘಟನೆಗಳು ಘಟಿಸದಿದ್ದರೆ ಏನಿದ್ದರೂ ಇನ್ನಾರು ತಿಂಗಳಿನಲ್ಲಿ ವಿಧಾನಸಭೆಗೆ ಮಧ್ಯಂತರ ಚುನಾವಣೆಗಳು ನಡೆಯಬೇಕು. ಹೀಗಾಗಿ ಅಧಿಕಾರದ ಮೇಲೆ ಕಣ್ಣಿರಿಸಿರುವ ಬಹುತೇಕ ರಾಜಕೀಯ ಪಕ್ಷಗಳು ರಂಗ ತಾಲೀಮಿಗೆ ಇಳಿದಿವೆ. ಆದ್ದರಿಂದಲೇ ತಾವೇ ಬಹುಮತ ಪಡೆದು ಅಧಿಕಾರಕ್ಕೇರುವುದು ಎಂದು ಬಿಂಬಿಸಿಕೊಳ್ಳಲು ಹೆಣಗುತ್ತಿವೆ. ಅಧಿಕಾರ ದಾಹದಿಂದಲೇ ಬಳಲಿದ ಶಾಸಕರು-ನಾಯಕ ಮಹಾಶಯರು 'ಸುರಕ್ಷಿತ' ತಾಣಗಳನ್ನು ಅರಸುತ್ತಿದ್ದಾರೆ: ಇಂತಹ ವಲಸಿಗರು ಯಾರ ಕಡೆಗೆ ಹೋಗುವರೋ ಅವರೇ ಗೆಲ್ಲುವವರು ಎಂದೂ ಬಿಂಬಿಸಲು ಪ್ರಯತ್ನಗಳು ನಡೆಯುತ್ತಿವೆ. ಚುನಾವಣೆಗೆ ಹೋಗಿ ಜನತೆಯ ವಿಶ್ವಾಸಗಳಿಸಲು ಹಿಂಜರಿದ, ಅಂತಹ ಧೈರ್ಯವೂ ಇಲ್ಲದ, ಇವ್ಯಾವೂ ಇಲ್ಲದೇ ಹಾಗೇ ತೇಲಿ ದಡ ಸೇರಬಿಡಬೇಕು ಎಂಬ 'ಜನಪ್ರಿಯ ಜನಪ್ರತಿನಿಧಿಗಳು' ಇವರಾಗಿದ್ದರು ಎಂಬುದು ಬೇರೆ ಮಾತು. ಹೇಗಿದ್ದರು ಇಂತಹವರಿಗೆ ಹಾರ ತುರಾಯಿಗಳನ್ನು ಹಿಡಿದು ಕರೆದುಕೊಳ್ಳಲು ಕಾಯುತ್ತಿರುವವರು ವೇದಿಕೆ ಮೇಲೇರಿ ನಿಂತಿದ್ದಾರೆ. ಅಂತಹವರು ದೆಹಲಿಯಿಂದಲೂ ಹಾರಿ ಬಂದಿದ್ದಾರೆ!




ಎಂ.ಪಿ.ಪ್ರಕಾಶ್‌ರವರು 'ಸಮಾಜವಾದಿ' ಗಳೆಂದೂ, 'ಮುತ್ಸದ್ದಿ' ಗಳೆಂದೂ ಬಣ್ಣಿಸಲಾಗುತ್ತಿದೆ. ರಾಜಕಾರಣವನ್ನು ಗುತ್ತುಗಾರಿಕೆಯಿಂದ ಮಾಡಬಲ್ಲ, ಮಾತನಾಡಬಲ್ಲವರೆಂದೂ ಪ್ರಶಂಸೆಗೆ ಒಳಗಾದವರು! 'ಸಾಹಿತ್ಯ-ರಾಜಕಾರಣದ' ಗತ್ತುಗಾರಿಕೆ ಬಲ್ಲವರು ಎಂಬುದು ಸಂಕ್ಷಿಪ್ತ ಅರ್ಥ. ತಮ್ಮ ಶಕ್ತಿ ಹಾಗೂ ಸಾಧ್ಯತೆಗಳ ಬಗ್ಗೆ ವಾಸ್ತವಿಕ ಅರಿವಿದ್ದು ಬಹಳಷ್ಟು ಸಾರಿ ಎಷ್ಟೇ ಇರುಸು ಮುರುಸು, ಪ್ರಸಂಗಗಳು ಎದುರಾದರೂ ಅವುಡುಗಚ್ಚಿ ಅನುಭವಿಸುತ್ತಾ ಬಂದವರು, ಸಂಕಟಗಳನ್ನು ನುಂಗಿಕೊಂಡವರು ಎನ್ನುವವರು ಇದ್ದಾರೆ. ಹಾಗೆಯೇ ಅನುಕೂಲ ಸಿಂಧು ರಾಜಕಾರಣಕ್ಕೆ ಪಕ್ಕಾಗುವ, ಅಧಿಕಾರದ ಎಲ್ಲಾ ಮಗ್ಗಲುಗಳನ್ನು ಒಂದು ಕಟಿಬಂಧದಲ್ಲಿ ಕಾಣುವ 'ಪ್ರಾಯೋಗಿಕತೆ' ಅವರಲ್ಲಿ ಎನ್ನುವವರೂ ಇದ್ದಾರೆ.

ಇಂತಹ 'ಸಜ್ಜನಿಕೆಯ' ಹಿರಿಯ ರಾಜಕಾರಣಿ ಈಗ 'ಬಂಡಾಯ' ವೆದ್ದು ಆಶ್ಚರ್ಯ ಹುಟ್ಟಿಸಿದ್ದಾರೆ! ಈ 'ಬಂಡಾಯ' ದ ಧ್ವನಿಗೆ ಮೊದಲು 16 ಶಾಸಕರು, 5 ವಿಧಾನಪರಿಷತ್ ಸದಸ್ಯರು ಜೊತೆಗೂಡಿಸಿದ್ದರು. (ಈಗ ಅವರ ಸಂಖ್ಯೆ ಇಳಿದಿದೆ) ಸಂಡೂರು ಮಹಾರಾಜರ ವಿರುದ್ಧ ಭೂಮಿಗಾಗಿ ಗೇಣಿದಾರರು ಹೋರಾಟ ನಡೆಸುತ್ತಿದ್ದಾಗ 'ಬಂಡಾಯ' ಎದ್ದ ಬಳಿಕ ಈಗಿನದು 'ದೊಡ್ಡ ಬಂಡಾಯವೇ'! ಇರಬಹುದು.

ಈಗ ಬಂಡಾಯ ಎದ್ದಿರುವುದು ತಾವಿದ್ದ ಜೆಡಿ(ಎಸ್)ನ ನಾಯಕತ್ವದ ವಿರುದ್ಧ. ಹೆಚ್.ಡಿ.ದೇವೇಗೌಡದ ಕುಟುಂಬದ ರಾಜಕಾರಣದ ವಿರುದ್ಧ, ಪಕ್ಷದೊಳಗೆ ಉಸಿರುಗಟ್ಟಿಸುವ, ಪ್ರಜಾಪ್ರಭುತ್ವವೇ ಇಲ್ಲದ ಸ್ಥಿತಿಯ ವಿರುದ್ಧ ಎಂದು ಹೇಳಿದ್ದಾರೆ. ಇವರ ಮನವೊಲಿಸಿ, ಜೆಡಿ(ಎಸ್) ನಲ್ಲೇ ಉಳಿಸಿಕೊಳ್ಳಲು ದೇವೇಗೌಡರು, ಕುಮಾರಸ್ವಾಮಿಯವರು ನಡೆಸಿದ ರಾಯಭಾರತ್ವ ಯಶಸ್ವಿಯಾಗಲಿಲ್ಲ. 'ತಾವೀಗ ಬಹುದೂರ ಬಂದಿದ್ದು ಹಿಂತಿರುಗಲು ಸಾಧ್ಯವಿಲ್ಲ' ಎಂದೇ ಎಂ.ಪಿ.ಪಿ.ಯವರು ಹೇಳುತ್ತಿದ್ದಾರೆ. 'ಎಷ್ಟು ದೂರ' ಎಂಬುದು ಯಾರ/ವ ಪಕ್ಷದ ಬಾಗಿಲೊಳಗೆ ಎಂದು ಹಾದು ಹೋಗಲಿದ್ದಾರೆ ಎಂದಾಗಲೇ ತಿಳಿಯಬಹುದು.

ಪ್ರಕಾಶ್‌ರವರು ಬಂಡಾಯ ಏಳಬೇಕಾಗಿದ್ದ ಹಲವು ಸಂದರ್ಭಗಳು ಹಿಂದೆ ಬಹಳಷ್ಟು ಇದ್ದವು. ಹಿಂದೇಕೆ ತೀರಾ ಇತ್ತೀಚೆಗೆ ಜನಾದೇಶಕ್ಕೆ ವಿರುದ್ಧವಾಗಿ ಜೆಡಿ(ಎಸ್) ಪಕ್ಷದ ಪ್ರಮುಖ ಬಣ ಕೋಮುವಾದಿ ಬಿಜೆಪಿಯೊಂದಿಗೆ ಕೈಜೋಡಿಸಿದಾಗ ಎಂ.ಪಿ.ಪಿ.ಯೇ ಶಾಸಕಾಂಗ ಪಕ್ಷದ ನಾಯಕನಾಗಿ ಉಪಮುಖ್ಯಮಂತ್ರಿಯಾಗಿದ್ದರು. ಆಗ ಅನಿವಾರ್ಯವಾಗಿ ವಿರೋಧದ ಮಾತು ಆಡಿದ್ದರು. ನಂತರದಲ್ಲಿ ಜೆಡಿ(ಎಸ್)- ಬಿಜೆಪಿ ಸರ್ಕಾರ ರಚನೆಗೊಂಡು ಕಾರ್ಯಾರಂಭಿಸುತ್ತಿವಂತೆಯೇ ಬಂದ ಆಹ್ವಾನವನ್ನು ಸ್ವೀಕರಿಸಿ ಸಚಿವರಾಗಿ, ಗೃಹ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಹೀಗಿರುವಾಗಲೇ ಕೆಲವು ಸಂದರ್ಭಗಳಲ್ಲಿ ತಮ್ಮಲ್ಲೇ ಭಿನ್ನಾಭಿಪ್ರಾಯವೆದ್ದಾಗ ರಾಜಕೀಯದಿಂದ ನಿವೃತ್ತರಾಗಿವುದಾಗಿ ಹೇಳುವ ಮೂಲಕ ಅತೃಪ್ತಿ ಹೊರಗೆಡುಹಿದರು, ಇದಕ್ಕೆ ದೇವೇಗೌಡರಿಂದ ಬೀಳ್ಕೊಡುಗೆ ಉತ್ತರವನ್ನು ಪಡೆದು ಕಾಲು ಹಾಕಿದರು. ಈ ಭಿನ್ನಾಭಿಪ್ರಾಯಗಳಿಗೆ ನಿಜ ಕಾರಣ ಏನು ಎಂಬುದು ತಿಳಿಯಬೇಕಷ್ಟೇ. ಅಂತೂ ಬಳ್ಳಾರಿ ಜಿಲ್ಲೆಯ ರಾಜಕೀಯದಲ್ಲಿ, ಗೃಹ ಖಾತೆಯಲ್ಲಿ ಯಾರ ಮಾತು ನಡೆಯಬೇಕು ಎಂಬುದು ಇದರಲ್ಲಿ ಒಂದಿರಬಹುದು. ಇಲ್ಲಿ ಮಾತು ಎಂಬುದಕ್ಕೆ ಕಬ್ಬಿಣದ ತೂಕವಿರಬಹುದು!

'ಬಂಡಾಯ' ಎನ್ನುತ್ತಿರುವ ಬಗ್ಗೆ ಇದು ಕೇವಲ ಹಿಂತಿರುಗಿ ನೋಡಿದಾಗ ಕಾಣುವ ತತ್‌ಕ್ಷಣದ ಝಲಕ್ ಅಷ್ಟೇ. ಮುಖ್ಯ ಪ್ರಶ್ನೆ ಬಂಡಾಯ ಏಳಲೇಬೇಕಾದಾಗ, ನಾಡಿನ ಹಾಗೂ ಜನತೆಯ ಹಿತರಕ್ಷಣೆ ಪ್ರಶ್ನೆ ಬಂದಾಗ ಏಳದ ಪ್ರಕಾಶ್‌ರವರು ಈಗ ಬಂಡಾಯ ಎದ್ದಿದ್ದಾರೆ. ಅಂದರೆ ಜೆಡಿ(ಎಸ್) ಮತ್ತು ಬಿಜೆಪಿಯ ಸಂದರ್ಭಸಾಧಕ ಮೈತ್ರಿ ಪತನವಾಗಿ ಜನ ಒಂದು ನಿಟ್ಟಿಸಿರು ಬಿಟ್ಟಿರುವ ನೆಮ್ಮದಿಯ ಸಂದರ್ಭದಲ್ಲಿ ಎಂಬುದು ಮುಖ್ಯವಾಗುತ್ತದೆ. ಒಂದೊಮ್ಮೆ ಸರ್ಕಾರ ಪತನವಾದಾಗ ಹೇಗೋ ಒಂದು ಸರ್ಕಾರವಿರಲಿ, ಅದರಡಿ ಅಧಿಕಾರ ಇರಲಿ ಎಂದು



ಪುಟ 15ಕ್ಕೆ

ರೈತ ಕಾರ್ಮಿಕರು ರಾಜಕೀಯದಲ್ಲಿ ನಿರ್ಣಾಯಕ ಪಾತ್ರ ವಹಿಸಬೇಕು

ಮೈಸೂರು ಸಿಪಿಐ(ಎಂ) ಜಿಲ್ಲಾ ಸಮ್ಮೇಳನದ ಆಶಯ

ರಾಜ್ಯದಲ್ಲಾದ ಹಲವಾರು ರಾಜಕೀಯ ಸ್ಥಿತ್ಯಂತರಗಳಿಗೆ ಮೈಸೂರು ಜಿಲ್ಲೆಯೂ ಒಳಗಾಗಿದ್ದು ಪಕ್ಷಗಳ ಜನಬೆಂಬಲದಲ್ಲಿ ಏರಿಳಿತಗಳು, ವೈಪರಿತ್ಯಗಳು ಉಂಟಾಗಿವೆ. ಜಿಲ್ಲೆಯ ರಾಜಕಾರಣದಲ್ಲಿ ಜಾತಿಯೇ ಪ್ರಧಾನ ಅಂಶವಾಗಿದ್ದು ಪಕ್ಷಗಳ ಸಾಮರ್ಥ್ಯವು ಜಾತಿಗಳ ಸಮೀಕರಣವನ್ನು ಅವಲಂಬಿಸಿದೆ. ಸ್ಥಗಿತಗೊಂಡಿರುವ ಕಾಂಗ್ರೆಸ್, ಜನತಾದಳ (ಜಾ)....ದ ಅಬ್ಬರಗಳ ಮಧ್ಯೆ ಕೋಮುವಾದಿ ಬಿಜೆಪಿಯ ಪ್ರಭಾವ ಇಳಿಮುಖವಾಗಿರುವುದನ್ನು ಇತ್ತೀಚಿನ ಚುನಾವಣೆಗಳು ಸಾಬೀತುಪಡಿಸಿವೆ. ವಿರಾಟ್ ಹಿಂದೂ ಸಮಾವೇಶ. ಗೋಯಾತ್ರೆಗಳನ್ನು ಸಂಘಟಿಸಿದ್ದರೂ ಅದರ ರಾಜಕೀಯ ಲಾಭವನ್ನು ಬಿಜೆಪಿಗೆ ಪಡೆದುಕೊಳ್ಳಲಾಗಿಲ್ಲ. ಹಲವಾರು ಮುಖವಾಡಗಳ ಸಂಘಪರಿವಾರದ ಸಂಘಟನೆಗಳು ಆಗಾಗ ಕೋಮುವಾದದ ವಿಷವನ್ನು ಕಕ್ಕುತ್ತಿದ್ದರೂ ಜನರನ್ನು ಪ್ರಚೋದಿಸಲಾಗಿಲ್ಲ. ಇದೇ ಸಂದರ್ಭದಲ್ಲಿ ಅಲ್ಪಸಂಖ್ಯಾತ ಕೋಮುವಾದವು ತನ್ನ ನೆಲೆಯನ್ನು ಆ ಸಮುದಾಯಗಳ ಮಧ್ಯೆ ವಿಸ್ತರಿಸುತ್ತಿರುವುದೂ ಆತಂಕಕಾರಿಯಾಗಿದೆ. ರಾಜ್ಯದಲ್ಲಿ ಆಡಳಿತ ನಡೆಸಿದ ಮೂರು ಪಕ್ಷಗಳಾದ ಕಾಂಗ್ರೆಸ್, ಜನತಾದಳ, ಬಿಜೆಪಿ ಯಾವತ್ತೂ ಜಿಲ್ಲೆಯ ಜನರ ನೈಜ ಸಮಸ್ಯೆಗಳ ಬಗ್ಗೆ ಗಮನಹರಿಸದೇ ಮೈಸೂರಿನ ಸುತ್ತಮುತ್ತ ಭೂಮಿ ಖರೀದಿಸುವಲ್ಲೇ ಮಗ್ನರಾದರು. ಬಿ.ಜೆ.ಪಿ ಹಾಗೂ ದಳದ ಬಹುತೇಕ ನಾಯಕರು ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿದ್ದಾರೆ.

ಕೃಷಿ ಬಿಕ್ಕಟ್ಟು ಗಿರಿಜನರ ಪಾಡು

ಜಿಲ್ಲೆಯಲ್ಲಿ ಕೃಷಿಯ ಬಿಕ್ಕಟ್ಟು ತೀವ್ರವಾಗಿದೆ. ಎರಡು ಜಲಾಶಯಗಳಿದ್ದರೂ ಮಳೆಯಾಧಾರಿತ ಕೃಷಿಯನ್ನು ಅವಲಂಬಿಸಿರುವ ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ರೈತರು ತೀವ್ರ ಸಂಕಷ್ಟಕ್ಕೊಳಗಾಗಿದ್ದಾರೆ. ಬ್ಯಾಂಕುಗಳು ಕೃಷಿ ಚಟುವಟಿಕೆಗೆ ಸಾಲವನ್ನು ನಿರಾಕರಿಸುವ, ಕೃಷಿ ಇಲಾಖೆಯು ಸಕಾಲಕ್ಕೆ ಬಿತ್ತನೆಬೀಜ ವಿತರಣೆ ಮಾಡದೆ ಇರುವ ಸಂದರ್ಭಗಳು ಆ ತಾಲ್ಲೂಕಿನ ರೈತರ ಆಕ್ರೋಶಕ್ಕೆ ಕಾರಣವಾಗಿವೆ. ಗಿರಿಜನರ ಸಾಂದ್ರತೆ ಹೆಚ್ಚಾಗಿರುವ ಕಾಡಂಚಿನ ಈ ತಾಲ್ಲೂಕಿನಲ್ಲಿ ಅವರನ್ನು ಪುನರ್ವಸತಿಯ ಹೆಸರಿನಲ್ಲಿ ಒಕ್ಕಲೆಬ್ಬಿಸುವ, ಅರಣ್ಯದ ಉಪ ಉತ್ಪನ್ನಗಳ ಸಂಗ್ರಹಣೆಯನ್ನು ನಿರಾಕರಿಸುವ ಘಟನೆಗಳಾಗಿವೆ. ಅರಣ್ಯವನ್ನು ಪ್ರವೇಶಿಸಲು ಯತ್ನಿಸಿದ ಗಿರಿಜನರ ಮೇಲೆ ಅರಣ್ಯ ಸಿಬ್ಬಂದಿ ಗುಂಡು ಹಾರಿಸಿದ ವರದಿಗಳಿವೆ. ಬಡತನ, ನಿರುದ್ಯೋಗಗಳು ಗಿರಿಜನರನ್ನು ಕಾಡುತ್ತಿದ್ದು ಜೀವನ ನಿರ್ವಹಣೆಗೆ ಬಾಲಕಿಯರನ್ನೇ ಮಾರಾಟ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ತಂಬಾಕು, ಕಬ್ಬು ಬೆಳೆಗಾರರು ಪ್ರತಿವರ್ಷವೂ ಬೆಲೆ ನಿಗದಿಯಲ್ಲಿ ಅನ್ಯಾಯವನ್ನು ಅನುಭವಿಸುತ್ತಿದ್ದಾರೆ.

ನಂಜನಗೂಡಿನಲ್ಲಿ ಕಾರ್ಮಿಕ ಚಳುವಳಿಯ ಮುನ್ನಡೆ

ಜಿಲ್ಲೆಯ ನಂಜನಗೂಡು ತಾಲ್ಲೂಕಿನಲ್ಲಿ ಬೆಳೆದುಬರುತ್ತಿರುವ ಕಾರ್ಮಿಕವರ್ಗದ ಹೋರಾಟಗಳನ್ನು ವರ್ಗ ದೃಷ್ಟಿಕೋನದಲ್ಲಿ ವಿಶ್ಲೇಷಿಸಿ ಕಾರ್ಮಿಕರ ರಾಜಕೀಯ ಪ್ರಜ್ಞೆಯನ್ನು ಹೆಚ್ಚಿಸುವ ಅವಶ್ಯಕತೆ ಇದೆ. ಕಾರ್ಖಾನೆ ಮಾಲೀಕರ ದಬ್ಬಾಳಿಕೆ ಹಾಗೂ ಅವರ ಪರವಾಗಿ ವರ್ತಿಸುವ ಸ್ಥಳೀಯ ರಾಜಕೀಯ ಮುಖಂಡರು, ಸರ್ಕಾರದ ಆಡಳಿತಯಂತ್ರ ಎಲ್ಲವೂ ಕಾರ್ಮಿಕರ ಅನುಭವದಲ್ಲಿದ್ದು ಅವರಿಗೆ ಸಿ.ಪಿ.ಐ(ಎಂ) ಪಕ್ಷ ಮಾತ್ರ ತಮ್ಮ ಹಿತಾಸಕ್ತಿಯನ್ನು ಪ್ರತಿನಿಧಿಸುತ್ತದೆ ಎನ್ನುವುದನ್ನು ಮನದಟ್ಟು ಮಾಡಿಕೊಡಲು ಇದು ಸೂಕ್ತ ಸಮಯವಾಗಿದೆ. ಕಾರ್ಮಿಕರು ಜಾತಿಯ, ಬಂಡವಾಳಶಾಹಿ ಸಮಾಜದ ಸೆಳೆತಗಳಿಗೆ ಒಳಗಾಗದೇ ಇರುವಂತೆ ಮಾಡಲು ಒಂದು ಮನೋಭೂಮಿಕೆಯನ್ನು ಸಂಘಟಿತ, ಹೋರಾಟಗಳ ಮೂಲಕವೇ ಸಿದ್ಧಪಡಿಸಬೇಕಾದ ಅವಶ್ಯಕತೆ ಇದೆ.

ಜಿಲ್ಲೆಯಲ್ಲಿ ದಲಿತರ ಆರ್ಥಿಕ ಸ್ಥಿತಿಗತಿಗಳು ಸಾಮಾಜಿಕ ತಾರತಮ್ಯದ ಬಗ್ಗೆ ಹಾಗೂ ಈ ಸಮಸ್ಯೆಗಳ ಹುಟ್ಟಿಗೆ ಕಾರಣವಾಗಿರುವ ಪರಂಪರಾಗತ ಉಳಿಗಮಾನ್ಯ ಮೌಲ್ಯಗಳ ವಿರುದ್ಧ ನಿರಂತರ ಸಂಘರ್ಷವನ್ನು ನಡೆಸುವ ಅವಶ್ಯಕತೆ ಇದೆ.

ನಗರ ಪ್ರದೇಶದಲ್ಲಿ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳ ವಿರುದ್ಧ ನಡೆಯುತ್ತಿರುವ ಚಳುವಳಿಗಳಲ್ಲಿ ಹೊಸ ಹೊಸ ಜನವಿಭಾಗಗಳು ಬಂದುಸೇರುತ್ತಿವೆ. ಹೀಗೆ ಹೋರಾಟನಿರತ ಜನವಿಭಾಗಗಳ ಮಧ್ಯೆ ಸಮನ್ವಯತೆಯನ್ನು ಸಾಧಿಸಿ ಸೂಕ್ತ ಮಾರ್ಗದರ್ಶನ ನೀಡಬೇಕಿದೆ. ಜಿಲ್ಲೆಯ ದುಡಿಯುವ ವರ್ಗಗಳ ಸಮಸ್ಯೆಯನ್ನು ಪರಿಹರಿಸುವಲ್ಲಿ ಬೂರ್ಜ್ವಾ ರಾಜಕೀಯ ಪಕ್ಷಗಳು ವಿಫಲವಾಗಿದ್ದು, ಪರ್ಯಾಯ ರಾಜಕೀಯದ ಹುಡುಕಾಟದಲ್ಲಿದ್ದಾರೆ. ಜಿಲ್ಲೆಯ ಜನರ ಮುಂದಿರುವ ಸವಾಲುಗಳನ್ನು ಕೈಗೆತ್ತಿಕೊಂಡು, ಬೆಳೆದುಬರುತ್ತಿರುವ ಹೋರಾಟಗಳಿಗೆ ನಾಯಕತ್ವ ಕೊಡುವುದಕ್ಕೆ ಸನ್ನದ್ಧವಾಗಿ ಕಾರ್ಯಕ್ರಮ ರೂಪಿಸಬೇಕಿದೆ.

ಈ ಎಲ್ಲ ಅಂಶಗಳನ್ನು ಕುರಿತು ಹಾಗೂ ಒಟ್ಟಾರೆ ಮೈಸೂರು ಜಿಲ್ಲೆ ರಾಜಕೀಯ, ಸಾಮಾಜಿ, ಆರ್ಥಿಕ ಪರಿಸ್ಥಿತಿಯನ್ನು ಕುರಿತು ನವೆಂಬರ್ 25 ಮತ್ತು 26ರಂದು ಹುಣಸೂರಿನಲ್ಲಿ ನಡೆದ ಸಿಪಿಐ(ಎಂ) ಪಕ್ಷ 19ನೇ ಜಿಲ್ಲಾ ಸಮ್ಮೇಳನದಲ್ಲಿ ಚರ್ಚಿಸಲಾಯಿತು ಹಾಗೂ ಈ ವಾಸ್ತವಿಕ ಪರಿಸ್ಥಿತಿಯಲ್ಲಿ ಜನರ ಸಮಸ್ಯೆಗಳ ಆಧಾರದಲ್ಲಿ ಬಲಿಷ್ಟ ಹೋರಾಟವನ್ನು, ಕಮ್ಯೂನಿಸ್ಟ್ ಪಕ್ಷದ ಸಂಘಟನೆಯನ್ನು ಕಟ್ಟಿ ಬೆಳೆಸಲು ನಿರ್ಧರಿಸಲಾಯಿತು.

ಸಮ್ಮೇಳನದ ಉದ್ಘಾಟನೆಗೆ ಪೂರ್ವಭಾವಿಯಾಗಿ ನಡೆದ ಬೃಹತ್ ರ‍್ಯಾಲಿ ಹಾಗೂ ಬಹಿರಂಗ ಸಭೆಗಳು ಸಮ್ಮೇಳನಕ್ಕೆ ವಿದ್ಯುಕ್ತ ಚಾಲನೆಯನ್ನು ನೀಡಿದವು. ಜಿಲ್ಲೆಯ ಶ್ರಮಿಕವರ್ಗದ ರಾಜಕೀಯ ಒತ್ತಾಸೆಯನ್ನು ಸಮರ್ಥವಾಗಿ ಬಿಂಬಿಸಿದ ನೂರಾರು ಜನರ ಮೆರವಣಿಗೆ ಹುಣಸೂರು ಪಟ್ಟಣದ ಮುಖ್ಯ ಬೀದಿಗಳನ್ನು ಹಾದು ಪುರಭವನದ ಮೈದಾನದಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು. ಬಹಿರಂಗ ಸಭೆಯನ್ನು ಉದ್ದೇಶಿಸಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್, ರಾಜ್ಯಸಮಿತಿ ಸದಸ್ಯೆ ವರಲಕ್ಷ್ಮಿಯವರು ಮಾತನಾಡಿದರು. ಅಧ್ಯಕ್ಷತೆಯನ್ನು ಮೈಸೂರು ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿ ಯಾಗಿದ್ದ ಎನ್.ಎಸ್.ಪ್ರಭಾಕರ್ ವಹಿಸಿದ್ದರು. ಜಿಲ್ಲೆಯ ರೈತ, ಕಾರ್ಮಿಕ, ನಗರವಾಸಿ ಮಧ್ಯಮವರ್ಗದವರ ಸಮಸ್ಯೆಗಳನ್ನು ಪರಿಹರಿಸುವಂತೆ ಆಗ್ರಹಿಸಿ 30 ನಿರ್ಣಯಗಳನ್ನು ಸಮ್ಮೇಳನವು ಅಂಗೀಕರಿಸಿತು. ಮೈಸೂರು ನಗರದಲ್ಲಿ ಜನವರಿ 21ರಿಂದ 24, 2008ರಲ್ಲಿ ನಡೆಯಲಿರುವ ಸಿಪಿಐ(ಎಂ) ಪಕ್ಷದ ಕರ್ನಾಟಕ ರಾಜ್ಯ ಸಮ್ಮೇಳನವನ್ನು ಯಶಸ್ವಿಗೊಳಿಸಬೇಕೆಂದು ಹಾಗೂ ಸಮ್ಮೇಳನದ ಪೂರ್ವಭಾವಿ ಪ್ರಚಾರವನ್ನು ಜಿಲ್ಲೆಯಾದ್ಯಂತ ವ್ಯಾಪಕವಾಗಿ ನಡೆಸಬೇಕೆಂದು ಸಮ್ಮೇಳನ ಒಕ್ಕೊರಲಿನಿಂದ ತೀರ್ಮಾನಿಸಿತು.

ಸಮ್ಮೇಳನದಲ್ಲಿ ಮೈಸೂರು ಜಿಲ್ಲಾ ಸಂಘಟನಾ ಸಮಿತಿಗೆ 8 ಜನ ಸದಸ್ಯರನ್ನು ಆಯ್ಕೆ ಮಾಡಲಾಗಿದೆ. ಹೊಸದಾಗಿ ಆಯ್ಕೆಯಾದ ಸಮಿತಿ ಸದಸ್ಯರು ಜಿ.ಜಯರಾಂ ಅವರನ್ನು ಕಾರ್ಯದರ್ಶಿಯಾಗಿ ಆಯ್ಕೆ ಮಾಡಿದರು.

ಪ್ರಮುಖ ನಿರ್ಣಯಗಳು

ರೈತರಿಗೆ ಬ್ಯಾಂಕುಗಳಿಂದ ಸಮರ್ಪಕ ಸಾಲ ಒದಗಿಸಬೇಕು, ಸಕಾಲಕ್ಕೆ ಬಿತ್ತನೆ ಬೀಜ ಪೂರೈಸಬೇಕು, ಗಿರಿಜನರಿಗೆ ಅರಣ್ಯ ಪ್ರವೇಶವನ್ನು ನಿರ್ಬಂಧಿಸಬಾರದು ಹಾಗೂ ಅರಣ್ಯ ಉಪ ಉತ್ಪನ್ನಗಳ ಮೇಲಿನ ಅವರ ಹಕ್ಕನ್ನು ನಿರಾಕರಿಸಬಾರದು, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಜಿಲ್ಲೆಯಲ್ಲಿ ಜಾರಿ ಮಾಡಬೇಕು, ಕಬ್ಬು ಬೆಳೆಗಾರರ ಸಮಸ್ಯೆ ಪರಿಹರಿಸಬೇಕು, 'ತ್ತಿಬೀಜದ ವಿತರಣೆಯನ್ನು ಸಮರ್ಪಕಗೊಳಿಸಬೇಕು, ತಂಬಾಕು ಬೆಳೆಗಾರರಿಗೆ ಲಾಭದಾಯಕ ಬೆಲೆ ನಿಗದಿಪಡಿಸಬೇಕು, ಕೋಟೆ, ಹುಣಸೂರು ಸೇರಿದಂತೆ ಹತ್ತಿ ಮಾರುಕಟ್ಟೆ ಸ್ಥಾಪನೆಯಾಗಬೇಕು, ಹುಣಸೂರು, ಪಿರಿಯಾ ಪಟ್ಟಣಗಳಲ್ಲಿ ಕೈಗಾರಿಕಾ ವಲಯವನ್ನು ಸ್ಥಾಪಿಸಬೇಕು, ಕಾರ್ಮಿಕರ ಮೇಲಿನ ಅವ್ಯಾಹತ ದಾಳಿ ಕೊನೆಯಾಗಬೇಕು, ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಬೇಕು.

“ಕನ್ನಡ ಸಾಸ್ತ್ರಿ ಬಾಸೆ ಆಯ್ತಂತೆ ಔದಾ?”

“ ಕನ್ನಡ ಸಾಸ್ತ್ರಿ ಬಾಸೆ ಆಯ್ತಂತೆ ಔದಾ?”

“ಎಂಕ, ಕನ್ನಡ ಸಾಸ್ತ್ರಿ ಬಾಸೆ ಆಯ್ತಂತೆ ಔದೇನ್ಲ?”

“ಇನ್ನೂ ಇಲ್ಲ ಕಣ್ಲಾ ನಾಣಿ”

“ಏ ಅದೇನೋ ಆಯ್ತಂತೆ ಅಂತ ಏಳ್ತಿದ್ರು”

“ಇಲ್ಲ ಬಾಳ ಓರಾಟ ಮಾಡಿ ಅಂತೂ, ಪಾರ್ಲಿಮೆಂಟಲ್ಲಿ ಚರ್ಚೆಗೆ ಬಂತು ಇಸ್ಯ. ಒಂದು ಸಮಿತಿ ಮಾಡೌವ್ರೆ. ಔದೋ ಅಲ್ವೋ ಅಂತ ಕಂಡು ಹಿಡಿಯಾಕೆ”.

“ಅಲ್ಲ ಸಾಸ್ತ್ರಿ ಬಾಸೆ ಮಾಡಿ ಅಂತ ಇಂಗೆ ಓರಾಟ ಮಾಡದು ಸರಿನಾ?

“ಯಾಕ್ಲ ತಪ್ಪೇನೈತೆ?”


“ಅಂಗಲ್ಲ ಆಮೇಲೆ ಆಚಾರ್ರು ಬಾಸೆ ಮಾಡಿ, ಬಟ್ರು ಬಾಸೆ ಮಾಡಿ, ಗೌಡ್ರು ಬಾಸೆ ಮಾಡಿ, ಈರಸೈವರ ಬಾಸೆ ಮಾಡಿ ಅಂತ ಓರಾಟಗಳು ಸುರುವಾದ್ರೆ?”

“ಅಲ್ಲಲೇ, ಶಾಸ್ತ್ರಿಯ ಭಾಷೆ ಅಂದ್ರೆ ನೀನೇಳ್ದಂಗೆ ಜಾತಿ ಅಲ್ಲ. ತುಂಬಾ ಹಳೇ ಭಾಷ. ಈ ಭಾಷೇಲಿ ತುಂಬಾ ಹಳೇ ಕಾಲದಿಂದ ಕಾವ್ಯ, ಸಾಹಿತ್ಯ ಎಲ್ಲ ರಚನೆಯಾಗುತಿತ್ತು ಅಂತ”.

“ಓ ಔದಾ..... ನಾನು ತೆಪ್ ತಿಳ್ಕಂಡಿದ್ದೆ. ಅಂಗಾರೆ ನಮ್ಮ ಕನ್ನಡ ಹಳೇ ಪಳೇದು ಅಂತ ಏಳ್ಕಳಕೆ ಇಷ್ಟು ಓರಾಟ ಮಾಡ್ಬೇಕಾ? ನಾವು ಕೆಲಸಕ್ಕೆ ಬಾರದ್ದಕ್ಕೆ ‘ಹಳೇ ಕೊಲ್ದು’ ಅಂತೀವಲ್ಲಾ?

“ಅಂಗಲ್ಲ ಕಣಲಾ ಈಗ ನೋಡು ತಮಿಳು ಭಾಷೆನ ಶಾಸ್ತ್ರೀಯ ಭಾಷೆ ಅಂತ ಘೋಷಣೆ ಮಾಡಿದಾರೆ. ಆದರೆ ನಮ್ಮ ಕನ್ನಡ ಭಾಷೆಗೆ ಅಂತಹ ಸ್ಥಾನ ಸಿಕ್ಕಿಲ್ಲ.

“ಓ ಅಂಗನ್ನು ಅಂತಹ ಸ್ಥಾನ ಸಿಕ್ಕಿಲ್ಲ. ತಮಿಳ್ರು ಸದ್ದಿಲ್ಲದಂಗೆ ಕೆಲ್ಸ ಮುಗುಸ್ಕಂಡ್ ಮೇಲೆ ನಮ್ಗೆ ಎಚ್ಚುರುಕೆ ಆಗೈತೆ”.



“ಸರ್ಯಾಗೇಳ್ದೆ ಕಣ್ಲಾ ನಾಣಿ”.

“ಆದ್ರೂ ಎಂಕ, ನಂಗೆ ಅರ್ಥ ಆಗಕಿಲ್ಲ ಕಣಲಾ. ನಮ್ಮ ಬಾಸೆ ಅಳೇಪಳೇದು ಅಂತ ಯಾಕೆ ಏಳ್ಕೋಬೇಕು? ಹಳೇ ಸಿನ್ಮಾ ಅಂದ್ರೆ ಯಾರು ನೋಡ್ತರೆ? ನಮ್ದು ವಚ್ಚವಸಾ ಬಾಸೆ ಈಗ ತಾನೇ ರಿಲೀಜ್ ಆಗೈತೆ ಅಂತ ಏಳ್ಕಳನ ಆಗ ಏನಾಗ್ತೈತೆ?”

“ಅಂಗಲ್ಲ ಕಣಲಾ.... ಹೊಚ್ಚ ಹೊಸಾ ಸಿನಿಮಾ ಏನಕ್ಕೆ ಟಾಕೀಸಿನಿಂದ ಓಡ್ಹೋದ್ರೆ ಸೂಪರ್ ಹಿಟ್ಟು ಅಂತೀಯೋ? ಐವತ್ತು ದಿನ, ನೂರು ದಿನ, ಇಪ್ಪತ್ತೈದು ವಾರ, ಒಂದು ವರ್ಷ ಹಿಂಗೆ ತುಂಬಾ ದಿನ ಓಡಿದ ಸಿನೆಮಾ ಸೂಪರ್ ಹಿಟ್ಟು ಅಂತಿಯೋ?

“ಜಾಸ್ತಿ ದಿನ ಓಡಿದ್ದೇ ಸೂಪರ್ ಹಿಟ್ಟು”

“ಅಂಗೇ ಕನ್ನಡ ಭಾಷೇನೂ ಸಾವ್ರಾರು ವರ್ಷದಿಂದ, ಓಡ್ತಾಯಿದೆ. ಅಂತಾದ್ರಲ್ಲಿ ತಮಿಳಿಗೆ ಮಾತ್ರ ಶಾಸ್ತ್ರೀಯ ಭಾಷೆ ಅಂತ ಹೇಳಿ ಕನ್ನಡಕ್ಕೆ ಹೇಳದೇ ಇದ್ರೆ ಬೇಜಾರಾಗಕಿಲ್ವ?”

“ಏ ಓಗ್ಲಿ ಬಿಡ್ಲಾ. ಯಾರೋ ಏಳಿದ್ರೆ ಮಾತ್ರ ಕನ್ನಡ ಹಳೇದು ಅಂತ ಆಯ್ತದಾ? ಇಲ್ದಿದ್ರೆ ಸಾವ್ರಾರು ವರ್ಸದಿಂದ ಇದ್ದಿದ್ದು ಸುಳ್ಳಾಯ್ತದಾ?”

“ಅಂಗಲ್ಲ ಕಣಲಾ, ಶಾಸ್ತ್ರೀಯ ಭಾಷೆ ಅಂತ ಘೋಷಣೆ ಆದ್ರೆ ಭಾಷೆ ಅಭಿವೃದ್ಧಿಗೆ ಹಣಕಾಸು ಸಹಾಯ ಸಿಗುತ್ತೆ. ಸ್ವಲ್ಪ ಅನುಕೂಲ ಆಗುತ್ತೆ”.

“ಏನು ಅನುಕೂಲ ಆಯ್ತದೆ? ಯಾರಿಗೆ ದುಡ್ಡು ಸಿಗ್ತವೆ? ನಾವೂ ಕನ್ನಡ ಶಾಸ್ತ್ರಿಗಳೇ, ನಮ್ಗೂ ಏನಾರ ಒಂದೊಂದು ಲಕ್ಷ ರೂಪಾಯಿ ಏನಾರ ಸಿಗ್ತವೋ?”

“ನಮ್ಗೆಲ್ಲ ಏನೂ ಬಿಡ್ಲಾಸೂ ಸಿಕ್ಕಕಿಲ್ಲ. ಅಂತ ಆಸೆ ಏನೂ ಇಟ್ಕಬೇಡ. ಏನೋ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಒಂದೋ ಎರಡೋ ಕೋಟಿ ರೂಪಾಯಿ ಸಿಗ್ರದಂತಪ್ಪ.”

“ಊಂ. ಸರಿ ಬುಡು ಅದೇನೋ ಏಳ್ತರಲ್ಲ “ಸರ್ಕಾರಕ್ಕೆ ಓದ ಅಣ, ಮಸಾಣಕ್ಕೆ ಓದ ಎಣ’ ಅಂತ ಅಂಗಾಯ್ತದೆ”

“ಯಾಕ್ಲ ಏನಾಯ್ತದೆ ಅಂತೀಯಾ?”

“ಮತ್ತಿನ್ನೇನು, ಸರ್ಕಾರಕ್ಕೆ ದುಡ್ಡು ಬಂದ್ರೆ ನಮ್ಗೇನು ಸುಖ? ಯಾರೋ ಕನ್ನಡ ಬರದೇ ಇರೋ ಅಧಿಕಾರಿಗಳುಮೀಟಿಂಗು ಮಾಡ್ತರೆ.

ಈ ಟಿಂಗು ಚಾಟಿಂಗು ಅಂತ ಖರ್ಚು. ಇನ್ನು ನಮ್ಮ ಸಾಸಕ್ರು, ಬೇರೆ ಬೇರೆ ಪಾರಿನ್ ದೇಶಗಳಲ್ಲಿ ಕನ್ನಡ ಎಂಗೈತೆ? ಅಂತ ನೋಡ್ಕೋಬರಾಕೆ ಟೂರ್ ಓಗ್ತರೆ. ಅಲ್ಲಿಗೆ ಬಂದಿದ್ ದುಡ್ಡೆಲ್ಲ ಡಮಾರ್”. ನಮ್ಗೂ ಒಂದಿಷ್ಟು ಕೊಟ್ರೆ, ರಾಜ್ಯೋಸ್ತವ ಮಾಡಿ ಕುಸಿ ಪಡ್ತಿವಪ್ಪ”.

“ಆಹಹ...., ಈಗ ರಾಜೋತ್ಸವ ಅಂತ ವಸೂಲ್ ಮಾಡ್ತಿರೋದು ಸಾಲ್ದಾ? ಜನಗಳ ಹತ್ರನೂ ಸುಲಿಗೆ ಮಾಡ್ತೀರಾ, ಶಾಸಕರ ಹತ್ರನೂ ವಸೂಲ್ ಮಾಡ್ತಿರಾ. ಒಂದು ಆರ್ಕೆಸ್ಟ್ರಾ ಮಾಡಿದ್ರೆ ಮುಗೀತು. ಖರ್ಚಾಗಿದ್ದೆಷ್ಟು? ನೀವು ಮಜಾ ಮಾಡಿದ್ದೆಷ್ಟು? ಲೆಕ್ಕ ಕೇಳೋರು ಯಾರು? ನಾಣಿ.... ಲೇ..... ನಾಣಿ.... ಎತ್ಲಾಗೋದ ಈ ನಾಣಿ.....?

– ಶ್ರೀ

ವೈಜ್ಞಾನಿಕವಾಗಿ ಮಾನವ ಹಕ್ಕುಗಳು ರಕ್ಷಣೆಯಾಗುವುದು ವರ್ಗರಹಿತ ಸಮಾಜದಲ್ಲಿ ಮಾತ್ರ. ಸ್ತ್ರಿ ಪುರುಷರಿಬ್ಬರಿಗೂ ಸಮಾನಾವಕಾಶಗಳು ಲಭ್ಯವಾಗುವಂಥ ವಾತಾವರಣವದು. ಆದರೆ ಈ ಲೇಖನದಲ್ಲಿ ಒಂದು ಮಗ್ಗುಲನ್ನು ಮಾತ್ರ ಚರ್ಚಿಸಿದೆ. ಬಂಡವಾಳಶಾಹಿಗೆ ಆಘಾತವಾದ್ರೆ ಮಾತ್ರ 'ಮಾನವ ಹಕ್ಕುಗಳ ಉಲ್ಲಂಘನೆ ಆಗುತ್ತಿದೆ' ಎಂದು ಬೊಬ್ಬೆ ಶುರುಮಾಡಿದ ವರ್ಷದಿಂದ ಇಂದಿನವರೆಗೆ ದುಡಿಯುವ ಜನ ಸಮುದಾಯದ ಹಕ್ಕುಗಳನ್ನೆಲ್ಲ ಹತ್ತಿಕ್ಕುತ್ತಲೇ ಬಂದಿದ್ದಾರೆ. ಇದು ಬಂಡವಾಳಶಾಹಿಗೆ ಮಾನವಹಕ್ಕು ಎಂದೆನಿಸಲೇ ಇಲ್ಲ. ಹಾಗಾಗಿಯೇ ಅಂತರಾಷ್ಟ್ರೀಯ ಮಾನವ ಹಕ್ಕುಗಳ ಘೋಷಣೆಯು ಸಂಪೂರ್ಣವಾಗಿ, ಸಮಗ್ರವಾಗಿ, ಆಳವಾಗಿ ನಿಜವಾದ ಮನುಷ್ಯತ್ವದ ವಕ್ತಾರನಾಗಿ ನನಗೆ ಕಾಣಲಿಲ್ಲ. ಆದಾಗ್ಯೂ ಆ ಘೋಷಣೆಯ ಮತ್ತು ಕಾನೂನಿನ ಹಿನ್ನೆಲೆಯಲ್ಲಿ ಒಂದಿಷ್ಟು ವಿಚಾರಗಳಲ್ಲಿ ಮಹಿಳೆಗೆ ಸಂಬಂಧಿಸಿ ಓದುಗರೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ಮಾನವ ಹಕ್ಕುಗಳೂ ಮತ್ತು ಮಹಿಳೆ

ಯಮುನಾ ಗಾಂವ್ಕರ

ಮಹಿಳೆಯರು ಈಗಷ್ಟೇ ಪ್ರಪಂಚದಲ್ಲಿ ಶಿಕ್ಷಣಕ್ಕೆ, ಸಾಮಾಜಿಕ-ರಾಜಕೀಯ ಜೀವನಕ್ಕೆ ಕಣ್ಣು ಬಿಡುತ್ತಿದ್ದಾರೆ. ಕಾರಣವಿಷ್ಟೇ, ಸಹಸ್ರಾರು ವರ್ಷಗಳ ಮಾನವ ಅಭಿವೃದ್ಧಿಯ ಇತಿಹಾಸದಲ್ಲಿ ಮಹಿಳೆಯು ನಿರಂತರ ಲಿಂಗಭೇದಕ್ಕೆ ಒಳಗಾಗಿರುವುದು. ಅದಕ್ಕಾಗಿಯೇ ಆಕೆಯು ಸ್ವಂತಿಕೆಯನ್ನು, ಸ್ವಾತಂತ್ರ್ಯವನ್ನು, ಹಕ್ಕುಗಳನ್ನು, ಮನುಷ್ಯ ಸಂಬಂಧಿ ಸೌಲಭ್ಯಗಳನ್ನು ವಂಚಿಸಿರುವುದು. ಕೇವಲ ಕರ್ತವ್ಯಮುಖಿಯಾಗಿ ಗುಲಾಮ ಸಮಾಜದಿಂದ, ಪಾಳೇಗಾರಿ ಊಳಿಗಮಾನ್ಯ ಸಮಾಜ ಪದ್ಧತಿಯಿಂದ ಇಂದಿನ ಬಂಡವಾಳ ಶಾಹಿ ಪದ್ಧತಿವರೆಗೂ ಕೆಲಸ ಮಾಡುತ್ತಲೇ ಬಂದಿದ್ದಾಳೆ. ಈ ದಾರಿಗುಂಟ ಎಲ್ಲಿಯೂ ಮಹಿಳೆಯೂ ಓರ್ವ ಮನುಷ್ಯ ಪ್ರಾಣಿ, ಆಕೆಗೂ ಎಲ್ಲಾ ಮನುಷ್ಯರಿಗಿರುವಂತೆ ಸಂವೇದನೆಗಳಿವೆ ಎಂದು ಬಹುಜನರು ಒಪ್ಪುತ್ತಿರಲಿಲ್ಲ. ಆದರೆ ಇತ್ತೀಚಿನ ಶತಮಾನಗಳಲ್ಲಷ್ಟೇ ಎಲ್ಲಾ ಮನುಷ್ಯರನ್ನು ಮನುಷ್ಯರಂತೆ ಕಾಣಬೇಕೆಂಬ ಮಾನವೀಯ ದೃಷ್ಟಿಕೋನದ ಸಂಘರ್ಷದ ಸಣ್ಣ ಎಳೆಯನ್ನು ಇತಿಹಾಸದಲ್ಲಿ ಕಾಣಬಹುದಾಗಿದೆ. ವಿಶೇಷವಾಗಿ ಕೈಗಾರಿಕೆಗಳ ಬೆಳವಣಿಗೆಯ ಸಂದರ್ಭದಲ್ಲಿ, ಸಮಾಜ ಸುಧಾರಣೆಯ ಚಳುವಳಿಗಳು ಮೂಡಿಬಂದಂಥ ಸಂದರ್ಭಗಳಲ್ಲಿ.

ನೋವು ನೋವೇ

ಮಾನವ ಹಕ್ಕುಗಳು ಮತ್ತು ಮಹಿಳೆ ವಿಷಯದ ಕುರಿತು ನಾನು ಹಲವಾರು ಪ್ರಕರಣಗಳನ್ನು ಉಲ್ಲೇಖಿಸಿ, ಮಾನವ ಹಕ್ಕುಗಳ ಸಲುವಾಗಿ ಹೋರಾಟ ನಡೆಸಿದ ವ್ಯಕ್ತಿಗಳನ್ನು ನೆನೆದು ಚರ್ಚಿಸಬೇಕಿತ್ತು. ಆದರೆ ಸೀಮಿತ ಸ್ಥಳಾವಕಾಶದ ನಿರ್ಬಂಧದ ಕಾರಣಕ್ಕಾಗಿ ಈ ಚಿಕ್ಕ ಲೇಖನ.

ಹಾಗಾದರೆ, ಈ ಮಾನವ ಹಕ್ಕುಗಳೆಂದರೇನು? ಈ ಪರಿಕಲ್ಪನೆಯು ಯಾವಾಗ ಬೆಳೆಯುತ್ತಾ ಬಂತು? ಮತ್ತು ಮಹಿಳೆಗೆ ಯಾಕೆ ಹಕ್ಕುಗಳು ಬೇಕು ಎಂಬುದರತ್ತ ನಾವು ಕಣ್ಣು ಹಾಯಿಸಿಯೇ ಮುಂದಕ್ಕೆ ಹೋಗೋಣ.

ಮಹಿಳೆಯ ವಿಷಯದಲ್ಲಿ ಎಲ್ಲ ರೀತಿಯ ಭೇದ-ಭಾವ, ತಾರತಮ್ಯ ಅಸಮಾನತೆ ಜಗತ್ತಿನಾದ್ಯಂತ ಸಾರ್ವತ್ರಿಕವಾಗಿದೆ. ಶೋಷಣೆಯ ರೀತಿ ಒಂದೊಂದು ದೇಶದಲ್ಲಿ ಒಂದೊಂದು ವಿಧ. ಆದರೆ ಅದರ ಉತ್ಪನ್ನವಾದ ನೋವು ನೋವೇ, ಅದರಲ್ಲಿ ಭಿನ್ನತೆಯಿಲ್ಲವಲ್ಲ.

ನಾವೆಲ್ಲ ಮಾತೆತ್ತಿದರೆ ಹೇಳುವ 21ನೇ ಶತಮಾನದಲ್ಲೂ ಮುಂದುವರಿದ ದೇಶಗಳಾದ ಅಮೇರಿಕಾ, ಯುರೋಪ್ ಒಳಗೊಂಡು ಹಸಿವಿನಿಂದ ಕಂಗಾಲಾದ ಸೋಮಾಲಿಯಾದವರೆಗೂ ಲಿಂಗಭೇದ, ಜನಾಂಗೀಯ, ವರ್ಣ, ಜಾತಿ-ಧರ್ಮಭೇದಕ್ಕೆ ಮೊದಲ ಬಲಿ ಮಹಿಳೆ. ಈ ಎಲ್ಲ ಭೇದಗಳ ಜೊತೆಗೆ ಕಂದಾಚಾರ, ಮೂಢನಂಬಿಕೆ, ಅಜ್ಞಾನ, ಅನಕ್ಷರತೆ, ಇನ್ನೂ ಅಂತಾದ ಅಮಾನವೀಯ ಧೋರಣೆಗಳು ಆಕೆಯನ್ನು ಸುತ್ತುಗಟ್ಟಿವೆ. ಆ ವರ್ತುಲದಿಂದ ಆಚೆ ಬರಬೇಕು ಎಂದೇ ಜಗತ್ತಿನಾದ್ಯಂತ ಸಮಾನತೆ ಮತ್ತು ಸ್ತ್ರೀ ಪರ ಕಾಳಜಿಯ ಹೋರಾಟಗಳು' ನಡೆಯುತ್ತ ಬಂದುದು.

ನಾರಿಯ ಹಿಂಸೆಯ ನಂತರ

ಎರಡನೇ ವಿಶ್ವ ಮಹಾ ಸಮರದ ಮಾತು. ಜರ್ಮನಿಯ ಹಿಟ್ಲರ್ ಜನಾಂಗೀಯ ಶ್ರೇಷ್ಠತೆಯ ಆಧಾರದಲ್ಲಿ ಅಸಂಖ್ಯಾತ ಬದುಕುವ ಹಕ್ಕನ್ನೇ ನಾಶಮಾಡಿದ ಲಕ್ಷಾಂತರ ಜನರ ಕೊಲೆಯೊಂದಿಗೆ 1945ರಲ್ಲಿ ಸಮರ ಕೊನೆಗೊಂಡಿತು. ಆಗ ಪ್ರಪಂಚದ ಗಮನವೆಲ್ಲ ಮಾನವ ಹಕ್ಕುಗಳ ಉಲ್ಲಂಘನೆ ಬಗ್ಗೆ ಅದರ ಫಲವಾಗಿ 1948ರಲ್ಲಿ ವಿಶ್ವ ಸಂಸ್ಥೆಯು ಮಾನವ ಹಕ್ಕುಗಳ ಘೋಷಣೆ ಮಾಡಿತು. ಸ್ವಾತಂತ್ರ್ಯ, ನ್ಯಾಯ, ಶಾಂತಿ ಸ್ಥಾಪನೆಯಿಂದಲೇ ಮಾನವನ ಘನತೆ ರಕ್ಷಣೆಯಾಗುತ್ತದೆಂದು, ಸ್ತ್ರೀ ಪುರುಷರಿಬ್ಬರಿಗೂ ಸಮಾನಹಕ್ಕುಗಳಿವೆ ಎಂದೂ ತಿಳಿಸಲಾಯಿತು.

ಮಾನವ ಹಕ್ಕುಗಳ ಘೋಷಣೆಯನ್ನು ಮೊದಲನೇಯ ಅನುಚ್ಛೇದವು ಹೀಗೆ ಹೇಳುತ್ತದೆ. 'ಎಲ್ಲಾ ಮಾನವರು ಸ್ವಾತಂತ್ರ್ಯದೊಂದಿಗೆ, ಘನತೆ ಹಾಗೂ ಹಕ್ಕುಗಳ ಸಮಾನತೆಯೊಂದಿಗೆ ಜನ್ಮ ತಾಳಿರುತ್ತಾರೆ' ಎರಡನೇಯದು ಜನಾಂಗ, ವರ್ಣ, ಲಿಂಗ, ಭಾಷೆ, ಧರ್ಮ ರಾಜಕೀಯ ಅಥವಾ ಇತರ ಅಭಿಪ್ರಾಯಗಳು ರಾಷ್ಟ್ರೀಯ ಅಥವಾ ಸಾಮಾಜಿಕ ಮೂಲ, ಆಸ್ತಿ, ಹುಟ್ಟು ಅಥವಾ ಸ್ಥಾನಮಾನದಂಥ ಯಾವುದೇ ರೀತಿಯ ಭೇದ-ಭಾವವಿಲ್ಲದೇ ಪ್ರತಿಯೊಬ್ಬ ಮಾನವರೂ ಈ ಘೋಷಣೆಯಲ್ಲಿ ಹೇಳಲಾಗಿರುವ ಎಲ್ಲಾ ಹಕ್ಕುಗಳಿಗೆ ಮತ್ತು ಸ್ವಾತಂತ್ರ್ಯಗಳಿಗೆ ಹಕ್ಕುದಾರರಾಗಿರುತ್ತಾರೆ. ಇದರ ಪ್ರಕಾರ ಮಾನವನ ಮೂಲಭೂತ ಹಕ್ಕುಗಳನ್ನು ರಕ್ಷಿಸುವ ಹೊಣೆಗಾರಿಕೆ ಸರ್ಕಾರಗಳದ್ದು, ಪ್ರಭುತ್ವದ್ದು ಎಂದೇ ಹೇಳಿರುವುದರಿಂದ ಪ್ರಪಂಚದಾದ್ಯಂತ ಶೋಷಣೆಗೆ ಸಿಲುಕಿದವರಿಗೆ ಒಂದು ಬೆಳಕಿನ ಕಿಂಡಿಯಾಯಿತು. ಇದೆಲ್ಲದರ ಭಾಗವಾಗಿಯೇ ಮಹಿಳೆಯರ ಹೋರಾಟ ಕೂಡ ಗುರುತಿಸಿಕೊಳ್ಳುವಂತಾಯಿತು.

ನಾಗರೀಕ ಮತ್ತು ರಾಜಕೀಯ ಹಕ್ಕುಗಳ ಮೇಲಣ ಅಂತರಾಷ್ಟ್ರೀಯ ಒಡಂಬಡಿಕೆ 1966 ರಲ್ಲಿ, ಯಾವುದೇ ಲಿಂಗಭೇದವಿಲ್ಲದೇ ಮತ್ತು ಒಡಂಬಡಿಕೆಗೆ ಬದ್ಧವಾದ ರಾಷ್ಟ್ರಗಳ ಅಧಿಕಾರದೊಳಗೆ ಬರುವ ಪ್ರಜೆಗಳಿಗೆ ಅಂಗೀಕಾರವಾದ ಹಕ್ಕುಗಳನ್ನು ನೀಡಬೇಕು. ಇದರ 3ನೇ ಅನುಚ್ಛೇದದ ಪ್ರಕಾರ ಸ್ತ್ರೀ ಪುರುಷರಿಬ್ಬರೂ ಸಮಾನ ಹಕ್ಕು ನೀಡುವ ಬಗ್ಗೆ ಕ್ರಮ ಕೈಗೊಳ್ಳಬೇಕು. 23 ರ ಪ್ರಕಾರ ಕುಟುಂಬವನ್ನು, ಸಮಾಜದ ಸ್ವಾಭಾವಿಕ ಮತ್ತು ಮೂಲಭೂತ ಘಟಕವೆಂದು ಪರಿಗಣಿಸಿ ಸ್ತ್ರೀ ಪುರುಷರಿಬ್ಬರ ವಿವಾಹ ವಯೋಮಿತಿ ನಿರ್ಧರಿಸಬೇಕು. 1966ರ ಆರ್ಥಿಕ ಸಾಮಾಜಿಕ, ಸಾಂಸ್ಕೃತಿಕ ಹಕ್ಕುಗಳ ಮೇಲಣ ಅಂತರಾಷ್ಟ್ರೀಯ ಒಪ್ಪಂದದ 2,3ನೇ ಅನುಚ್ಛೇದಗಳು, ಎಲ್ಲ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಕ್ಕುಗಳನ್ನು ಅನುಭವಿಸಲು ಎಲ್ಲ ರಾಷ್ಟ್ರಗಳೂ ಸ್ತ್ರೀ ಪುರುಷರಿಬ್ಬರಿಗೂ ಸಮಾನಾವಕಾಶ ನೀಡಬೇಕು ಎಂದಿವೆ. 1979ರಲ್ಲಿ ವಿಶ್ವದಲ್ಲಿ ಜಾರಿಗೆ ಬಂದ ಮಹಿಳೆಯರ ವಿರುದ್ಧದ ಎಲ್ಲ ರೂಪದ ತಾರತಮ್ಯ ನಿರ್ಮೂಲನೆಯ ಒಪ್ಪಂದದಂತೆ, ಯಾವುದೇ ದೇಶ ಆರ್ಥಿಕ, ಸಾಮಾಜಿಕ, ರಾಜಕೀಯ, ವೈವಾಹಿಕ, ಕೌಟುಂಬಿಕ, ಶೈಕ್ಷಣಿಕ, ಆರೋಗ್ಯ ಕ್ಷೇತ್ರಗಳಲ್ಲಿ ಪಕ್ಷಪಾತ ನೀತಿ ಖಂಡಿಸಿದೆ ಮತ್ತು ಈ ಒಪ್ಪಂದವು ಎಲ್ಲ ರಾಷ್ಟ್ರಗಳಲ್ಲಿ ಜಾರಿಯಾಗುತ್ತಿರುವುದರ ಪ್ರಗತಿ ಗಮನಿಸಲು ಅಂತರರಾಷ್ಟ್ರೀಯ ಸಮಿತಿ ನೇಮಿಸಿದೆ. ವಿಶ್ವ ಸಂಸ್ಥೆಯ ವಾರ್ಷಿಕ ಮಹಾಸಭೆಗೆ ತನ್ನ ವರದಿಯನ್ನು ಕಳಿಸುತ್ತದೆ.

ಮಹಿಳೆಯರು ಕೈಗಾರಿಕೆಗಳಲ್ಲಿ ಉದ್ಯೋಗಕ್ಕೆ ತೊಡಗಿಸಿಕೊಳ್ಳುವ ಮೊದಲೂ ಕೂಡ ಎಲ್ಲಾ ರೀತಿಯ ದಾಸ್ಯ, ಜೀತ, ಅಡಿಯಾಳುತನದ ವಿರುದ್ಧ ಧ್ವನಿ ಎತ್ತಿದ್ದರು. ದಿನದ 24 ತಾಸು ದುಡಿಮೆ ಅಸಾಧ್ಯ ಎಂದು ಯುರೋಪ್‌ನಾದ್ಯಂತ ಪ್ರಬಲ ಹೋರಾಟ ನಡೆದಿದ್ದನ್ನು, 18ನೇ ಶತಮಾನದ ಅಂತ್ಯದಲ್ಲಿ 8 ತಾಸು ದುಡಿಮೆ, 8 ತಾಸು ವಿಶ್ರಾಂತಿ, 8 ತಾಸು ಇನ್ನಿತರೇ ಚಟುವಟಿಕೆಗೆ ಹಾಗೂ ಕೆಲಸಕ್ಕೆ ತಕ್ಕ ವೇತನಕ್ಕಾಗಿ ನಡೆದ ಸ್ಫೂರ್ತಿಯುತ ಹೋರಾಟ ಗಮನಿಸಲೇಬೇಕು.

ಮಹಿಳೆ ಪುರುಷನಿಗಿಂತ ಹೆಚ್ಚು ಕೆಲಸ ಮಾಡುತ್ತಾಳೆ. ಉತ್ಪಾದನೆ-ಪುನರುತ್ಪಾದನೆ ಪ್ರಕ್ರಿಯೆಯಲ್ಲಿ ಮಹಿಳೆ ಇದ್ದಾಳೆ. ಪ್ರಾಚೀನ ಆದಿ ಸಮಾಜವು ಸಮತಾ ಸಮಾಜವಾಗಿತ್ತು. ಖ್ಯಾತ ವಿದ್ವಾಂಸರಾದ ದೇವಿಪ್ರಸಾದ ಚಟ್ಟೋಪಾಧ್ಯಾಯರು ಹೇಳುವಂತೆ ಅದು 'ಮಾತೆಯರು ಮಾನ್ಯರಾಗಿದ್ದ' ಕಾಲ. ಆದ್ರೆ ಸಹಸ್ರಾರು ವರ್ಷಗಳ ತರುವಾಯ ಮಾನವ ಗುಂಪಾಗಿ ವಾಸಿಸಲು, ಪಶುಸಂಗೋಪನೆ, ವ್ಯವಸಾಯ ಪ್ರಾರಂಭಿಸುತ್ತಿದ್ದಂತೆ ಆಸ್ತಿ ಸಂಬಂಧಗಳು ಬೆಳೆದಂತೆ ಗುಂಪು, ಗೋತ್ರಗಳ ಮಧ್ಯೆ ಅಸಮಾನತೆ ಬೆಳೆಯುತ್ತ ಬಂತು. ಸ್ತ್ರೀ ಕೂಡ ಪುರುಷನ ಅಧೀನಕ್ಕೆ ಒಳಪಟ್ಟ ಒಂದು ಆಸ್ತಿ, ಖಾಸಗಿ ಆಸ್ತಿಯಾದುದನ್ನು, ಅಂದಿನಿಂದಲೇ ಎಲ್ಲ ಹಕ್ಕಿನಿಂದ ವಂಚಿತರಾದುದನ್ನು ಗಮನಿಸಬೇಕಿದೆ. ಕುಟುಂಬ, ಖಾಸಗಿ ಆಸ್ತಿಗಳ ಹುಟ್ಟಿನೊಂದಿಗೆ ಕೃಷಿ ಕಂಡು ಹಿಡಿದ ಸ್ತ್ರೀಯ ಸ್ವಾತಂತ್ರ್ಯಹರಣದ ಕಾಲಘಟ್ಟ ಪ್ರಾರಂಭವಾಗುತ್ತದೆ.

ಬರ್ಬರ ನಿರ್ಬಂಧಗಳು

ಸ್ತ್ರೀಗೆ ಹಿಂದೆ ದೇಹದ ವಿವಿಧ ಅಂಗಗಳನ್ನು ಚುಚ್ಚಿ ಇಡುತ್ತಿದ್ದರು. ಗಂಡಿನ ಸಂಶಯ ಅತಿಯಾಗಿ ಆಕೆಗೆ ಕಬ್ಬಿಣದ ಕಾಚಾಗಳನ್ನು ತೊಡಿಸಿ ಬೀಗ ಹಾಕುತ್ತಿದ್ದರು. ಮನೆಯಲ್ಲಿ ಗಂಡಿನ ಆಶೆ ತಣಿಸಲು, ಹೊಲಗದ್ದೆಗಳಲ್ಲಿ ದಣಿವಿಲ್ಲದ ದುಡಿತ, ಸಂತಾನ ಪ್ರಾಪ್ತಿಗೆ ಮಾತ್ರ ಸ್ತ್ರೀ, ಆಕೆಯ ದುಡಿಮೆ ಎಂದೂ ಈ ಪುರುಷ ಪ್ರಧಾನ ಸಮಾಜದಲ್ಲಿ ಒಂದು ಮೌಲ್ಯಕ್ಕೆ ಒಳಪಡಲಿಲ್ಲ. ಆಕೆಯ ಪ್ರತಿಯೊಂದು ಬೇಕು, ಬೇಡ ನಿರ್ಧರಿಸುವವ ಗಂಡಸಾದ್ದರಿಂದ ಸ್ವಂತಿಕೆ, ಸ್ವಾತಂತ್ರ್ಯ ನಿರಾಕರಿಸಲ್ಪಟ್ಟಿತು. ಗುಲಾಮಳಾಗಿಯೇ ಶತ ಶತಮಾನಗಳ ಕಾಲ ಬದುಕುದೂಡು ವಂತಾಯಿತು. ಇದು ಎಲ್ಲ ಸ್ತರದ ಮಹಿಳೆಯರ ಕತೆಯೇ ಭಾರತೀಯ ಸಮಾಜದಲ್ಲಿ ಅಸ್ಪೃಶ್ಯ ಮಹಿಳೆ ಅಸ್ಪೃಶ್ಯ ಪುರುಷನಿಗಿಂತ ಕೀಳಾಗಿ ಬದುಕಿದ್ದಾಳೆ. ಸಾಮಾಜಿಕ ಕಟ್ಟುಪಾಡುಗಳು ಹೆಣ್ಣಿನ ಪ್ರಗತಿಯನ್ನು ಎಂದೂ ಸಹಿಸಲೇ ಇಲ್ಲ. ಆಕೆ ಮನುಷ್ಯಳಾಗಿ ಅವಳಿಗೂ ಹಕ್ಕಿದೆ ಎಂದು ಶಾಸ್ತ್ರ-ಪುರಾಣಗಳು ಒಪ್ಪಲೇ ಇಲ್ಲ. ಹಾಗಾಗಿಯೇ ಇತ್ತೀಚಿನ ಶತಮಾನದಲ್ಲಷ್ಟೇ ಮಹಿಳಾ ಹಕ್ಕುಗಳ ಬಗ್ಗೆ ವ್ಯಾಪಕವಾಗಿ ಧ್ವನಿ ಎತ್ತುವಂತಾಗಿದೆ.

ಅವಿನಾಭಾವ ಸಂಬಂಧ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಗೂ ಮಾನವ ಹಕ್ಕಿಗೂ ಅವಿನಾಭಾವ ಸಂಬಂಧವಿದೆ. ಭಾರತದಂಥ ಸಾಂಪ್ರದಾಯಿಕ ಮನೋಭಾವನೆಯ ಧಾರ್ಮಿಕ ಜಿಡ್ಡುತನದ ಸಮಾಜದಲ್ಲಿ ಮಹಿಳಾ ಚಳುವಳಿ ಮತ್ತು ಸ್ವಾತಂತ್ರ್ಯ ಚಳುವಳಿ ಮೂಡಿ ಬಂದುದು ಸಾಹಸದ ಗಾಥೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆರದ್ದು ಪಾಲಿದೆ. ಅದೇ ವೇಳೆಗೆ 1935ರಲ್ಲಿ ಮತದಾನದ ಹಕ್ಕು ಪಡೆದು ಶಾಸನ ಸಭೆಗೆ ಪ್ರವೇಶ ಸಿಕ್ಕಿದುದು.

ಮಾನವ ಹಕ್ಕು ಘೋಷಣೆಯು ಭಾರತದ ಸಂವಿಧಾನದ ರಚನೆಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಸಂವಿಧಾನದ ಪೀಠಿಕೆಯಲ್ಲಿ ಹೇಳಿರುವಂತೆ ಸಮಾನತೆ ಎಲ್ಲರಿಗೂ ದೊರಕಬೇಕೆಂದು ಜನತೆಯ ನಿರ್ಧಾರ ತಿಳಿಸಲಾಗಿದೆ. 'ನಮ್ಮ ದೇಶ ಒಂದು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ, ಪ್ರಜಾಪ್ರಭುತ್ವವಾದಿ ಗಣರಾಜ್ಯ. ಇಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ, ವಿಚಾರ, ಅಭಿವ್ಯಕ್ತಿ ನಂಬಿಕೆ, ಶ್ರದ್ಧೆ, ಆರಾಧನಾ ಸ್ವಾತಂತ್ರ್ಯ, ಸ್ಥಾನ ಮಾನ ಮತ್ತು ಅವಕಾಶಗಳಲ್ಲಿ ಸಮಾನತೆಯನ್ನು ಎಲ್ಲರಿಗೂ ದೊರಕಬೇಕೆಂದು ಜನತೆಯ ನಿರ್ಧಾರ' ವ್ಯಕ್ತಿಯ ಘನತೆಯನ್ನು, ರಾಷ್ಟ್ರದ ಐಕ್ಯತೆಯನ್ನು ಸುನಿಶ್ಚಿತಗೊಳಿಸುವ ಸೋದರತ್ವದ ಭಾವನೆ ಈ ದೇಶದಲ್ಲಿ ನೆಲೆಯಗೊಳ್ಳಬೇಕು ಎಂದಿವೆ. 3ನೇ ಭಾಗದಲ್ಲಿ ಮೂಲಭೂತ ಹಕ್ಕುಗಳನ್ನು, 4ನೇ ಭಾಗದಲ್ಲಿ ನಿರ್ದೇಶಕ ತತ್ವದಲ್ಲಿ ಸ್ತ್ರೀ ಪುರುಷರಿಬ್ಬರಿಗೂ ಸಮಾನ ಜೀವನ ನಿರ್ವಹಣೆಗೆ ಸಾಕಷ್ಟು ಸಾಧನ ಹೊಂದುವ ಹಕ್ಕನ್ನು, ಸಮಾನ ವೇತನದ ಹಕ್ಕನ್ನು ನೀಡಿದೆ. ಕಲಂ 51ರಲ್ಲಿ ಸ್ತ್ರೀಯರ ಗೌರವಕ್ಕೆ ಕುಂದುಂಟಾಗುವ ಆಚರಣೆಗಳನ್ನು ಕೈಬಿಡುವುದು ಕರ್ತವ್ಯವಾಗಿದೆ.

ಕಾನೂನಿನ ಹೆಜ್ಜೆ ಗುರುತುಗಳು

ಸ್ವಾತಂತ್ರ್ಯ ಪೂರ್ವದಲ್ಲಿ ನಡೆದ ಸ್ತ್ರೀಪರ ಮಾನವೀಯ ಹೋರಾಟ, ಸಮಾಜ ಸುಧಾರಣಾ ಚಳುವಳಿಯ ಭಾಗವಾಗಿ ಸತಿ ಪದ್ಧತಿ ಮತ್ತು ಬಾಲ್ಯವಿವಾಹ ನಿಷೇಧ, ವಿಧವಾ ಪುನರ್ವಿವಾಹಕ್ಕೆ ಅವಕಾಶ ಕಲ್ಪಿಸುವ ಕಾನೂನುಗಳು ಬಂದವು. 1937ರಲ್ಲಿ ಹಿಂದೂ ವಿಧವೆಯರು ಗಂಡಿನ ಪಾಲಿನ ಆಸ್ತಿಯಲ್ಲಿ ಹಕ್ಕು ಪಡೆದರು. ಹಿಂದೂ ಮಹಿಳೆಯರ ಸ್ಥಿತಿಗತಿ ಸುಧಾರಣೆಗೆ ಬ್ರಿಟಿಷ್ ಸರ್ಕಾರ ನೇಮಿಸಿದ ಸಮಿತಿಯು 1946ರಲ್ಲಿ ವರದಿ ನೀಡಿದರೂ, ಅದರ ಆಧಾರದಲ್ಲಿ ತಿದ್ದುಪಡಿಗಳೂ ಬಂದುದು 1955ರ ಸುಮಾರಿಗೆ. ಅಂದರೆ ಭಾರತದಲ್ಲಿ ಲಿಂಗ ತಾರತಮ್ಯದ ವಿರುದ್ಧದ ಮಾತುಗಳು ಜಾರಿಯಾಗುವಲ್ಲಿ ವಿಳಂಬವಾಗುತ್ತಿದೆ. ವಿವಾಹ, ವಿಚ್ಛೇದನ, ಜೀವನಾಂಶ ದತ್ತಕ, ಮಕ್ಕಳ ಪಾಲನೆ,

ಪುಟ 6 ಕ್ಕೆ

ರಾಯಚೂರು : ಶಾಲಾ ಆಡಳಿತದ ನಿರ್ಲಕ್ಷ್ಯ

ಶೌಚಾಲಯದ ಗುಂಡಿಯಲ್ಲಿ ಬಿದ್ದ ವಿದ್ಯಾರ್ಥಿ ಸಾವು

ಹರಿಯಾಣದ ಪ್ರಿನ್ಸ್, ನೀರಮಾನವಿಯ ಸಂದೀಪ್‌ನ ತೆರೆದ ಕೊಳವೆ ಬಾವಿಗಳು ಮೃತ್ಯುಕೂಪಳಾಗಿರುವ ದುರಂತದ ಸುದ್ದಿ ಹಸಿಹಸಿ ಇರುವಾಗಲೇ ರಾಯಚೂರಿನ ಖಾಸಗಿ ಶಾಲಾ ಆವರಣದಲ್ಲಿ ತೆರದ ಶೌಚಾಲಯದ ಗುಂಡಿಯಲ್ಲಿ ಬಿದ್ದ ವಿದ್ಯಾರ್ಥಿ ರಿಷಬ್ ಭೀಕರ ದುರಂತ ಪಾಲಕರನ್ನು ಧಿಗ್ಭ್ರಾಂತರನ್ನಾಗಿ ಮಾಡಿದೆ. 'ಕರ್ನಾಟಕ ವೆಲ್‌ಫೇರ್ ಟ್ರಸ್ಟ್'ನ ಪ್ರತಿಷ್ಠಿತ ಖಾಸಗಿ ವಿದ್ಯಾ ಸಂಸ್ಥೆ ಪ್ಯಾರಿಬಾಯಿ ಸಂಪತರಾಜ ಕೋಟಾರಿ ಸಿಬಿಎಸ್‌ಸಿ ಶಾಲೆಯಲ್ಲಿನ ಬಾಲಕ ರಿಷಬ್ (5) ತೆರೆದ ಶೌಚಾಲಯದ ತೊಟ್ಟಿಯಲ್ಲಿ ಬಿದ್ದ ಸಾವು ಜನತೆಯನ್ನು ಆಘಾತಗೊಳಿಸಿದೆ.

ದಿವ್ಯನಿರ್ಲಕ್ಷ್ಯ

ಎಲ್.ಐ.ಸಿ. ರಾಯಚೂರು ವಿಭಾಗದ ವಿಮಾ ನೌಕರರ ಸಂಘದ ಜಂಟಿ ಕಾರ್ಯದರ್ಶಿ ಕಾಂ|| ಎಮ್. ರವಿ ಹಾಗೂ ರಾಯಚೂರು ಶಾಖಾ ಘಟಕದ ಅಧ್ಯಕ್ಷರಾದ ಕಾಂ|| ಶೈಲಜಾ ದಂಪತಿಗಳ ಪುತ್ರ ರಿಷಬ್ ಸಿಬಿಎಸ್‌ಸಿ ಪಠ್ಯಕ್ರಮದ ಯು.ಕೆ.ಜಿ ವಿದ್ಯಾರ್ಥಿ. 04-12-2007 ರಂದು ಬೆಳಿಗ್ಗೆ 12.30ಕ್ಕೆ ಮೂತ್ರ ವಿಸರ್ಜನೆಗೆ ಹೊರಟಿದ್ದ ಬಾಲಕ ರಿಷಬ್ ಶೌಚಾಲಯದ ಪ್ರವೇಶ ದ್ವಾರದಲ್ಲಿಯೇ ಇರುವ ತುಂಬಿದ ತೆರೆದ ಶೌಚಾಲಯದ ಗುಂಡಿಯಲ್ಲಿ ಬಿದ್ದಿದ್ದಾನೆ. ಮಕ್ಕಳು ಗಾಬರಿಯಾಗಿ ಸಿಬ್ಬಂದಿಗೆ ತಿಳಿಸಿದ್ದಾರೆ. ಮಕ್ಕಳ ಮಾತನ್ನು ಗಂಭೀರವಾಗಿ ಪರಿಗಣಿಸದೆ ನಿರ್ಲಕ್ಷಿಸಲಾಗಿದೆ. ಮಧ್ಯಾಹ್ನ 1.00ಗಂಟೆಗೆ ರಿಷಬ್‌ನ ತರಗತಿಯ ಸಹಪಾಠಿ ಮಣಿಕಂಠನಿಗೆ ಊಟ ಮಾಡಿಸಲು ಬಂದ ಅವನ ತಾಯಿ ಶ್ರೀಮತಿ ಗೀತಾರವರು ಊಟ ಮಾಡಿಸುವಾಗ ತನ್ನ ಮಗನ ಹತ್ತಿರ ದಿನಾಲು ಊಟ ಮಾಡಲು ಕೂಡುತ್ತಿದ್ದ ರಿಷಬ್ ಕಾಣದಿದ್ದಾಗ ಇದರ ಬಗ್ಗೆ ವಿಚಾರಿಸಲಾಗಿ ಮಕ್ಕಳು ನಡೆದ ಘಟನೆಯನ್ನು ವಿವರಿಸಿದ್ದಾರೆ. ಗಾಬರಿಯಾಗಿ ಘಟನಾ ಸ್ಥಳ ನೋಡಿ ಶಾಲಾ ಮುಖ್ಯಸ್ಥರ ಗಮನಕ್ಕೆ ತಂದಿದ್ದಾರೆ. ಅಲ್ಲಿ ಬಿದ್ದಿರಲಾರ ಇಲ್ಲೇ ಎಲ್ಲಿಯಾದರು ಆಟವಾಡುತ್ತಿರಬಹುದು ಎಂದು ಶಾಲಾ ಕಟ್ಟಡದ ತುಂಬೆಲ್ಲಾ ಹುಡುಕಾಡಿಸಿದ್ದಾರೆ. ಬಾಲಕ ಕಾಣದಿದ್ದಾಗ ತೆರದ ಶೌಚಾಲಯದ ಗುಂಡಿಯಲ್ಲಿ ಉದ್ದದ ಕಟ್ಟಿಗೆಯಿಂದ ಗುಂಡಿಯಲ್ಲಿ ಕೈ ಆಡಿಸಿದಾಗ ಮೃತ ದೇಹ ತೇಲಿ ಬಂದಿದೆ. ಬಾಲಕನ ಮೃತ ದೇಹವನ್ನು ಹೊರ ತೆಗೆದು ನವೋದಯ ಆಸ್ಪತ್ರೆಗೆ ಸಾಗಿಸಿ ಮನೆಗೆ ಫೋನ್ ಮಾಡಿ ಕೈತೊಳೆದು ಕೊಂಡಿದ್ದಾರೆ.


ಮುದ್ದು ರಿಷಬ್

ತಂದೆ ರವಿ ಕಚೇರಿ ಕೆಲಸ ನಿಮಿತ್ತ ಜೆಡ್‌ಟಿಸಿ ತರಬೇತಿಗಾಗಿ ಹೈದ್ರಾಬಾದ್‌ಗೆ ಹೋಗಿದ್ದಾರೆ. ತಾಯಿ ಶೈಲಜ ತನ್ನ ಮಗನು ತನ್ನ ಕೆಲಸಗಳನ್ನು ತಾನೆ ಮಡಿಕೊಂಡು ಶಾಲೆಗೆ ತಯಾರಾಗುವುದು. ತನ್ನ ಕೆಲಸಗಳಿಗೆ ಸಹಾಯ ನೀಡುವ ಬಗ್ಗೆ ಇತೀಚಿಗೆ ಶಾಲೆಯಲ್ಲಿ ಒಬ್ಬನೆ ಊಟಮಾಡಿಕೊಳ್ಳುವ ಬಗ್ಗೆ ಹೆಮ್ಮೆಯಿಂದ ಸಹೋದ್ಯೋಗಿಗಳಲ್ಲಿ ಸಂತೋಷದಿಂದ ಹಂಚಿಕೊಳ್ಳುತಿದ್ದ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ದಾಖಲಾದ ಬಗ್ಗೆ ಮನೆಯಿಂದ ಫೋನ್ ಬಂದಿದೆ. ವಿವರಣೆ ಬಗ್ಗೆ ಶಾಲೆಗೆ ಫೋನ್ ಹಾಯಿಸಿದರೆ ಯಾವುದೇ ಸಮರ್ಪಕ ಉತ್ತರವಿಲ್ಲ. ಸಹೋದ್ಯೋಗಿಳು ಶಾಲೆಗೆ ಹೋದಾಗ ಆಸ್ಪತ್ರೆ ದಾಖಲಾದ ಬಗ್ಗೆಗೆ ವಿವರಣೆ. ಆಸ್ಪತ್ರೆಯಲ್ಲಿ ಶಾಲಾ ಆಡಳಿತ ಮಂಡಳಿ ಮುಖ್ಯಸ್ಥರು ಸಿಬ್ಬಂದಿ ಯಾರು ಇಲ್ಲ. ಆಡಳಿತ ಮಂಡಳಿ ಅಧ್ಯಕ್ಷ ಸೇಠ್ ಪಾರಸಮಲ್ ಸುಖಾಣಿ ರಾಯಚೂರು ಜಿಲ್ಲಾ ಕಾಂಗ್ರೆಸ್ ಪಕ್ಷದ ಖಜಾಂಚಿ, ಮಾಜಿ ನಗರ ಸಭೆ ಅಧ್ಯಕ್ಷ. ಹಣದ ಬಲದಿಂದ ರಾಯಚೂರು ನಗರದ ತುಂಬೆಲ್ಲಾ ಖಾಸಗಿ ಶಾಲೆಗಳನ್ನು ತೆರೆದಿದ್ದಾನೆ. ಶತಮಾನೋತ್ಸವ ಆಚರಿಸಿದ ತಾರನಾಥ ಶಿಕ್ಷಣ ಸಂಸ್ಥೆ, ಮದರ್ ಟ್ರಸ್ಟ್, ಕರ್ನಾಟಕ ವೆಲ್‌ಫೇರ್ ಟ್ರಸ್ಟ್, ರಾಯಚೂರು ನಗರದ ಖಾಸಗಿ ವಿದ್ಯಾಸಂಸ್ಥೆಗಳ ಅಧ್ಯಕ್ಷರು ಇವರೆ. ಇಂಗ್ಲಿಷ್ ಮಾಧ್ಯಮಕ್ಕೆ ಇರುವ ತೀವ್ರವಾದ ಬೇಡಿಕೆಯನ್ನ ಲಾಭದ ಉದ್ಯಮವನ್ನಾಗಿ ಮಾಡಿಕೊಂಡು ಸಾವಿರಾರು ರೂಪಾಯಿಗಳ ಡೊನೇಶನ್ ಪಡೆಯುವ ಮೂಲಕ ಜನರನ್ನು ಲೂಟಿ ಮಾಡುವ ಭೂಪ. ಶಾಲೆಗಳಲ್ಲಿ ಯಾವುದೇ ಸೌಲಭ್ಯ ಕೇಳಿದರೂ ದರ್ಪದಿಂದ ತಿರಸ್ಕರಿಸುತ್ತಾನೆ.


ಮಗು ಬಿದ್ದ ತೆರೆದ ಗುಂಡಿ

ಸಿಬ್ಬಂದಿಗೂ ಕನಿಷ್ಟ ಸಂಬಳ ನೀಡುತ್ತಿಲ್ಲ. ಘಟನೆಗೆ ಸಂಬಂಧಿಸಿದಂತೆ ತಾನು ಊರಲ್ಲಿ ಇಲ್ಲ ಎಂಬ ಕಾರಣಕ್ಕೆ ಯಾರೊಬ್ಬರು ಬಾಯಿಬಿಡದಂತೆ ಸಿಬ್ಬಂದಿಗೆ ಭಯಗೊಳಿದ್ದಾನೆ. ಕೆಲವು ಪತ್ರಿಕೆಗಳಂತೂ ಸಾಮಾನ್ಯ ಘಟನೆಯಂತೆ ಸುದ್ದಿ ಮಾಡಿ ಕೈತೊಳೆದು ಕೊಂಡಿವೆ.

ಮಾನಸಿಕ ಆಘಾತ

ಘಟನೆಯಿಂದ ಮಾನಸಿಕ ಆಘಾತಕ್ಕೆ ಒಳಗಾಗಿರುವ ಶೈಲಜಾ ಮಗನ ಸಾವನ್ನು ಸ್ವೀಕರಿಸುತ್ತಿಲ್ಲ. ಮೃತದೇಹವನ್ನು ನೋಡಲು ಒಪ್ಪಲಿಲ್ಲ. ನನ್ನ ಮಗನನ್ನು ಸ್ಕೂಲಿಗೆ ನಾನೆ ಮುತ್ತು ನೀಡಿ ಆಟೋ ಹತ್ತಿಸಿದ್ದೇನೆ. ನೀವೆಲ್ಲಾ ಸುಳ್ಳು ಹೇಳುತ್ತೀರಿ ಎಂದು ಎಲ್ಲಾರ ಮೇಲೆ ಸಿಟ್ಟಿನಿಂದ ಆವೇಶಭರಿತಳಾಗಿ ವರ್ತಿಸಿದ ರೀತಿ ಜನರ ಕರಳು ಕಿತುಬರುವಂತಿತ್ತು. ತಂದೆ ರವಿ ಹೈದ್ರಾಬಾದಿನಿಂದ ರಾಯಚೂರಿಗೆ ಬಂದಾಗ ರಾತ್ರಿ 8.30. ರವಿಯ ಪಾಲಕರು ಸಹೋದರರು ನೆರದ ಜನರ ಆಕ್ರಂದನ ಮುಗಿಲು ಮುಟ್ಟುವಂತಿತ್ತು. ನನ್ನ ಮಗನ ಗತಿ ಮತ್ತೊಬ್ಬರಿಗೆ ಬರದಂತೆ ಕ್ರಮ ಕೈಗೊಳ್ಳಿರೆಂದು ನೆರದ ಪೋಲೀಸ್ ಅಧಿಕಾರಿಗಳು ಮತ್ತು ಸಂಗಾತಿಗಳಲ್ಲಿ ಮಾಡುತ್ತಿದ್ದ ರೋದನೆ, ಮನಕಲಕುವಂತಿತ್ತು. ಪ್ರಾರಂಭದಲ್ಲಿ ದೂರು ತೆಗದುಕೊಳ್ಳದೆ ಮುಚ್ಚಿ ಹಾಕುವ ಪ್ರಯತ್ನದಲ್ಲಿದ್ದ ಪೋಲೀಸ್ ಅಧಿಕಾರಿಗಳು ವಿವಿಧ ಸಾಮೂಹಿಕ ಸಂಘಟನೆಗಳ ಸಂಗಾತಿಗಳು ಪ್ರತಿಭಟಿಸಿದ್ದರಿಂದ ತಮ್ಮ ಆಟ ನಡೆಯುವದಿಲ್ಲ ಎಂದು ತಿಳಿದು ದೂರು ದಾಖಲಿಸಿಕೊಂಡರು. ಕರ್ನಾಟಕ ವೆಲ್‌ಫೇರ್ ಟ್ರಸ್ಟ್‌ನ ಆಡಳಿತ ಮಂಡಳಿಯ ಅಧ್ಯಕ್ಷ ಪಾರಸುಮಲ್ ಸುಖಾಣಿ, ವೈದ್ಯರಾದ ಕಾರ್ಯದರ್ಶಿ ಡಾ|| ಶಂಕರಗೌಡ ಅಮರಖೇಡ್, ಸಹ ಕಾರ್ಯದರ್ಶಿ ಡಾ|| ರವಿ ರಾಜೇಶ್ವರನ್, ಖಜಾಂಚಿ ರವಿ ರಾಜನ್ ಅಧೀಕ್ಷಕ ಸೂರ್ಯನಾರಾಯಣ, ಪ್ರಾಚಾರ್ಯ ಸುದೀರ್‌ಕೃಷ್ಣ ಆಡಳಿತ ಮಂಡಳಿಯನ್ನು ಸಾವಿಗೆ ಜವಾಬ್ದಾರಿಯರನ್ನಾಗಿ ಮಾಡಿ ಸೋಮವಾರಪೇಟೆ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಹೆಸರನ್ನು ನಮೂದಿಲು ಒಪ್ಪದ ಪೋಲೀಸ್ ಇಲಾಖೆ ಸಂಗಾತಿಗಳ ಒತ್ತಡಕ್ಕೆ ಮಣಿಯಲೇ ಬೇಕಾಗಿತು.

ಕಾಂ|| ಎಂ. ರವಿಯ ಕುಟುಂಬ ಇನ್ನು ಈ ಘಟನೆಯ ಆಘಾತದಿಂದ ಹೊರ ಬಂದಿಲ್ಲ. ರವಿಯ ಸಹೋದರಿ ಶ್ವೇತಾ ರಿಷಬ್‌ನನ್ನು ಹುಡುಕಿಕೊಂಡು ಶಾಲೆಗೆ ಹೋದರೆ ಶೈಲಜಾ ಆಟೋ ಡ್ರೈವರ್, ಅಜ್ಜನಮನೆಯಲ್ಲಿ ಹುಡಿಕಿಕೊಂಡು ಹೋಗಿರುವುದು ನೋಡಿದರೆ ಇನ್ನು ಆಘಾತದಿಂದ ಕುಟುಂಬ ಹೊರ ಬಂದಿಲ್ಲ ಎಂದು ಕಂಡುಬರುತ್ತಿದೆ. ಕಾಂ|| ರವಿ ಮತ್ತು ಶೈಲಜಾರ ಕುಟುಂಬ ಧೈರ್ಯ ತಂದುಕೊಳ್ಳಬೇಕು. ಈಗಾಗಲೇ ಜಿಲ್ಲಾದ್ಯಂತ ವಿವಿದ ಸಂಘ ಸಂಸ್ಥೆಗಳು ಘಟನೆಯನ್ನು ಪ್ರತಿಭಟಿಸಿವೆ. ರವಿಯ ಆಶಯದಂತೆ ಮತ್ತೊಂದು ಇಂತಹ ಘಟನೆ ಸಂಭವಿಸದಂತೆ ಕ್ರಮಕೈಗೊಳ್ಳಲು ವಿದ್ಯಾರ್ಥಿಗಳ ಹಿತ ರಕ್ಷಣೆಗಾಗಿ ಐಕ್ಯತೆಯ ಚಳುವಳಿ ರೂಪಿಸಲು ಸಮಿತಿ ರಚನೆಗೆ ಮುಂದಾಗಿದೆ. ಜಾಗತೀಕರಣದ ಯುಗದಲ್ಲಿ ಶಿಕ್ಷಣ ಸಂಸ್ಥೆಗಳು ಹಣ ಬಾಚಿಕೊಳ್ಳುವ ಭರದಲ್ಲಿ ಮಕ್ಕಳ ಸುರಕ್ಷತೆಯ ಬಗೆಗೆ ಮರೆತೇ ಬಿಟ್ಟಿರುವುದು ದುರಂತವಾಗಿದೆ.

- ಜೆ.ಎಮ್. ಚನ್ನಬಸಯ್ಯ

ಮಾನವ ಹಕ್ಕುಗಳೂ ಮತ್ತು ಮಹಿಳೆ....

ಪುಟ 5 ರಿಂದ

ಆಸ್ತಿ ಹಕ್ಕು ಕುರಿತು ತಿದ್ದುಪಡಿಗಳು ಬಂದಿವೆ.

ದುಡಿಯುವ ಮಹಿಳೆಯರ ಹಕ್ಕು ರಕ್ಷಿಸಲು 1948ರ ಕಾನೂನಿನಲ್ಲಿ ಅಪಾಯಕಾರಿ ಕೆಲಸದಲ್ಲಿ ಮಹಿಳೆಯರನ್ನು ನೇಮಿಸದಂತೆ ನಿರ್ಬಂಧಿಸಿದೆ. ಮಾತೃತ್ವದ ಹಕ್ಕು ರಕ್ಷಣೆಗೆ 1961ರಲ್ಲಿ ಹೆರಿಗೆ ಸೌಲಭ್ಯ ಕಾನೂನು ಜಾರಿಗೆ ಬಂತು. ಇದರ ಪ್ರಕಾರ ಎಲ್ಲ ಕಾರ್ಖಾನೆಗಳು, ಪ್ಲಾಂಟೇಶನ್, ಗಣಿ ಇತ್ಯಾದಿಗಳಲ್ಲಿ ಗರ್ಭಿಣಿ, ಬಾಣಂತಿಯರು ವಿಶೇಷ ಸೌಲಭ್ಯ ಪಡೆಯಬೇಕು. ಹೆರಿಗೆ ಪೂರ್ವ ಹಾಗೂ ನಂತರದ ಕರ್ತವ್ಯ ಪೂರೈಸಲು, ಹೆರಿಗೆ ಭತ್ಯೆ, ರಜಾ, ವೈದ್ಯಕೀಯ ಸೌಲಭ್ಯ, ಶಿಶುಪಾಲನಾ ಕೇಂದ್ರ ಪಡೆಯಲು ಆಕೆ ಹಕ್ಕುದಾರರು. ಈ ಕಾರಣಕ್ಕಾಗಿ ಕೆಲಸದಿಂದ ಆಕೆಯನ್ನು ತೆಗೆದುಹಾಕುವಂತಿಲ್ಲ. ಇದರರ್ಥವಿಷ್ಟೇ ಮಕ್ಕಳನ್ನು ಪಡೆಯುವುದು ಕೇವಲ ತಾಯಿಯ ಕರ್ತವ್ಯವಲ್ಲ, ಸಮಾಜದ, ದೇಶದ ಸಂಪೂರ್ಣ ಜವಾಬ್ದಾರಿ ಎಂದು.

ಅಂತರರಾಷ್ಟ್ರೀಯ ಮಹಿಳಾ ವರ್ಷ

1975ನ್ನು ಅಂತರರಾಷ್ಟ್ರೀಯ ಮಹಿಳಾ ವರ್ಷವಾಗಿ ವಿಶ್ವ ಸಂಸ್ಥೆ ಘೋಷಿಸಿತು. ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ವಿಶ್ವದೆಲ್ಲೆಡೆ ಚಳುವಳಿಗಿಳಿದುದನ್ನು ಕಾಣಬಹುದು. 1976ರಲ್ಲಿ ಸಮಾನ ವೇತನ ಕಾಯ್ದೆ ಭಾರತದಲ್ಲಿ ಜಾರಿಗೆ ಬಂತು. ಭಾರತವು ವಿಶ್ವ ಸಂಸ್ಥೆಯ ಸದಸ್ಯ ರಾಷ್ಟ್ರವಾಗಿ ಅಂತರರಾಷ್ಟ್ರೀಯ ಒಪ್ಪಂದಗಳನ್ನು ತನ್ನ ದೇಶದಲ್ಲಿ ಜಾರಿ ಮಾಡಲೇ ಬೇಕು. ಹಾಗಾಗಿಯೇ 1980ನೇ ದಶಕದಲ್ಲಿ ವರದಕ್ಷಿಣೆ, ಅತ್ಯಾಚಾರಕ್ಕೆ ಸಂಬಂಧಿಸಿ ಭಾರತೀಯ ದಂಡ ಸಂಹಿತೆ ಐಪಿಸಿ, ದಂಡ ಪ್ರಕ್ರಿಯಾ ಸಂಹಿತೆ ಸಿಆರ್‌ಪಿಸಿ, ಸಾಕ್ಷ್ಯ ಅಧಿನಿಯಮ, ವರದಕ್ಷಿಣೆ ನಿಷೇಧ ಕಾನೂನಿಗೆ ತಿದ್ದುಪಡಿಗಳಾದವು. 1984ರಲ್ಲಿ ವರದಕ್ಷಿಣೆ ಸಾವಿಗೆ ಸಂಬಂಧಿಸಿ ವಿಶೇಷ ನ್ಯಾಯಾಲಯ, ಕೌಟುಂಬಿಕ ನ್ಯಾಯಾಲಯಗಳ ಅಧಿನಿಯಮ ಜಾರಿಗೆ ಬಂತು. ಮಹಿಳಾ ಪೋಲಿಸ್ ಠಾಣೆಗಳು ಹಲವು ರಾಜ್ಯಗಳಲ್ಲಿ ಆದವು. ಇತ್ತೀಚೆಗೆ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಜಾರಿಗೆ ಬಂದಿದೆ.

ಸಂವಿಧಾನದ 73ನೇ ತಿದ್ದುಪಡಿಯಂತೆ 1992ರಲ್ಲಿ ಪಂಚಾಯ್ತಿಗಳಲ್ಲಿ ಶೇ.33 ಮೀಸಲಾತಿಯು ಬಂತು. ಆದರೆ ಶಾಸನ ಸಭೆ, ಲೋಕಸಭೆಗಳಲ್ಲಿ ಇನ್ನು ಈ ಚಳುವಳಿಗೆ ಯಶ ಸಿಕ್ಕದಿರುವುದು ಪುರುಷ ಪ್ರಧಾನ ಸಮಾಜದ ದೌರ್ಬಲ್ಯಕ್ಕೊಂದು ಕನ್ನಡಿ ಎಂದೇ ಹೇಳಬೇಕಾಗುತ್ತದೆ.

ಲೈಂಗಿಕ ಕಿರುಕುಳದ ವಿರುದ್ಧ

ಉದ್ಯೋಗಸ್ಥ ಸ್ಥಳದಲ್ಲಿ ಲೈಂಗಿಕ ಕಿರುಕುಳದ ಘಟನೆ, ಸಾಮೂಹಿಕ ಅತ್ಯಾಚಾರ, ಸಂಶಯಾಸ್ಪದ ಸಾವು, ಪೋಲಿಸ್ ಠಾಣೆಗಳಲ್ಲಿ ಅನುಚಿತ ವರ್ತನೆ, ಉತ್ತಮ ಆಹಾರ, ಶಿಕ್ಷಣ, ಸಾಮಾಜಿಕ ಸ್ಥಾನಮಾನದಿಂದ ವಂಚನೆ ಇವೆಲ್ಲ ಮಹಿಳೆಯರ ಧೈರ್ಯ ಕುಗ್ಗಿಸುವಂಥವು. ಹಾಗಾಗಿ ಮಹಿಳೆಯರಿಗೆ, ಉಚಿತ ಕಾನೂನು ತಿಳುವಳಿಕೆ ಅಗತ್ಯ. 1997ರ ಆಗಸ್ಟ್ 14 ರಂದು ಮಾನ್ಯ ಸುಪ್ರೀಂಕೋರ್ಟ್ ಲೈಂಗಿಕ ಕಿರುಕುಳದ ವಿರುದ್ಧ ನೀಡಿದ ತೀರ್ಪು ಸಾರ್ವಜನಿಕ ಹಿತ ದೃಷ್ಟಿಯಿಂದ ಮಹತ್ವದ ಹೆಜ್ಜೆ ಅದರ ಮಾರ್ಗದರ್ಶಿ ಸೂತ್ರಗಳು ಭಾರತದಲ್ಲಿ ಜಾರಿಯಾಗಬೇಕು. 1995ರಲ್ಲಿ ಬೀಜಿಂಗ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ಸಮ್ಮೇಳನದ ಘೋಷಣೆ ಪಾಲಿಸಬೇಕಿದೆ. ಇತ್ತೀಚಿನ ಜಾಗತೀಕರಣ ನೀತಿ ಕೂಡ ಮಹಿಳೆಯ ಹಕ್ಕುಗಳನ್ನು ಕಸಿದುಕೊಳ್ಳುತ್ತಿದೆ. ಇದರ ಅಪಾಯದ ಬಗ್ಗೆ ಎಚ್ಚರಿಕೆ ಅತ್ಯಗತ್ಯ.

ಕೊನೆಯದಾಗಿ ನಾನು ಹೇಳುವುದಿಷ್ಟೇ, ನಮ್ಮಲ್ಲಿ ಕಾನೂನಿಗೆ ಬರಗಾಲವಿಲ್ಲ. ಅದರಲ್ಲಿಯ ಅಂಶಗಳು ಮಹಿಳಾ ಪರವಾಗಿ, ಮನುಷ್ಯತ್ವದೊಂದಿಗೆ ಇರುವುದು ಯಾವುದು, ಅವುಗಳ ಜಾರಿಗೆ ಅಗತ್ಯ ಕ್ರಿಯಾಶೀಲಕ್ರಮದ ಕೊರತೆ ಇದೆ. ಬಹುತೇಕ ಎಲ್ಲ ಕಾನೂನುಗಳನ್ನು ಮಹಿಳೆಯರಿಗೆ ಪುರುಷರು ಅಧಿಕಾರಸ್ಥಾನದಿಂದ ಮಾಡಿದವೇ ಆದ್ದರಿಂದ ಕಾನೂನಿನಲ್ಲೂ ಮಹಿಳೆಯರನ್ನು ಬಾಧಿಸುವ ಅಂಶಗಳು ಸಾಕಷ್ಟಿವೆ ಎಂದು ಇತಿಹಾಸ ತಿಳಿಸಿದೆ. ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯವಿಲ್ಲದೇ ಎಷ್ಟೇ ಮೂಲಭೂತ ಹಕ್ಕುಗಳನ್ನು ನೀಡಿದರೂ ಅದು ಪ್ರಯೋಜನವಾಗದು ಎಂದು ಖ್ಯಾತ ಚಿಂತಕ, ದುಡಿವ ವರ್ಗದ ನೇತಾರ ಬಿ.ಟಿ.ರಣದಿವೆ ಹೇಳಿದ್ದು ಅತ್ಯಂತ ಸೂಕ್ತ. ಹಾಗಾಗಿ ಮಹಿಳೆಯರನ್ನು ಎಲ್ಲಾ ಸ್ತರಗಳಲ್ಲಿ ಗೌರವಿಸುವ, ದೇಶದ ಪ್ರಗತಿಗೆ ಶ್ರಮಿಸಿದ ಆಕೆಯ ದುಡಿಮೆಯನ್ನು ಅಭಿವೃದ್ಧಿ ಸೂಚ್ಯಂಕಕ್ಕೆ ಸೇರಿಸಿಕೊಳ್ಳುವ, ಆರ್ಥಿಕ ಸ್ವಾತಂತ್ರ್ಯ ಕಡ್ಡಾಯವಾಗಿ ಒದಗಿಸುವ, ಕಾನೂನು ರಚನೆಯಲ್ಲಿ ತಳಮಟ್ಟದಲ್ಲಿ ಮಹಿಳೆಯರನ್ನು ಭಾಗಿಯಾಗಿಸುವ ಪ್ರಕ್ರಿಯೆ ಆಗಬೇಕು. ಸಮಾನತೆಗಾಗಿನ ಹೋರಾಟ ಸ್ತ್ರೀ ಪುರುಷರಿಬ್ಬರದೂ ಆಗಬೇಕು. ಆಗಲೇ ಶೋಷಣೆ ನಿಲ್ಲುತ್ತದೆ. ಶೋಷಿತರ ಪರ ಚಳುವಳಿ ನಡೆದಾಗಲೇ ಕಾನೂನು ಕಣ್ತೆರೆಯುವುದು; ಮಾನವೀಯ ಮುಖ ಹೊಂದುವುದು; ಕ್ರಿಯಾತ್ಮಕವಾಗಿ ಜಾರಿಗೊಳ್ಳುವುದು ವಿನಃ ಎಷ್ಟೇ ಅಂತರರಾಷ್ಟ್ರೀಯ ಘೋಷಣೆಗಳಲ್ಲಿ ಒಪ್ಪಂದಗಳು, ರಾಷ್ಟ್ರೀಯ ನೀತಿಗಳು, ನ್ಯಾಯಾಲಯಗಳ ಸೂಚನೆಗಳು ಇದ್ದರೂ ಜಿಡ್ಡುಗಟ್ಟಿದ ಸಮಾಜದ ಬೌದ್ಧಿಕತೆಗೆ ಚಳುವಳಿಯ ಘರ್ಜನೆ ಸಿಡಿಯದಿದ್ದರೆ ಯಾವುದೂ ಜಾಗಯಾಗದು.

ನ್ಯಾಯಾಂಗದ ಅತಿ ಕ್ರಿಯಾಶೀಲತೆ ಕುರಿತು

ಮೈಲುಗಲ್ಲಾದ ತೀರ್ಪು

'ನ್ಯಾಯಮೂರ್ತಿಗಳು ತಮ್ಮ ಮಿತಿಯನ್ನು ಅರಿತುಕೊಳ್ಳಬೇಕು ಮತ್ತು ಅವರು ಸರ್ಕಾರ ನಡೆಸಲು ಪ್ರಯತ್ನಿಸಬಾರದು' ಎಂಬ ನ್ಯಾಯಾಲಯದ್ದೇ ಆದ ತೀರ್ಪಿನ ಸಾರ ತುಂಬಾ ಮಹತ್ವದ್ದು



ನ್ಯಾಯಾಂಗವು ಶಾಸಕಾಂಗ ಅಥವಾ ಕಾರ್ಯಾಂಗದ ಕಾರ್ಯಗಳ ಮೇಲೆ ಸವಾರಿ ಮಾಡುತ್ತಿರುವ ಬಗ್ಗೆ ಸ್ವತಃ ಸರ್ವೋಚ್ಚ ನ್ಯಾಯಾಲಯವೇ ಸಂಯಮದಿಂದ ಇರಬೇಕೆಂದು ಹೇಳಿರುವುದು ಅದೊಂದು ಮೈಲಿಗಲ್ಲಿನ ತೀರ್ಪೆಂದೆ ಪರಿಗಣಿಸಬೇಕಾಗಿದೆ. ಈ ಬಗ್ಗೆ ನಾವು ಮೊದಲಿನಿಂದಲೂ ವ್ಯಕ್ತಪಡಿಸುತ್ತಲೇ ಬಂದಿದ್ದ ಅಭಿಪ್ರಾಯಕ್ಕೆ ಸಿಕ್ಕ ಸಮರ್ಥನೆಯಾಗಿದೆ.


2005ರ ಜಾರ್ಖಂಡ್ ಅಸೆಂಬ್ಲಿ ಪ್ರಕರಣ ಮತ್ತು 1998ರ ಜಗದಾಂಬಿಕಪಾಲ್ ಪ್ರಕರಣಗಳಲ್ಲಿ ಸ್ವತಃ ಸರ್ವೋಚ್ಚ ನ್ಯಾಯಾಲಯ ನೀಡಿದ್ದ ತೀರ್ಪನ್ನು ವಿಮರ್ಶೆಗೊಳಪಡಿಸಿರುವ ನ್ಯಾಯಮೂರ್ತಿಗಳಾದ ಎ.ಕೆ.ಮಾಥುರ್ ಹಾಗೂ ಮಾರ್ಕಂಡೇಯ ಕಾಡ್ಜ ನೇತೃತ್ವದ ಪೀಠವು, ಈ ಎರಡು ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಕಣ್ಣಿಗೆ ಕುಕ್ಕುವ ದಿಸೆಯಲ್ಲಿ ಸಂವಿಧಾನವು ಕೂಡ ಮಾಡಿದ ಅಧಿಕಾರ ಪ್ರತ್ಯೇಕಿಕರಣದಿಂದ ದೂರ ಸರಿದಿದೆ ಎಂದು ಅಭಿಪ್ರಾಯಪಟ್ಟಿದೆ.

ನ್ಯಾಯಾಂಗ ಕ್ರಿಯಾಶೀಲತೆಯೆಂದರೆ ನ್ಯಾಯಾಲಯದ ಸಾಹಸವಾದವಾಗಬಾರದು ಎಂಬ ಎಚ್ಚರಿಕೆ ನೀಡಿರುವ ಪೀಠ, ನ್ಯಾಯಮೂರ್ತಿಗಳಿಂದ ಶಾಸಕಾಂಗ ಅಥವಾ ಕಾರ್ಯಾಂಗಕ್ಕೆ ಸಂಬಂಧಿಸಿ ಪದೇ ಪದೇ ಇಂತಹುದೇ ಅಸಮರ್ಥನೀಯ ತೀರ್ಪುಗಳು ಬರುತ್ತಿರುವುದನ್ನು ಗಮನಿಸಿ ನಾವು ಈ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದೇವೆ. ಪ್ರಭುತ್ವದ ಪ್ರಮುಖ ಭಾಗವಾದ ಶಾಸಕಾಂಗ- ಕಾರ್ಯಾಂಗದ ಮೇಲೆ ನ್ಯಾಯಮೂರ್ತಿಗಳು ತಮ್ಮ ಮಿತಿಯನ್ನು ಮೀರಿ ನ್ಯಾಯಾಂಗ ಕ್ರಿಯಾಶೀಲತೆ ಹೆಸರಲ್ಲಿ ವರ್ತಿಸುತ್ತಿರುವುದು ಸಂವಿಧಾನದ ಸ್ಪಷ್ಟ ಉಲ್ಲಂಘನೆಯೇ ಸರಿ. ಆದ್ದರಿಂದ ನ್ಯಾಯಮೂರ್ತಿಗಳು ತಮ್ಮ ಮಿತಿಯನ್ನು ಅರಿತುಕೊಳ್ಳಬೇಕು. ಮತ್ತು ಅವರು ಸರ್ಕಾರವನ್ನು ನಡೆಸಲು ಪ್ರಯತ್ನಿಸಬಾರದು. ಅಲ್ಲದೆ ನ್ಯಾಯಮೂರ್ತಿಗಳು ಸದಾ ಸಭ್ಯರು ಹಾಗೂ ಗೌರವಾನ್ವಿತರಾಗಿರಬೇಕೆ ಹೊರತು ಸಾಮ್ರಾಟರಂತೆ ವರ್ತಿಸಬಾರದೆಂದು ಪೀಠ ಅಭಿಪ್ರಾಯಪಟ್ಟಿದೆ.

ಸರ್ವೋಚ್ಚ ನ್ಯಾಯಾಲಯದ ಈ ತೀರ್ಪಿನ ಹಿನ್ನೆಲೆಯಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ನಡುವಿನ ಅಧಿಕಾರ ಪ್ರತ್ಯೇಕೀಕರಣವನ್ನು ನಿರ್ದಿಷ್ಟವಾಗಿ ಗುರ್ತಿಸಿಕೊಳ್ಳಲು ಸಾಧ್ಯವಾಗಬೇಕು. ಮತ್ತು ಈ ಮೂರು ಅಂಶಗಳ ನಡುವೆ ಸಾಮನ್ವಯತೆ ಕಾಯ್ದುಕೊಳ್ಳಲು ಬೇಕಾದ ವ್ಯವಸ್ಥೆಯನ್ನು ರೂಪಿಸಬೇಕಾಗಿದೆ. ಸಂವಿಧಾನವು ಇದಕ್ಕೆ ಸಂಬಂಧಿಸಿದಂತೆ ಜನತೆಯ ಇಚ್ಛೆಯೇ ಕೇಂದ್ರವಾಗಿರಬೇಕೆಂದು ವ್ಯಾಖ್ಯಾನಿಸಿದೆ. ಈ ಬಗ್ಗೆ ಸಂವಿಧಾನವು ತನ್ನ ಪ್ರಸ್ತಾವನೆಯಲ್ಲಿ ನಿಷ್ಣಾತವಾಗಿ ಹೀಗೆ ಹೇಳಿದೆ. 'ಭಾರತದ ಜನಗಳಾದ ನಾವು ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ' ಅಂದರೆ ಈ ಸಂದೇಶ ನೀಡುವ ನಿರಂತರತೆ ಯೆಂದರೆ ಜನತೆಯ ಸಾರ್ವಭೌಮತ್ವವೇ ನಮ್ಮ ಸಂವಿಧಾನದ ಪ್ರಧಾನ ವ್ಯವಸ್ಥೆಯೆಂಬುದಾಗಿದೆ.

ನ್ಯಾಯ ಪಂಡಿತರೂ ಆದ ಲೋಕಸಭಾ ಸ್ಪೀಕರ್ ಒಮ್ಮೆ ಹೀಗೆ ಗುರ್ತಿಸಿದ್ದರು. "ನಮ್ಮ ಸಂವಿಧಾನ ಸ್ಥಾಪಕರು ಜನತೆಗೆ ತಮ್ಮ ನ್ಯಾಯದ ಹಕ್ಕುಗಳನ್ನು ದೊರಕಿಸುವ ಅಪರಿಮಿತವಾದ ಉದ್ದೇಶದಿಂದ ಸ್ವತಂತ್ರವಾದ ನಿಷ್ಪಕ್ಷಪಾತವಾದ ನ್ಯಾಯಾಂಗ ಪರಾಮರ್ಶೆ ಇರಬೇಕೆಂದು ಅವಕಾಶ ಮಾಡಿದ್ದರು. ಇಂತಹ ಅವಕಾಶವನ್ನು ಬಳಸಿಕೊಳ್ಳುವ ಮೂಲಕ ನ್ಯಾಯಾಂಗವು ಜನತೆಯ ಹಕ್ಕುಗಳ ಪರಿಪಾಲಕನಾಗಬೇಕು ಎಂಬುದು ಅವರ ಆಶಯವಾಗಿತ್ತು. ಅದಕ್ಕಾಗಿಯೇ ಕಾನೂನನ್ನು ವಿಮರ್ಶಿಸುವ ಅಧಿಕಾರವನ್ನು ನೀಡಲಾಗಿತ್ತು. ಆದರೆ ಸರ್ಕಾರ ಅದರ ನೀತಿಗಳು ಮುಜುಗರಕ್ಕೊಳಗಾಗಿರುವ ಕಾರಣ, ಅದನ್ನು ಮಾಡದಿರುವಂತಹ ವಿನಂತಿಯನ್ನು ನಾವು ಮಾಡುವಂತಹ ಸ್ಥಿತಿ ಬಂದಿದೆ. ಯಾಕೆಂದರೆ ನ್ಯಾಯದ ವಿಮರ್ಶೆ ಎಂಬುದು ನ್ಯಾಯಾಂಗದ ಸಾಹಸವಾದವಾಗಿ ಮಾರ್ಪಟ್ಟಿದೆ" ಎಂದಿದ್ದರು.

ಸ್ವಾತಂತ್ರ್ಯ ದೊರೆತ ನಂತರ ರಚನೆಯಾದ ಶಾಸನಸಭೆಯಲ್ಲಿ ಜವಹರಲಾಲ್ ನೆಹರು ಹೀಗೆ ಹೇಳಿದ್ದರು. 'ಒಟ್ಟಾರೆ ಜನಸಮುದಾಯದ ಸಾರ್ವಭೌಮತ್ವವಾಗಿರುವ ಸಂಸತ್ತಿನ ವಿರುದ್ಧ ಸರ್ವೋಚ್ಚ ನ್ಯಾಯಾಲಯವಾಗಲಿ,



ನ್ಯಾಯಾಂಗವಾಗಲಿ ನಿಲ್ಲಬಾರದು. ಒಂದು ವೇಳೆ ನಾವು ಎಡವಿದರೆ ಅದರ ಬಗ್ಗೆ ಎತ್ತಿ ತೋರಿಸಬಹುದು. ಅಂದರೆ ಇದರ ಒಟ್ಟಾರೆ ವಿಶ್ಲೇಷಣೆ ಎಂದರೆ ಒಟ್ಟಾರೆಯ ಜನತೆಯ ಹಿತವೇ ಮುಖ್ಯವಾದದು ಹಾಗಾಗೀ ನ್ಯಾಯಾಂಗ ಆ ಹಾದಿಯಲ್ಲಿ ಸಾಗಬಾರದು. ಇದರರ್ಥವನ್ನು ನಾವು ನೆನಪಿಸಿಕೊಳ್ಳುವುದಾದರೆ ಅಂತಿಮವಾಗಿ ಶಾಸಕಾಂಗವೇ ಅತ್ಯುನ್ನತವಾದುದು. ಸಾಮಾಜಿಕ ಸುಧಾರಣೆಯ ಹೆಸರಲ್ಲಿ ನ್ಯಾಯಾಂಗವು ಅದರಲ್ಲಿ ಹಸ್ತಕ್ಷೇಪ ನಡೆಸುವುದು ಸರಿಯಲ್ಲ ಎನ್ನುವುದು.

ಸಂವಿಧಾನ ಬದ್ಧವಾದ ಈ ಅಂಗಗಳ ಮೇಲೆ ಆಗುತ್ತಿರುವ ಈ ಅತಿಕ್ರಮಣದಿಂದ ಅವುಗಳನ್ನು ರಕ್ಷಿಸದಿದ್ದರೆ ಕೆಳಹಂತದಲ್ಲಿ ಅರಾಜಕತೆಯ ಆಡಳಿತಕ್ಕೆ ಕಾರಣವಾಗುತ್ತದೆ. ಕಾರ್ಯಾಂಗದ ಅಸಮರ್ಪಕತೆ ಮತ್ತು ಅದನ್ನು ಸುತ್ತುವರೆದಿರುವ ಶಾಸಕಾಂಗದ ನಿರಂತರ ಅಡ್ಡಿಗಳು ಮುಖ್ಯವಾಗಿ ನ್ಯಾಯಾಂಗ ಮಧ್ಯಪ್ರವೇಶಕ್ಕೆ ಕಾರಣವಾಗುತ್ತಿವೆ. ಈ ಬಗ್ಗೆ ಜಸ್ಟೀಸ್ ವರ್ಮ ಒಂದು ಸಂದರ್ಭದಲ್ಲಿ ಹೀಗೆಂದಿದ್ದರು.

'ಕೆಲವು ಸ್ಥಾಪಿತ ಹಿತಾಸಕ್ತಿಗಳು ತಮ್ಮ ರಾಜಕೀಯ ಹಿತಾಸಕ್ತಿಗಳಿಗೆ ನ್ಯಾಯಾಂಗವನ್ನು ದುರ್ಬಳಕೆ ಮಾಡಿಕೊಳ್ಳುತ್ತವೆ. ಅಥವಾ ರಾಜಕೀಯವಾಗಿ ಎದುರಿಸಲಾಗದ ಹಲವಾರು ಕ್ಲಿಷ್ಟ ಸಮಸ್ಯೆಗಳನ್ನು ನ್ಯಾಯಾಂಗ ಮೇಲೆ ಹೂರಿಸಿ ಆ ಮೂಲಕ ತೀರ್ಪುಗಳು ಬರುವಂತೆ ಮಾಡಿ ಅವುಗಳನ್ನು ಕಾರ್ಯಾಂಗ ಜಾರಿಗೊಳಿಸಬೇಕಾದ ಪರಿಸ್ಥಿತಿಯನ್ನು ನಿರ್ಮಿಸುತ್ತಾರೆ'.

ಆದರೆ ಪ್ರಸ್ತುತ ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪಿನಲ್ಲಿ ಇಂತಹ ನ್ಯಾಯಾಂಗ ಅತಿಕ್ರಮಣ ಬಗ್ಗೆ ಎಚ್ಚರಿಕೆ ನೀಡಿದೆ. 'ಶಾಸಕಾಂಗ ಮತ್ತು ಕಾರ್ಯಾಂಗಗಳು ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸಿಲ್ಲ ಎಂಬ ಕಾರಣದಿಂದ ನ್ಯಾಯಾಂಗವು ಅವುಗಳ ಮೇಲೆ ಅತಿಕ್ರಮಣ ಮಾಡಿರುವುದಕ್ಕೆ ಸಮರ್ಥನೆ ಮಾಡಿಕೊಳ್ಳಬಹುದು. ಆದರೆ ಅದೇ ನ್ಯಾಯಾಂಗದಲ್ಲಿ ಅರ್ಧ ಶತಮಾನ ಕಳೆದರೂ ಸಾಕಷ್ಟು ಪ್ರಕರಣಗಳು ಇನ್ನೂ ಬಾಕಿ ಇವೆ. ಇದೇ ಕಾರಣಕ್ಕೆ ನ್ಯಾಯಾಲಯದ ಬಗ್ಗೆಯೂ ಸಾಕಷ್ಟು ಆರೋಪಗಳಿವೆ ಎಂಬ ಸಂಗತಿಯನ್ನು ಒಪ್ಪಿಕೊಳ್ಳಬೇಕಾಗುತ್ತದೆ' ಎಂದು ತೀರ್ಪು ಹೇಳಿದೆ.

ಈ ವಿಷಯವಾಗಿ ಇತ್ತೀಚೆಗೆ ದೆಹಲಿ ಹೈಕೋರ್ಟ್‌ನ ನರ್ಸರಿ ಸ್ಕೂಲ್ ಪ್ರವೇಶಕ್ಕೆ ಸಂಬಂಧಿಸಿ, ಅಧಿಕೃತ ಶಾಲೆಗಳ ಸಂಬಂಧ, ಅಲ್ಲಿಯ ಶುಲ್ಕ ಮತ್ತು ಉಚಿತ ಸೀಟುಗಳ ಬಗ್ಗೆ, ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ, ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಂಖ್ಯೆಗೆ ಸಂಬಂಧಿಸಿ ದೆಹಲಿ ನಿವಾಸಿಗಳ ಉಸಿರಾಟದ ಬಗ್ಗೆ, ಸಬ್‌ವೇ ಬಳಸುವ ಬಗ್ಗೆ ನೀಡಿರುವ ತೀರ್ಪುಗಳ ಬಗ್ಗೆ ಪೀಠ ಉಲ್ಲೇಖಿಸಿದೆ.

ಆದರೆ ಈ ಎಲ್ಲಾ ವಿಷಯಗಳು ನೇರವಾಗಿ ಕಾರ್ಯಾಂಗ ಅಥವಾ ಶಾಸಕಾಂಗಕ್ಕೆ ಮಾತ್ರ ಸಂಬಂಧಿಸಿದವು. ಒಂದು ವೇಳೆ ಈ ಬಗ್ಗೆ ಏನಾದರೂ ಕಾನೂನಿದ್ದರೆ ಅವುಗಳನ್ನು ಜಾರಿಗೊಳಿಸಬೇಕೆಂದು ಆದೇಶಿಸುವ ಅಧಿಕಾರ ನ್ಯಾಯಮೂರ್ತಿಗಳಿಗಿದೆ.

ಆದರೆ ನ್ಯಾಯಾಧೀಶರಿಗೆ ಕಾನೂನನ್ನು ಸೃಷ್ಟಿಸುವ ಅಧಿಕಾರ ಇಲ್ಲವೇ ಇಲ್ಲ. ದೆಹಲಿ ಹೈಕೋರ್ಟ್ ಈ ಪ್ರಕರಣದಲ್ಲಿ ನರ್ಸರಿ ಶಾಲಾ ಪ್ರವೇಶಕ್ಕೆ ಸಂಬಂಧಿಸಿದಂತೆ ಸಂದರ್ಶನ ನಡೆಸಬಾರದೆಂದು ಶಾಲೆಗಳಿಗೆ ಆದೇಶ ನೀಡಿತು. ಆ ರೀತಿಯ ಸಂದರ್ಶನಗಳನ್ನು ತಡೆಗಟ್ಟುವುದಕ್ಕೆ ಯಾವುದೇ ಶಾಸನಾತ್ಮಕ ನಿಯಮಗಳಿಲ್ಲ. ಆದ್ದರಿಂದ ದೆಹಲಿ ಹೈಕೋರ್ಟ್ ಅಂತಹದೊಂದು ಆದೇಶದ ಮೂಲ ಕಾನೂನು ಸೃಷ್ಟಿಸಲು ಮುಂದಾಯಿತು. (ಒಂದು ಸಂಪೂರ್ಣ ನ್ಯಾಯದ ಪರಿಧಿಯಿಂದ ಹೊರತಾದುದು) ನಂತರ ಅದನ್ನು ಜಾರಿಗೊಳಿಸಲು ಆದೇಶಿಸಿತು. ಹಾಗಾಗಿ ಇದೊಂದು ಸಂಪೂರ್ಣ ಕಾನೂನು ಬಾಹಿರವಾದುದು. ಯಾಕೆಂದರೆ ನ್ಯಾಯಾಧೀಶರು ಶಾಸನ ರಚನಾಕಾರರಲ್ಲ.

ಶಾಸಕಾಂಗ ಅಥವಾ ಕಾರ್ಯಾಂಗದ ಮೇಲೆ ಸವಾರಿ ಮಾಡುತ್ತಿರುವ ನ್ಯಾಯಾಂಗದಿಂದ ಯಾವುದೇ ಪರಿಹಾರ ಸಿಗಲು ಸಾಧ್ಯವಿಲ್ಲ. ಯಾಕೆಂದರೆ ಇದರಿಂದ ಸಂವಿಧಾನ ಕೊಡಮಾಡಿರುವ ಸಂಯಮದ ಅಧಿಕಾರ ಉಲ್ಲಂಘಿಸಿದಂತಾಗುತ್ತದೆ. ಅಲ್ಲದೆ, ನ್ಯಾಯಾಂಗಕ್ಕೆ ಕಾರ್ಯಾಂಗದ ಕೆಲಸಗಳನ್ನು ಜಾರಿಗೊಳಿಸುವ ಪರಿಣತಿಯಾಗಲಿ ಅಥವಾ ಸಂಪನ್ಮೂಲಗಳಾಗಲಿ ಇಲ್ಲ.

ಈ ತೀರ್ಪು ಸ್ಪಷ್ಟವಾಗಿ ಹೇಳುತ್ತಿರುವುದೆಂದರೆ ಇಂತಹ ವಿಚಾರಗಳಲ್ಲಿ ನ್ಯಾಯಾಂಗ ತೀರ್ಪು ನೀಡುವುದರ ಬದಲಾಗಿ ಅವುಗಳ ಸ್ವಾಮಿತ್ವದ ಹೊಣೆಯನ್ನು ಕಾರ್ಯಾಂಗಕ್ಕೆ ಹಿಂತಿರುಗಿಸಬೇಕು ಎಂಬುದು. ಈ ಬಗ್ಗೆ ಜಸ್ಟೀಸ್ ಆನಂದ್ ಹೀಗೆ ಗುರ್ತಿಸಿದ್ದರು. 'ನ್ಯಾಯಾಲಯಗಳು ಸರ್ಕಾರವನ್ನು ನಡೆಸುತ್ತಿಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಹಾಗಾಗಿ ನ್ಯಾಯಾಂಗ ವ್ಯವಸ್ಥೆ ಕೇವಲ ಅಲರಾಂ ಕ್ಲಾಕ್‌ನಂತೆ ಕೆಲಸ ಮಾಡಬೇಕೆ ಹೊರತು ಟೈಂ ಕೀಪರ್ ಕೆಲಸ ಮಾಡಬಾರದು. ಕಾರ್ಯಾಂಗ ತನ್ನ ಕರ್ತವ್ಯಗಳನ್ನು ಜಾರಿಗೊಳಿಸಲು ಅನುಕೂಲವಾಗುವಂತೆ ನ್ಯಾಯಾಂಗ ಕೇವಲ ಅಲಾರಾಂ ಗಂಟೆ ಬಾರಿಸುವ ಕೆಲಸ ಮಾತ್ರ ಮಾಡಿ ಕಾರ್ಯಾಂಗ ಜೀವಂತವಾಗಿರುವಂತೆ ಮಾಡಬೇಕು!

ಇಲ್ಲಿ, ಇತ್ಯರ್ಥವಾಗಬೇಕಾದ ಇನ್ನೊಂದು ಬಹಳ ಗಂಭೀರವಾದ ವಿಷಯವಿದೆ. ಸಂವಿಧಾನದ ಅಡಿಯಲ್ಲಿ ಸಾರ್ವಜನಿಕ ಜವಾಬ್ದಾರಿಗಳನ್ನು ನಿರ್ವಹಿಸಬೇಕಾದ ಕಾರ್ಯಾಂಗ ಮತ್ತು ಶಾಸಕಾಂಗಗಳು ಅಂತಿಮವಾಗಿ ಜನತೆಗೆ ಉತ್ತರದಾಯಿತ್ವ ಆಗಿರುತ್ತವೆ. ಉತ್ತರದಾಯಿತ್ವೇ ಪ್ರಜಾಪ್ರಭುತ್ವವನ್ನು ಇತರ ಆಡಳಿತ ವ್ಯವಸ್ಥೆಗಳಿಂದ ಭಿನ್ನವಾಗಿಸುತ್ತದೆ. ಇತರ ಯಾವುದೇ ಅಂಗದ ಕಾರ್ಯನಿರ್ವಾಹಕ ಜವಾಬ್ದಾರಿಗಳ ನಿರ್ವಹಣೆಯು, ಉದಾಹರಣೆಗೆ ನ್ಯಾಯಾಂಗವೇ ಆಗಿರಬಹುದು, ಮೂಲಭೂತವಾಗಿ ಉತ್ತರದಾಯಿ ಆಗಿರುವುದಿಲ್ಲ. ಇದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ವಿಷಯ. ಕಾರ್ಯಾಂಗದ ವ್ಯಾಪ್ತಿಗೆ ಒಳಪಡುವ ಒಂದು ವಿಷಯದಲ್ಲಿ ನ್ಯಾಯಾಂಗ ಕೈಹಾಕಿತೆಂದರೆ, ಶಾಸಕಾಂಗವು ಶಾಸನಾಧಿಕಾರದ ಪರಿಣಾಮಕಾರಿ ಪರಾಮರ್ಶೆಯ ಮೂಲಕ ತನ್ನ ಕಾರ್ಯನಿರ್ವಹಣೆಯ ಉತ್ತರದಾಯಿತ್ವವನ್ನು ಖಚಿತಪಡಿಸುವ ಅದರ ನಿಗದಿತ ಪಾತ್ರದ ನಿರ್ವಹಣೆಯನ್ನೇ ಅಸಾಧ್ಯಗೊಳಿಸುತ್ತದೆ.

ಈ ತೀರ್ಪಿಗೆ ಅನುಗುಣವಾಗಿ, ನ್ಯಾಯಾಂಗವು ಮೂರು ಅಂಗಗಳ ನಡುವಿನ ಸಂವಿಧಾನಾತ್ಮಕ ಗಡಿಗಳನ್ನು ಸ್ಪಷ್ಟಪಡಿಸಿ ಆರೋಗ್ಯಕರವಾದ ಸೌಹಾರ್ದತೆ ನೆಲೆಸುವಂತೆ ಮಾಡಲಿ ಎಂದು ಮಾತ್ರ ಆಶಿಸಬಹುದು. ಈ ಹೊಣೆಯನ್ನು ಸರ್ವೋಚ್ಚ ನ್ಯಾಯಾಲಯದ ಪೂರ್ಣಪ್ರಮಾಣದ ಸಂವಿಧಾನ ಪೀಠಕ್ಕೆ ಒಪ್ಪಿಸಬಹುದು. ಈ ಪೀಠವು ನಮ್ಮ ಇಂದಿನ ನ್ಯಾಯದಾನ ವ್ಯವಸ್ಥೆಯು ಎಷ್ಟು ಪರಿಣಾಮಕಾರಿಯಾಗಿದೆ ಎಂಬುದನ್ನು ಗಂಭೀರವಾಗಿ ಪರಾಮರ್ಶಿಸುವುದು ಅಗತ್ಯವಾಗಿದೆ. ಸಿಕ್ಕಾಪಟ್ಟೆ ಪ್ರಕರಣಗಳು ಇತ್ಯರ್ಥವಾಗದಿರುವುದು, ಅದರ ಪರಿಣಾಮವಾಗಿ ಜನರು ಅನುಭವಿಸುತ್ತಿರುವ ಸಂಕಟ, ಅಪರಾಧಿಗಳನ್ನು ಶಿಕ್ಷೆಗೆ ಒಳಪಡಿಸುವಲ್ಲಿ ಮತ್ತು ಕೋಮು ಗಲಭೆಗಳಲ್ಲಿ ಹಾಗೂ ಅಂತಹ ಬೇರೆ ದಾಳಿಗಳಲ್ಲಿ ನೊಂದವರಿಗೆ ನ್ಯಾಯ ಒದಗಿಸುವಲ್ಲಿ ಆಗುತ್ತಿರುವ ಕೊನೆಯಿಲ್ಲದ ವಿಳಂಬ ಇವೆಲ್ಲವೂ ನಮ್ಮ ದೇಶಕ್ಕೆ ಮತ್ತು ಅದರ ಸಂಸದೀಯ ಪ್ರಜಾಪ್ರಭುತ್ವಕ್ಕೆ ಶೋಭೆ ತರುವ ವಿಷಯಗಳಲ್ಲ.

■

ಉಡುಪಿಯಲ್ಲಿ ಸಾಹಿತ್ಯ ಜಾತ್ರೆ ನಡೆದಿದೆ. ಅದ್ದೂರಿತನವೇ ಆದ್ಯತೆಯಾಗಿ ಅರ್ಥಪೂರ್ಣ ಚರ್ಚೆಗಳು ಗೌಣವಾಗಿವೆ. ಅಲ್ಲಿ ನಡೆದದ್ದೇನು? ಒಂದು ಚಿತ್ರ

ಅದ್ದೂರಿ ಜಾತ್ರೆಯಾದ 74ನೇ ಕನ್ನಡ ಸಾಹಿತ್ಯ ಸಮ್ಮೇಳನ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ವರ್ಷ ವರ್ಷವೂ ನಡೆಯುತ್ತಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ಆಡಂಬರ ಮತ್ತು ಅದ್ದೂರಿತನದಲ್ಲಿ ಹಿಂದಿನ ಸಮ್ಮೇಳನಗಳನ್ನು ಮೀರಿಸುತ್ತಿರುವುದು ಸಾಮಾನ್ಯವೆನಿಸಿದೆ. ಉಡುಪಿಯಲ್ಲಿ ದಶಂಬರ 12ರಿಂದ 15ವರೆಗೆ ನಡೆಸಲಾಗುತ್ತಿರುವ 74ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವೂ ಈ ಮಾತಿಗೆ ಹೊರತಾಗಿಲ್ಲ. ಸಮ್ಮೇಳನಗಳು ಅದ್ದೂರಿಯಾದಷ್ಟೂ ಅಲ್ಲಿ ಗಂಭೀರವಾದ ಚರ್ಚೆಗಳಿಗೆ ಅವಕಾಶ ಕಮ್ಮಿಯಾಗಿ, ಮಾತುಕತೆಗಳು ಕೇವಲ ಕಾಟಾಚಾರಕ್ಕೆಂಬಂತೆ ನಡೆದು ಸಂತೆ, ಗದ್ದಲ ಮತ್ತು ಊಟ ಉಪಚಾರಗಳಲ್ಲಿ ಮೇಲುಗೈ ಪಡೆಯುತ್ತಿರುವುದರಲ್ಲಿ ಅಚ್ಚರಿ ಏನಿಲ್ಲ. ಉಡುಪಿಯ ಸಮ್ಮೇಳನದಲ್ಲಂತೂ 'ಭೋಜನವೇ' ಪ್ರಧಾನ ವಿಷಯವಾಗಿರುವಂತಿದೆ.

ಸಂಘ ಪರಿವಾರದ ಭದ್ರ ಕೋಟೆಯೆನಿಸಿರುವ ಉಡುಪಿಯಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನವು ಕೋಮುವಾದಿಗಳ ಅಟ್ಟಹಾಸದ ಪ್ರದರ್ಶನಕ್ಕೆ ವೇದಿಕೆಯಾಗಬಹುದೆಂಬ ಭಯ ಅನೇಕರನ್ನು ಕಾಡಿತ್ತು. ಈ ಕಾರಣದಿಂದಾಗಿಯೇ ಕೆಲವು ಸಾಹಿತಿಗೆಳೆಯರು ದಶಂಬರ 9ರಂದು ಡಾ.ಜಿ.ರಾಮಕೃಷ್ಣ ಅವರ ಅಧ್ಯಕ್ಷತೆಯಲ್ಲಿ ಅಮ್ಮಣಿ ರಾಮಣ್ಣಶೆಟ್ಟಿ ಸಭಾಂಗಣದಲ್ಲಿ 'ಸೌಹಾರ್ದ ಸಾಹಿತ್ಯ ಸಮ್ಮೇಳನ'ವೊಂದನ್ನು ಏರ್ಪಡಿಸಿದ್ದರು. ಇದು ಕ.ಸಾ.ಪ. ನಡೆಸುವ ಸಮ್ಮೇಳನಕ್ಕೆ ಪ್ರತಿಸ್ಪರ್ಧಿ ಅಲ್ಲವೆಂದೂ, ಬದಲು ಅದಕ್ಕೆ ಪೂರಕವಾಗಿಯೇ ನಡೆಯಲಿದೆಯೆಂದೂ ಡಾ.ರಾಮಕೃಷ್ಣ ಸ್ಪಷ್ಟೀಕರಣ ನೀಡಿದ್ದರು. ಅದೇನೇ ಇದ್ದರೂ ಸೌಹಾರ್ದ ಸಮ್ಮೇಳನವು 74ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಂಘಟಕರ ಮೇಲೆ ತುಸುವಾದರೂ ಪ್ರಭಾವ ಬೀರಿರುವುದು ನಿಜ. ಅನೇಕರು ಆತಂಕಪಟ್ಟಂತೆ ಸಾಹಿತ್ಯ ಸಮ್ಮೇಳನವು ಸಂಪೂರ್ಣವಾಗಿ ಸಂಘಪರಿವಾರದ ಸಂತೆಯಾಗಿರದೆ ಕೆಲಮಟ್ಟಿಗಾದರೂ 'ನಾಡಹಬ್ಬ'ದ ವಾತಾವರಣ ನಿರ್ಮಾಣಗೊಂಡಿತು. ಸಮ್ಮೇಳನದ ವಿವಿಧಗೋಷ್ಠಿಗಳಲ್ಲಿ ನಡೆದ ಚರ್ಚೆಗಳಿಗೆ ಸಮಯಾವಕಾಶ ಕಡಿಮೆ ಇದ್ದಾಗಲೂ ಮುಕ್ತ ಸಂವಾದಗಳು ನಡೆದು ಹೇಳಿಕೊಳ್ಳುವಂತಹ ಕಲುಷಿತ ವಾತಾವರಣ ಎಲ್ಲೂ ನಿರ್ಮಾಣವಾಗದಿರುವುದು ಉಡುಪಿ ಜಿಲ್ಲೆಯ

ಅದಮಾರು ಶ್ರೀಪತಿ ಆಚಾರ್ಯ
ಮತ್ತು
ಟಿ.ಅಂಗರ

ಪ್ರಜಾಪ್ರಭುತ್ವವಾದಿ ಮತ್ತು ಸೆಕ್ಯೂಲರ್ ಶಕ್ತಿಗಳಿಗೆ ಸಂದ ಗೆಲುವು ಎಂದೇ ತಿಳಿಯಬೇಕಾಗಿದೆ. ನಮ್ಮ ನಾಡಿನ ಬಹುತೇಕ ಪತ್ರಿಕೆಗಳು ಮತ್ತು ಮಾಧ್ಯಮಗಳು ಅನೇಕ ವೇಳೆ ಸಂಘಪರಿವಾರದ ವಕ್ತಾರರಂತೆ ಕಂಡುಬಂದರೂ ಕನ್ನಡದ ಸಾಹಿತ್ಯ ಪ್ರಪಂಚ ಈಗಲೂ ಸೆಕ್ಯೂಲರ್ ಆಗಿದೆ. ಫ್ಯಾಸಿಸ್ಟ್ ಶಕ್ತಿಗಳ ಕೈಸೆರೆಯಾಗಿಲ್ಲ. ಇದು ಅತ್ಯಂತ ಸಮಾಧಾನದ ವಿಷಯ.

ಅಧ್ಯಕ್ಷತೆ - ಉದ್ಘಾಟನೆ - ಭಿನ್ನಾಭಿಪ್ರಾಯ

ಉಡುಪಿಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಉಡುಪಿಯವರೇ ಆದ ಕಾದಂಬರಿಕಾರ ನಿಡಂಬೂರು ವ್ಯಾಸರಾಯ ಬಲ್ಲಾಳರನ್ನು ಅಧ್ಯಕ್ಷರನ್ನಾಗಿ ಪ್ರಸ್ತಾಪಿಸಲಾಗಿದ್ದರೂ ಕೊನೆಗಳಿಗೆಯಲ್ಲಿ ಕಾಣದ ಕೈಗಳ ಕೈವಾಡದಿಂದಾಗಿ ರಾಷ್ಟ್ರೋತ್ಥಾನ ಪರಿಷತ್‌ನಂತಹ ಸಂಘಪರಿವಾರದ ಸಂಸ್ಥೆಯ ನಂಟು ಹೊಂದಿರುವ ಖ್ಯಾತ ವಿಮರ್ಶಕ ಎಲ್.ಎಸ್.ಶೇಷಗಿರಿರಾವ್ ಅವರನ್ನು ಆರಿಸಲಾಯಿತು. ಈ ಆಯ್ಕೆ ಪ್ರಜಾಸತ್ತಾತ್ಮಕ ರೀತಿಯಲ್ಲೇ ನಡೆದಿದೆ ಎಂಬ ಕ.ಸಾ.ಪ.ದ ಅಧ್ಯಕ್ಷ ಚಂಪಾ ಅವರ ಮಾತು ಎಷ್ಟು ನಿಜ ಎನ್ನುವುದು ಯಾರಿಗೂ ತಿಳಿದಿಲ್ಲ. ವ್ಯಾಸರಾಯ ಬಲ್ಲಾಳರನ್ನು ಸಮ್ಮೇಳನದ ಉದ್ಘಾಟಕರಾಗಿ ಸೂಚಿಸಲಾಯಿತು. ತಾನು ಮುಂಬಯಿಯಲ್ಲಿ ನೌಕರಿಯಲ್ಲಿದ್ದಾಗಲೇ 'ಅನುರಕ್ತೆ' 'ಹೇಮಂತಗಾನ' 'ವಾತ್ಸಲ್ಯಪಥ' ಮುಂತಾದ ಕಾದಂಬರಿಗಳನ್ನು ದುಡಿಯುವ ಜನ ಮತ್ತು ವಿಶೇಷವಾಗಿ ಮಹಿಳೆಯರ ಬವಣೆಗಳನ್ನು ಕುರಿತು ಕಥೆಗಳನ್ನು ಬರೆದಿರುವ ವ್ಯಾಸರಾಯ ಬಲ್ಲಾಳರು 'ಬಂಡಾಯ' ಕಾದಂಬರಿಯನ್ನು ರಚಿಸಿದ್ದಾರೆ. ಪ್ರಗತಿಶೀಲರೊಂದಿಗೆ ಗುರುತಿಸಲ್ಪಡುವ ಬಲ್ಲಾಳರು ತನ್ನ ಆತ್ಮೀಯ ಗೆಳೆಯ ಎಲ್.ಎಸ್.ಶೇಷಗಿರಿ ರಾಯರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಆರಿಸಿರುವುದು ಸ್ವಾಗತಾರ್ಹವೆಂದು ಹೇಳಿ ಉದ್ಘಾಟಕರಾಗುವ ಆಮಂತ್ರಣವನ್ನು ನಯವಾಗಿ ತಿರಸ್ಕರಿಸಿದರು. ಕೊನೆಗೆ ಉದ್ಘಾಟನೆಗೆ ಬಂದವರು ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು.

ಅಧ್ಯಕ್ಷರ ಆಯ್ಕೆಯಿಂದ ಮೊದಲುಗೊಂಡ ಗೊಂದಲದಲ್ಲಿ ಸಮ್ಮೇಳನ ಆರಂಭವಾಗುವವರೆಗೂ ಮುಂದುವರಿದವು. ಕಳೆದ ವರ್ಷದ ಶಿವಮೊಗ್ಗ ಸಮ್ಮೇಳನದ ಅಧ್ಯಕ್ಷರಾಗಿದ್ದ ಕವಿ ನಿಸ್ಸಾರ್ ಅಹಮದ್ ಅನಾರೋಗ್ಯದ ಕಾರಣವೊಡ್ಡಿ ಉಡುಪಿ ಸಮ್ಮೇಳನಕ್ಕೆ ಬರಲೇ ಇಲ್ಲ. ನಿಕಟಪೂರ್ವ ಸಮ್ಮೇಳನದ ಅಧ್ಯಕ್ಷರು ಹೀಗೆ ಗೈರು ಹಾಜರಾಗುವುದು ಇದೇ ಮೊದಲು.



ಪುಟ 13 ಕ್ಕೆ

ಸೌಹಾರ್ದ ಸಮ್ಮೇಳನದ ಹಿಂದಿನ ಸೂತ್ರವೇನು?

ಪರಿಷತ್‌ನ ಸಾಹಿತ್ಯ ಸಮ್ಮೇಳನ ಕೋಮುವಾದೀಕರಣವಾಗಬಹುದಾದ ಆತಂಕದ ಸನ್ನಿವೇಶವನ್ನು ಬಳಸಿಕೊಂಡು ನಾಡಿನ ಪ್ರಗತಿಪರ ಸಾಹಿತಿ, ಚಿಂತಕರು, ಬರಹಗಾರರನ್ನು, ಸಾಹಿತ್ಯಾಸಕ್ತರನ್ನು ನಕ್ಸಲ್ ವಿಚಾರಧಾರೆಯ ಕಡೆಗೆ ಸೆಳೆಯುವ ಯೋಜನೆಯ ಭಾಗವಾಗಿಯೇ ನಡೆದದ್ದು ಈ ಡಿಸೆಂಬರ್ 9 ರಂದು ಇದೇ ಉಡುಪಿಯಲ್ಲಿ ನಡೆದ 'ಸೌಹಾರ್ದ ಸಾಹಿತ್ಯ ಸಮ್ಮೇಳನ'ನ ಎಂಬ ಸಮ್ಮೇಳನ. ಕೋಮುಸೌಹಾರ್ದ ವೇದಿಕೆ ಹೆಸರಿನ ನಕ್ಸಲೀಯರ ಈ ಯತ್ನಕ್ಕೆ ಸಾಥಿ ಕರ್ನಾಟಕ ಡಿಗ್ನಿಟಿ ಫೋರಂ (ಕೆಎಫ್‌ಡಿ) ಎಂಬ ಮುಸ್ಲಿಂ ಮೂಲಭೂತವಾದಿ ಸಂಘಟನೆ. ಸುಮಾರು 1 ಸಾವಿರ ಜನ ಸೇರಿದ ಸೌಹಾರ್ದ ಸಮ್ಮೇಳನ ಕೊನೆಗೂ ಕೆಲವರಲ್ಲಿ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿತು. ಜಿ.ರಾಮಕೃಷ್ಣ ಜಿ.ರಾಜಶೇಖರ ಮುಂತಾದವರ ಮಾತುಗಳಲ್ಲಿ ಇರುವ ತರ್ಕಬದ್ಧತೆ, ವಸ್ತುನಿಷ್ಠತೆ ಹಲವರಲ್ಲಿ ಮಾಯವಾಗಿತ್ತು. ಪಟ್ಟಾಭಿ ಸೋಮಯಾಜಿಯಂತವರನ್ನು ಕಮ್ಯೂನಿಸ್ಟರನ್ನು ಹಾಗೂ ಎದುರಿಗೆ ಕುಳಿತಿರುವ ಚಂದ್ರಶೇಖರ ಪಾಟೀಲರನ್ನು ಬೈಯ್ಯುವುದಕ್ಕೇ ಕರೆಸಿದಂತಿತ್ತು. ಹಲವು ಸಂದರ್ಭದಲ್ಲಿ ಕೋಮುವಾದಿಗಳನ್ನು ವಿರೋಧಿಸಲು ಮಾವೋವಾದಿಗಳನ್ನು ಒಪ್ಪಿಕೊಳ್ಳುವುದು ಅನಿವಾರ್ಯ ಎನ್ನುವ ಅಪಾಯಕಾರಿ ವಾದವನ್ನು ಸಮರ್ಥಿಸುವುದಕ್ಕಾಗಿ ಸಮ್ಮೇಳನವನ್ನು ಉಪಯೋಗಿಸಿಕೊಳ್ಳಲಾಗುತ್ತಿದೆಯೇ ಎನ್ನುವ ದಟ್ಟ ಭಾವನೆ ಕೂಡ ಮೂಡಿಸಿತು.

ನಮ್ಮ ಬರಹಗಾರ ಜಿ.ರಾಜಶೇಖರ ಅವರ ಸ್ನೇಹಿತರನ್ನು ಲೇಖಕರು, ಚಿಂತಕರು, ಅಭಿಮಾನಗಳು) ಹೊರತುಪಡಿಸಿದರೆ ಇಡೀ ಸಮ್ಮೇಳನದಲ್ಲಿ ಕೋಮುಸೌಹಾರ್ದತಾ ವೇದಿಕೆಯ ಕಾರ್ಯಕರ್ತರು ಮತ್ತು ಕೆಎಫ್‌ಡಿ (ಕರ್ನಾಟಕ ಫೋರಂ ಡಿಗ್ನಿಟಿ) ಕಾರ್ಯಕರ್ತರೇ ಹೆಚ್ಚು ತುಂಬಿಕೊಂಡಂತಿತ್ತು. ಕೆಎಫ್‌ಡಿ ಕೂಡ ಮುಸ್ಲಿಂ ಮೂಲಭೂತವಾದಿ ಸಂಘಟನೆಯೇ ಆಗಿರುವಾಗ ಹಿಂದುತ್ವವಾದವನ್ನು ವಿರೋಧಿಸುವ ತುರ್ತಿನಲ್ಲಿ ನಾವು ಮುಸ್ಲಿಂ ಮೂಲಭೂತವಾದವನ್ನು



ಜೊತೆಯಲ್ಲಿ ಇಟ್ಟುಕೊಳ್ಳುವುದು ಎಷ್ಟರಮಟ್ಟಿಗೆ ಸರಿ ಎನ್ನುವ ಪ್ರಶ್ನೆ ಒಂದೆಡೆಯಾದರೆ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನೇ ತಿರಸ್ಕರಿಸುವ ನಕ್ಸಲ್‌ವಾದಿಗಳನ್ನು, ಅವರ ಬೆಂಬಲಿಗರನ್ನು ಜೊತೆಯಲ್ಲಿಟ್ಟುಕೊಂಡು ಕೋಮುವಾದಿಗಳನ್ನು ವಿರೋಧಿಸುವುದು ಎಷ್ಟರಮಟ್ಟಿಗೆ ಸಾಧ್ಯ ಎನ್ನುವ ಪ್ರಶ್ನೆ ಇನ್ನೊಂದೆಡೆ. ಕೋಮುವಾದವೆನ್ನುವ ಬೆಂಕಿಯ ವಿರುದ್ಧ ಹೋರಾಡುವಾಗ ಮಾವೋವಾದ, ಮೂಲಭೂತವಾದ ಎನ್ನುವ ಕೆಂಡವನ್ನು ಸೆರಗಲ್ಲಿ ಕಟ್ಟಿಕೊಂಡು ಹೊರಡುವುದರ ಔಚಿತ್ಯವಾದರೂ ಏನು? ಈ ಎರಡನ್ನೂ ಬಿಟ್ಟು ಹಿಂದುತ್ವ ಪ್ರತಿಪಾದಕರ ವಿರುದ್ಧ ಒಂದು ಜನಚಳುವಳಿ ಕಟ್ಟಲು ಮುಂದಾಗಬೇಕಾಗಿದೆ. ಮಠಾಧೀಶರು, ಧರ್ಮಾಧಿಕಾರಿಗಳು, ಕೇಸರಿ ಬಾವುಟದವರೇ ತುಂಬಿದ ಸಾಹಿತ್ಯ ಸಮ್ಮೇಳನ ಮತ್ತು ಮಾವೋವಾದ ಮತ್ತು ಮುಸ್ಲಿಂ ಮೂಲಭೂತವಾದಗಳ ಜೊತೆಯಲ್ಲಿ ಇಟ್ಟುಕೊಂಡಿರುವ ಸೌಹಾರ್ದ ಸಮ್ಮೇಳನಗಳ ಆಚೆ ನಿಂತು ಯೋಚಿಸಲು ಸಾಧ್ಯವಿಲ್ಲವೆ? ಕರ್ನಾಟಕದ ಲೇಖಕರು, ಚಿಂತಕರು, ಕಲಾವಿದರು, ಸಾಂಸ್ಕೃತಿಕ ವ್ಯಕ್ತಿಗಳು ತಮ್ಮ ತಮ್ಮ ನಡುವಿನ ಭಿನ್ನಾಭಿಪ್ರಾಯ ಮರೆತು. ಅಹಂನ್ನು ಅದುಮಿಟ್ಟು ಭವಿಷ್ಯಕ್ಕಾಗಿ ಕರ್ನಾಟಕವನ್ನು ಉಳಿಸಲು ಮುಂದಾಗುವ ತುರ್ತು ಎಂದಿಗಿಂತ ಇಂದು ಹೆಚ್ಚಾಗಿದೆ.

- ಯಮುನಾ ಗಾಂವ್ಕರ

ಗುಜರಾತ್ ಚುನಾವಣೆ

ಮುಖವಾಡ ಕಳಚಿದ ಮೋದಿ



ಗುಜರಾತ್‌ನ ವಿಧಾನಸಭಾ ಚುನಾವಣೆಗಳಲ್ಲಿ ಮೊದಮೊದಲು 'ಅಭಿವೃದ್ಧಿ'ಯ ರಾಗ ಹಾಡುತ್ತಿದ್ದ ಮೋದಿ ಮತ್ತೆ ಹಿಂದುತ್ವದ ಬೆಂಕಿಯುಗುಳುತ್ತಿರುವುದರಿಂದ ತೊಟ್ಟುಕೊಂಡಿದ್ದ ಮುಖವಾಡ ಕಳಚಿಬಿದ್ದಿದೆ.

ಗುಜರಾತ್ ಮತ್ತು ಹಿಮಾಚಲ ಪ್ರದೇಶದಲ್ಲಿ ವಿಧಾನ ಸಭಾ ಚುನಾವಣೆಗಳು ನಡೆಯುತ್ತಿವೆ. ಇವು ಕೋಮುವಾದಿ ಶಕ್ತಿಗಳನ್ನು ಮೂಲೆಗುಂಪಾಗಿಸಲು ಒಂದು ಅವಕಾಶ ಒದಗಿಸಿರುವ ಚುನಾವಣೆಗಳು. ಗುಜರಾತಿನಲ್ಲಿ ಮೊದಲ ಹಂತದ ಚುನಾವಣೆಗಳು ಮುಗಿದಿದ್ದು ಪತ್ರಿಕೆಗಳ ಸಮೀಕ್ಷೆಗಳೂ ಬಂದಿವೆ. ಇವು ಈ ದಿಕ್ಕಿನಲ್ಲಿ ಸಕಾರಾತ್ಮಕ ಚಲನೆಯನ್ನು ತೋರಿಸಿದ್ದು ಇಡೀ ದೇಶ ಈ ಚುನಾವಣೆಗಳ ನಿಜವಾದ ಫಲಿತಾಂಶಕ್ಕಾಗಿ ಆಸಕ್ತಿಯಿಂದ ಕಾಯುತ್ತಿದೆ. ಈ ಸಂಚಿಕೆ ನಿಮ್ಮ ಕೈಸೇರುವ ವೇಳೆಗೆ ಅಲ್ಲಿ ಎರಡನೇ ಮತ್ತು ಕೊನೆಯ ಸುತ್ತಿನ ಚುನಾವಣೆಗಳೂ ಮುಗಿದಿರುತ್ತದೆ.

ಇವೆರಡೂ ಬಿಜೆಪಿಯ ಪ್ರಾಬಲ್ಯದ ರಾಜ್ಯಗಳು. ಅಲ್ಲದೆ ಎರಡೂ ರಾಜ್ಯಗಳಲ್ಲಿ ಪೈಪೋಟಿಯಲ್ಲಿರುವುದು ಕಾಂಗ್ರೆಸ್ ಮತ್ತು ಬಿಜೆಪಿ ಮಾತ್ರ. ಗುಜರಾತಿನಲ್ಲಿ ಐದು ವರ್ಷಗಳ ಹಿಂದೆ ಭೀಕರ ಕೋಮು ಹತ್ಯಾಕಾಂಡದ ಹಿನ್ನೆಲೆಯಲ್ಲಿ ಮೋದಿ ನೇತೃತ್ವದಲ್ಲಿ ಬಿಜೆಪಿ ಭಾರೀ ಗೆಲವು ಸಾಧಿಸಿತ್ತು. ಒಂದು ವರ್ಷದ ನಂತರ ನಡೆದ ಹಿಮಾಚಲ ಪ್ರದೇಶ ಚುನಾವಣೆಗಳು 2004ರ ಕೇಂದ್ರದ ಲೋಕಸಭಾ ಚುನಾವಣೆಗಳ ಮೊದಲಿನ ಕ್ವಾರ್ಟರ್ ಫೈನಲ್ ಎಂದು ಬಿಜೆಪಿ ಮುಖಂಡರು ಹೇಳಿದ್ದರು. ಅದರಲ್ಲಿ ಗೆಲ್ಲುವ ಭಾರೀ ವಿಶ್ವಾಸವನ್ನೂ ಪ್ರದರ್ಶಿಸಿದ್ದರು. ಆದರೆ ಅದು ಕ್ವಾರ್ಟರ್ ಫೈನಲ್‌ನಲ್ಲೂ ಸೋತಿತು, ಫೈನಲ್‌ನಲ್ಲೂ ಸೋತಿತು ಎಂಬುದೀಗ ಇತಿಹಾಸ. ನಂತರ 2004ರ ಲೋಕಸಭಾ ಚುನಾವಣೆಗಳಲ್ಲಿ ಗುಜರಾತಿನಲ್ಲೂ ಬಿಜೆಪಿ ಅಷ್ಟರಲ್ಲೆ ಬೆಂಬಲ ಕಳಕೊಳ್ಳಲಾರಂಭಿಸಿದ್ದು ಕಂಡು ಬಂತು. ಆದ್ದರಿಂದ ಬಿಜೆಪಿ ಸ್ವಾಭಾವಿಕವಾಗಿಯೇ ಗುಜರಾತನ್ನು ಉಳಿಸಿಕೊಳ್ಳಲು, ಹಿಮಾಚಲ ಪ್ರದೇಶವನ್ನು ಮತ್ತೆ ಗಳಿಸಿಕೊಳ್ಳಲು ಶತಪ್ರಯತ್ನ ನಡೆಸಿದೆ.

ಮೋದಿ ಪ್ರಚಾರ ಆರಂಭಿಸಿದ್ದೇ ಬಾಬ್ರಿ ಮಸೀದಿ ಧ್ವಂಸದ 15ನೆ ವಾರ್ಷಿಕದ ವಾರದಲ್ಲಿ. ಆದರೂ 2002 ರ ಘಟನೆ ಮುಗಿದು ಹೋದ ಅಧ್ಯಾಯ, ತಾನೀಗ ಆ ಮೋದಿಯಲ್ಲ ಎಂದು ಬಿಂಬಿಸಲು ಆತ ಮತ್ತು ಬಿಜೆಪಿ ವಕ್ತಾರರು ಪ್ರಚಾರದ ಆರಂಭದಲ್ಲಿ ಬಹಳ ಪ್ರಯತ್ನ ನಡೆಸಿದರು. ತನ್ನ ಗುರಿ ಗುಜರಾತದ ಅಭಿವೃದ್ಧಿ ಎಂದು ಸಾರಿದ ಮೋದಿ ಅದಕ್ಕೆ ಮೊದಲು ಸುಮಾರು ಆರು ತಿಂಗಳ ಕಾಲ ತನ್ನ ಐದು ವರ್ಷಗಳ ಆಳ್ವಿಕೆಯ 'ಆರ್ಥಿಕ ಸಾಧನೆ'ಗಳ ಪ್ರಚಾರಕ್ಕೆ ಸರಕಾರೀ ಬೊಕ್ಕಸದಿಂದ 750ಕೋಟಿ ರೂ.ಗಳಷ್ಟು ಸುರಿದಿದ್ದಾರೆ ಎನ್ನಲಾಗಿದೆ. ಇದು ಒಂದು ವರ್ಷದಲ್ಲಿ ಆ ರಾಜ್ಯದಲ್ಲಿ ಸಾಮಾಜಿಕ ಕಲ್ಯಾಣಕ್ಕೆ ಮತ್ತು ಪೋಷಕ ಆಹಾರಕ್ಕೆ ಮಾಡಬೇಕಾದ ಖರ್ಚಿನಷ್ಟು. ಈ 'ರೋಮಾಂಚಕ ಗುಜರಾತ'ದ ಪ್ರಚಾರದ ಅಬ್ಬರ ಆರಂಭದಲ್ಲಿ ಈ ಬಾರಿ ಮತ್ತೆ ಮೋದಿ ಎಂಬ ಭಾವನೆ ಮೂಡಿಸಿತ್ತು. ಆದರೆ ಕ್ರಮೇಣ ಮೋದಿ ತಂಡ ಹತಾಶರಾದಂತೆ ಕಾಣುತ್ತಿದೆ. ಮೋದಿ ಮತ್ತೆ ತನ್ನ 'ಹಿಂದುತ್ವ' ಭಾಷೆಯಲ್ಲಿಯೇ ಮಾತನಾಡುತ್ತಿರುವುದು ಆ ಪಕ್ಷದ ಹತಾಶೆಯನ್ನು ತೋರುತ್ತದೆ ಎಂದು ಕೆಲವು ವಿಶ್ಲೇಷಕರು ಹೇಳುವಂತಾಗಿದೆ.

ಕಾಂಗ್ರೆಸ್ ಹಿಂದೇಟು ಹಾಕಿದರೂ......

2002 ರ ಹತ್ಯಾಕಾಂಡ ಮೋದಿ ಸರಕಾರದ ಪ್ರಾಯೋಜಕತ್ವದಲ್ಲೆ ನಡೆಯಿತು ಎಂಬುದನ್ನು ಇತ್ತೀಚೆಗೆ ತೆಹಲ್ಕ ದೃಢಪಡಿಸಿದೆ. ಆದರೂ ಕಾಂಗ್ರೆಸ್ ಆ ಘಟನೆಗಳ ಬಗ್ಗೆ ಮಾತನಾಡಲು ಈಗಲೂ ಹಿಂದೇಟು ಹಾಕುತ್ತಿದೆ. ಬದಲಾಗಿ ತಾನೂ ಹಿಂದೂವಾದಿ ಎಂದು ಆಗಾಗ ಸ್ಪರ್ಧೆಗೂ ಇಳಿದಿದೆ. ಇಲ್ಲಿ ಕಾಣುವ ವಿಚಿತ್ರವೆಂದರೆ 2002ನ್ನು ನೆನಪಿಸಿದರೆ ಅದರಿಂದ ಮೋದಿಗೇ ಮತ್ತೆ ಲಾಭ ಎಂಬ ಭಯ ಇಲ್ಲಿಯ ಜಾತ್ಯಾತೀತರನ್ನು ಕಾಡುತ್ತದೆ. ಮೋದಿ ಇದರ ಪೂರ್ಣ ಲಾಭ ಪಡೆಯಲು ಮುಂದಾದರು.

ಈ ಚುನಾವಣೆಯಲ್ಲಿ ಆತ ಕೊಟ್ಟ ಘೋಷಣೆ-'ಜೀತೇಗಾ ಗುಜರಾತ್' (ಗುಜರಾತ್ ಗೆಲ್ಲುತ್ತದೆ). ಅಂದರೆ ತನ್ನ ಗೆಲುವೇ ಗುಜರಾತಿನ ಗೆಲುವು ಎಂಬ ಅಹಂಭಾವ. ಆದರೆ ವಾಸ್ತವವಾಗಿ ಆತನ ಸೋಲು ಗುಜರಾತಿನ ಗೆಲುವಾಗುತ್ತದೆ ಎಂದು ಹೇಳುವ ಧೈರ್ಯವೂ ಕಾಂಗ್ರೆಸ್‌ಗೆ ಇದ್ದಂತಿಲ್ಲ.

ನಿಜವಾಗಿ ಅಲ್ಲಿನ ಪರಿಸ್ಥಿತಿ ಬಿಜೆಪಿಗೆ ಪ್ರತಿಕೂಲವಾಗಿದೆ. ಮೋದಿ ಬಿಜೆಪಿಯ ಹಿಂದಿನ ಮುಖ್ಯ ಮಂತ್ರಿ ಕೇಶುಭಾಯಿ ಪಟೇಲರ ನಿಷ್ಟರಿಂದ ಭಾರೀ ಬಂಡಾಯ ಎದುರಿಸಬೇಕಾಗಿ ಬಂದಿದೆ. ಸುಮಾರು ಐವತ್ತು ಮಾಜಿ ಬಿಜೆಪಿಗಳು ಬಂಡಾಯ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದಾರೆ. ಇನ್ನೊಂದೆಡೆ ಮೋದಿ 'ಹಿಂದುತ್ವ'ಕ್ಕಿಂತ ಹೆಚ್ಚಾಗಿ 'ಅಭಿವೃದ್ಧಿ'ಯ ರಾಗ ಆಲಾಪಿಸಿದ್ದು ಸಂಘ ಪರಿವಾರದ ವಿಹೆಚ್‌ಪಿ, ಭಜರಂಗ ದಳ ಇತ್ಯಾದಿಗಳ ಅತೃಪ್ತಿಗೆ ಕಾರಣವಾಯಿತು. ಮೋದಿ ಕಾರ್ಯಶೈಲಿ ಬೀಜೆಪಿಯೊಳಗೂ ಭಾರೀ ಅಸಮಾಧಾನ ಸೃಷ್ಟಿಸಿದೆ. ಜತೆಗೆ 2004ರ ಸಾರ್ವತ್ರಿಕ ಚುನಾವಣೆಗಳಲ್ಲಿ 'ಹೊಳೆಯುತ್ತಿರುವ ಭಾರತ'ದ ಪ್ರಚಾರ ತಂತ್ರ ಮುಳುವಾದಂತೆ ಮೋದಿಯ 'ರೋಮಾಂಚಕ ಗುಜರಾತ' ದ ಘೋಷವಾಕ್ಯಕ್ಕೂ ಅದೇ ಗತಿ ಬರಬಹುದೆಂಬ ಭಯ. ಏಕೆಂದರೆ ತನ್ನ ರಾಜ್ಯದಲ್ಲಿ ರೈತರು ಮಾರುತಿ ಕಾರುಗಳಲ್ಲಿ ಓಡಾಡುತ್ತಿದ್ದಾರೆ ಎಂದು ಮೋದಿ ಹೇಳಿದರೂ, ಕಳೆದ ಐದು ವರ್ಷಗಳಲ್ಲಿ ಇದೇ ರಾಜ್ಯದಲ್ಲಿ 500 ರೈತರು ಆತ್ಮಹತ್ಯೆ ಏಕೆ ಮಾಡಿಕೊಳ್ಳಬೇಕಾಯಿತು ಎಂಬ ಪ್ರಶ್ನೆಗೆ ಉತ್ತರವಿಲ್ಲ. 2002ರ ಕೋಮು ಹಿಂಸಾಕಾಂಡದಲ್ಲಿ ಮನೆಮಾರು ಕಳಕೊಂಡ ಒಂದೂವರೆ ಲಕ್ಷ ಮಂದಿಯಲ್ಲಿ ಇನ್ನೂ 21,800 ಮಂದಿ ತಮ್ಮ ಊರುಗಳಿಗೆ ಮರಳಲು ಏಕೆ ಆಗುತ್ತಿಲ್ಲ ಎಂಬ ಪ್ರಶ್ನೆಗೆ ಉತ್ತರವಿಲ್ಲ.



'ಅಭಿವೃದ್ಧಿ'ಯ ಮುಖ

ಈ 'ಅಭಿವೃದ್ಧಿ' ರಾಜ್ಯಕ್ಕೆ ಕೊಟ್ಟಿರುವುದು ಈ ರಾಜ್ಯದ ವಾಪಿ ಎಂಬ ಪ್ರದೇಶಕ್ಕೆ ಜಗತ್ತಿನ ಹತ್ತು ಅತೀ ಮಲಿನವಾದ ಸ್ಥಳಗಳಲ್ಲಿ ಒಂದು ಎಂಬ ಮರ್ಯಾದೆ! ಇತರೆಡೆಗಳಂತೆ ಜಾಗತೀಕರಣದಡಿ ಪ್ರತಿದಿನ ಹೊಸ-ಹೊಸ ಮಾಲ್ ಗಳು ಬರುತ್ತಿವೆ, ಆದರೆ ಹಸುಳೆಗಳ ಸಾವಿನ ದರವೂ ಹೆಚ್ಚುತ್ತಿದೆ. ರಾಜಮಾರ್ಗಗಳಿಂದ ರೋಮಾಂಚಕ ಗುಜರಾತ ಮತ್ತು ಅದೃಶ್ಯವಾಗುತ್ತಿರುವ ಗುಜರಾತದ ನಡುವಿನ ಕಂದರವನ್ನು ಮುಚ್ಚಲಾಗುತ್ತಿಲ್ಲ. 'ಮೋದಿ ಐದು ಕೋಟಿ ಜನಗಳ ಬಗ್ಗೆ ಮಾತಾಡುತ್ತಾರೆ, ಐದು ಕೋಟ್ಯಾಧೀಶರಿಗಾಗಿ ಕೆಲಸ ಮಾಡುತ್ತಾರೆ' ಎಂಬ ಟೀಕೆ ವ್ಯಾಪಕವಾಗಿದೆ. 'ಅಭಿವೃದ್ಧಿ' ಮೋದಿ ಮತ್ತು 'ಹಿಂದುತ್ವ' ಮೋದಿಯ ನಡುವೆ ರಾಜ್ಯದ ಕಾರ್ಮಿಕರು, ರೈತರು, ದಲಿತರು, ಆದಿವಾಸಿಗಳು, ನಗರಗಳ ಬಡವರು ಎಲ್ಲರೂ ಹಿಂಡಿಹೋಗಿದ್ದಾರೆ. ಅವರು ಬಿಜೆಪಿ ಸರಕಾರದ 'ಅಭಿವೃದ್ಧಿ'ಯ ಫಲ ಅನುಭವಿಸುವುದಕ್ಕಿಂತ ಅದಕ್ಕೆ ಬಲಿಯೇ ಆಗಿದ್ದಾರೆ.

ಭ್ರಮನಿರಸನ

ಇನ್ನೊಂದು ಸಂಗತಿಯನ್ನು ರಾಜಕೀಯ ವಿಶ್ಲೇಷಕರು ಗಮನಕ್ಕೆ ತರುತ್ತಿದ್ದಾರೆ. ಕಳೆದ ಬಾರಿ 'ಹಿಂದುತ್ವ'ದ ಹೆಸರಿನಲ್ಲಿ ಬುಡಕಟ್ಟು ಜನಗಳನ್ನು, ದಲಿತರನ್ನು ಮುಸ್ಲಿಮ್ ಅಲ್ಪಸಂಖ್ಯಾತರ ವಿರುದ್ಧ ಎತ್ತಿ ಕಟ್ಟಲು ಸಾಧ್ಯವಾಗಿತ್ತು. ಆದರೆ ಈಗ ಈ ಜನವಿಭಾಗಗಳಲ್ಲಿ ಭ್ರಮನಿರಸನವಾಗಿದೆ ಎನ್ನಲಾಗುತ್ತಿದೆ. ರಾಜ್ಯದಲ್ಲಿ ಒಂಭತ್ತು ಜಿಲ್ಲೆಗಳಲ್ಲಿ 70ಲಕ್ಷ ಆದಿವಾಸಿಗಳಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಇತರರು ಮತ್ತು ಆದಿವಾಸಿಗಳ ನಡುವಿನ ಆರ್ಥಿಕ ಅಂತರ ಹೆಚ್ಚಿದೆ. ಇದರಿಂದಾಗಿ ಕಳೆದೆರಡು ಚುನಾವಣೆಗಳಲ್ಲಿ ಬಿಜೆಪಿಯನ್ನು ಗೆಲ್ಲಿಸಿದ ಪೂರ್ವ ಗುಜರಾತಿನ ಆದಿವಾಸಿ ಪ್ರದೇಶ ಮೋದಿಗೆ ಈ ಬಾರಿ 'ಅಪಾಯ' ಎಂಬ ಫಲಕ ಹೊತ್ತು ನಿಂತಿದೆ ಎನ್ನಲಾಗುತ್ತಿದೆ. ಕಳೆದ ಚುನಾವಣೆಗಳಲ್ಲಿ ವಿಹೆಚ್‌ಪಿ ಮಂದಿ ಚುನಾವಣೆಗಳ ವೇಳೆ ಇಲ್ಲಿ ಠಿಕಾಣಿ ಹೂಡಿದ್ದರು. ಈ ಬಾರಿ ಅವರ ಪತ್ತೆಯೇ ಇಲ್ಲವಂತೆ. ತಮ್ಮನ್ನು 'ವನವಾಸಿ'ಗಳೆಂದು ಕರೆದು ಎಂತಹ ಮೋಸ ಮಾಡಿದ್ದಾರೆ ಎಂಬ ಅರಿವು ಈಗ ಗುಜರಾತಿನ ಆದಿವಾಸಿಗಳಿಗೆ ಮನದಟ್ಟಾಗಿದೆ ಎನ್ನಲಾಗುತ್ತಿದೆ. ಇನ್ನೊಂದೆಡೆ, ಕೇಂದ್ರದ ಕಾಂಗ್ರೆಸ್ ನೇತೃತ್ವದ ಸರಕಾರ ಅರಣ್ಯ ಹಕ್ಕುಗಳ ಕಾಯ್ದೆಯನ್ನು ಎಡಪಕ್ಷಗಳ ಬೆಂಬಲದಿಂದ ತಂದಿರುವುದು ಅವರಲ್ಲಿ ನಿರೀಕ್ಷೆ ಮೂಡಿಸಿದ್ದರೂ ಅದರ ಜ್ಯಾರಿಯಲ್ಲಿ ಹಿಂಜರಿಕೆ ಅವರ ಬಗ್ಗೆಯೂ ಬೇಸರ ಮೂಡಿಸಿದೆ.

ಹಿಟ್ಲರ್ ನ್ಯಾಯ


ಇವನ್ನೆಲ್ಲಾ ಕಂಡೇ ಮೋದಿ ತಂಡ 'ಅಭಿವೃದ್ಧಿ'ಯ ಮುಖವಾಡ ತೆಗೆದು ಮತ್ತೆ 'ಹಿಂದುತ್ವ'ದ ಮೊರೆಹೊಕ್ಕಿದೆ. ಸೊಹ್ರಬುದ್ದೀನ್ ಮತ್ತು ಆತನ ಪತ್ನಿ ಕೌಸೆರ್ ಬೀ ಯನ್ನು ನಕಲಿ ಎನ್‌ಕೌಂಟರ್‌ನಲ್ಲಿ ಕೊಂದುದನ್ನು ಸಾರ್ವಜನಿಕವಾಗಿ ಒಂದು ರಾಜ್ಯದ ಮುಖ್ಯಮಂತ್ರಿಯೇ ಸಮರ್ಥಿಸಿಕೊಳ್ಳುವ ಮಟ್ಟಕ್ಕೆ ಇಳಿಯಲಾಗಿದೆ. ಈ ಮೊಕದ್ದಮೆ ಈಗ ದೇಶದ ಸರ್ವೋಚ್ಚ ನ್ಯಾಯಾಲಯದ ಮುಂದೆ ಇದ್ದರೂ ಅದರ ತೀರ್ಪಿಗೆ ಕಾಯದೆ ಈ ಮುಖ್ಯಮಂತ್ರಿ ಒಂದು ಚುನಾವಣಾ ಸಭೆಯಲ್ಲಿ ಕಾನೂನು ಬಾಹಿರವಾಗಿ ಶಸ್ತ್ರಾಸ್ತ್ರಗಳ ದಾಸ್ತಾನು ಮಾಡಿದ್ದವನನ್ನು ಏನು ಮಾಡಬೇಕು ಎಂದು ಕೇಳುತ್ತಾನೆ! ಸಭಿಕರಲ್ಲಿ ಯಾರೋ 'ಕೊಂದು ಹಾಕಬೇಕು' ಎನ್ನುತ್ತಾರೆ! 'ಅದೇ' ಎನ್ನುತ್ತಾನೆ ಮುಖ್ಯಮಂತ್ರಿ! ಹಿಟ್ಲರನ ಜರ್ಮನಿಯಲ್ಲಿಯೂ ಇಂತಹುದೇ ಘಟನೆ ನಡೆದಿತ್ತು. ಸ್ಕಾರ್ಲೆಕ್ ಸೋದರರನ್ನು ಅಪರಾಧಿಗಳು ಎಂದು ಆರೋಪಿಸಿ ಜನಜಂಗುಳಿಯ ಆದೇಶದಂತೆ ನೇಣಿಗೆ ಹಾಕಲಾಯಿತು. ಅದಕ್ಕೆ ಕೊಡಲಾದ ಸಮರ್ಥನೆಯೆಂದರೆ ಅವರ ವಿಚಾರಣೆಗಾಗಿ ಸರಕಾರ ಸಮಯ ಮತ್ತು ಹಣ ಏಕೆ ವ್ಯರ್ಥ ಮಾಡಬೇಕು? ಮೋದಿ ಅನುಸರಿಸ ಬಯಸುವುದು ಅಪರಾಧ ಸಾಬೀತಾಗುವವರೆಗೆ ಯಾರನ್ನೂ ಅಪರಾಧಿ ಎನ್ನುವಂತಿಲ್ಲ ಎಂಬ ಆಧುನಿಕ ಪ್ರಜಾಪ್ರಭುತ್ವದ ನೀತಿ-ನಿಯಮಗಳನ್ನಲ್ಲ, ಬದಲಾಗಿ ಹಿಟ್ಲರನ 'ನ್ಯಾಯ' ವನ್ನು!


ಹಿಮಾಚಲ ಪ್ರದೇಶದಲ್ಲಿ

ಇಲ್ಲಿ ಬಿಜೆಪಿ ಮತದಾರರಲ್ಲಿ ಇದೆಯೆನ್ನಲಾಗುವ 'ಅಧಿಕಾರಸ್ಥ-ವಿರೋಧಿ' ಭಾವನೆಯ ಪ್ರಯೋಜನ ಪಡೆಯುವ ವಿಶ್ವಾಸ ಹೊಂದಿದೆ. ಆದರೆ ಇಲ್ಲಿಯೂ ಬಿಜೆಪಿಯೊಳಗೆ ಒಡಕುಗಳಿವೆ. ಅದರ ಲಾಭ ಕಾಂಗ್ರೆಸ್ ಗೆ ಸಿಗಬಹುದೇನೋ. ಆ ಪಕ್ಷದೊಳಗೂ ಬಂಡಾಯಗಳಿದ್ದರೂ ಕಾಂಗ್ರೆಸ್-ವಿರೋಧಿ ಅಲೆಯೇನೂ ಕಾಣಬರುತ್ತಿಲ್ಲ ಎನ್ನುತ್ತಾರೆ ವೀಕ್ಷಕರು. ಇಲ್ಲಿ ಮತ್ತೊಂದು ಸಂಗತಿಯೆಂದರೆ ಬಿಎಸ್‌ಪಿ ಎರಡೂ ರಾಜ್ಯಗಳಲ್ಲಿ ಎಲ್ಲ ಸ್ಥಾನಗಳಿಗೆ ಸ್ಪರ್ಧಿಸುವುದಾಗಿ ಹೇಳಿದೆ. ಹಿಮಾಚಲ ಪ್ರದೇಶದಲ್ಲಿ ದಲಿತ ಜನಸಂಖ್ಯೆ ಶೇ.26 (ಬೇರೆ ಯಾವುದೇ ರಾಜ್ಯಕ್ಕಿಂತ ಹೆಚ್ಚು). ಆದರೂ ಬಿಎಸ್‌ಪಿ ಅಂತಿಮ ಪರಿಣಾಮಗಳ ನಡುವೆ ಎಂತಹ ಪ್ರಭಾವ ಬೀರಬಹುದು ಎನ್ನಲು ಈಗಲೇ ಸಾಧ್ಯವಿಲ್ಲ. ಆದರೆ ರಾಜ್ಯ ಮುಖಂಡ ಜುಲೈನಲ್ಲಿಯಷ್ಟೇ ಪಕ್ಷ ಸೇರಿದ ಕಾಂಗ್ರೆಸ್ಸಿಗ. ಬಿಎಸ್‌ಪಿಯ ಅಭ್ಯರ್ಥಿಗಳಲ್ಲಿ ಬಹಳಷ್ಟು ಮಂದಿ ದಲಿತರಲ್ಲ.

ಈ ಎರಡೂ ರಾಜ್ಯಗಳಲ್ಲಿ ಸದಾ ಜನಸಾಮಾನ್ಯರ ಪ್ರಶ್ನೆಗಳನ್ನೆತ್ತಿಕೊಂಡದ್ದು ಎಡಪಕ್ಷಗಳು, ಸಿಪಿಐ(ಎಂ) ಮಾತ್ರ. ಹಿಮಾಚಲ ಪ್ರದೇಶದಲ್ಲಿ ಈ ಪಕ್ಷ ಏಳು ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ. ರಾಜಧಾನಿ ಶಿಮ್ಲಾದಲ್ಲಿ ಅದರ ಸ್ಪರ್ಧೆಯನ್ನು ಆಸಕ್ತಿಯಿಂದ ಗಮನಿಸಲಾಗುತ್ತಿದೆ. ಕಳೆದ ಬಾರಿ ಇಲ್ಲಿ ಅದು ಎರಡನೇ ಸ್ಥಾನದಲ್ಲಿತ್ತು. ಬಿಜೆಪಿ ಮೂರನೇ ಸ್ಥಾನದಲ್ಲಿ ಬಹಳ ದೂರದಲ್ಲಿತ್ತು. ಈ ಬಾರಿ ಬಿಜೆಪಿ ರಾಜ್ಯಸಭಾ ಸದಸ್ಯ ಸುರೇಶ್ ಭರದ್ವಾಜ್‌ರನ್ನು ನಿಲ್ಲಿಸಿದೆ. ಗುಜರಾತಿನಲ್ಲಿ ಸಿಪಿಐ(ಎಂ) ಎಂದಿನಂತೆ ಭಾವನಗರ(ಉತ್ತರ)ದಲ್ಲಿ ಸ್ಪರ್ಧಿಸುತ್ತಿದೆ.

ಜನಶಕ್ತಿ ಕನ್ನಡ ವಾರಪತ್ರಿಕೆ
ಡಿಸೆಂಬರ್ 23, 2007





ಸಾವಿತ್ರಿ ಅಕ್ಷರ ಕಲಿಸಲು ದಣಿವರಿಯದೇ ಶ್ರಮಿಸುವಾಗ ಪುರೋಹಿತಶಾಹಿ ವರ್ಗದವರು ಅಪಮಾನ ಮಾಡಿ ಹಿಮ್ಮೆಟ್ಟಿಸಲು ಹೆಣಗಿ ನಿಂದೆ ಮಾಡಿದರು. ಮರೆಯಲ್ಲಿ ನಿಂತು ಕಲ್ಲು, ಸಗಣಿ ಹೊಡೆದರು. ಯಾವುದಕ್ಕೂ ಅಳುಕದ ಸಾವಿತ್ರಿ ಅರಿವಿನ ಬೆಳಕೆತ್ತಿ ಮುನ್ನಡೆದಳು.

ಮುಂಜಾನಿ ನಾನೆದ್ದು ಸಾವಿತ್ರಿನ ನೆನದೇವ...

ಸರಿ ರಾತ್ರಿ ಜಾರಿತು. ಮುಂಜಾವಿಗೆ ಮುನ್ನದ ಗಳಿಗೆಯದು. ಎರಡು ಪುಟ್ಟ ಹನಿಗಳು ಕಣ್ಣ ಪಕ್ಕದ ಕಪಾಳಿಗೆ ತಣ್ಣಗೆ ಸ್ಪರ್ಶಿಸಿದವು. ಅವು ಹೆಮ್ಮೆ ಮತ್ತು ಆನಂದದ ಭಾಷ್ಪಗಳೇ ಆಗಿದ್ದವು. ನಾನು ತುಂಬಾ ಪ್ರೀತಿಸುವ ಸಾವಿತ್ರಿ ಬಾಯಿ ಫುಲೆಯ ಜೀವನ ಚರಿತ್ರೆ ಪುಸ್ತಕದ ಕಡೆಯ ಪುಟ ತಿರುವಿ ಮಗ್ಗಲು ಹೊರಳಿದೆ. ಅಕ್ಕಮಹಾದೇವಿಯಂತೆ, ಸಾವಿತ್ರಿಬಾಯಿ ಮತ್ತೆ ಮತ್ತೆ ನೆನಪಿನಂಗಳಕೆ ಮರಳುತ್ತಿದ್ದವು.

ಎಂಥ ಸಾಹಸಗಾಥೆಯದು! ಎದೆ ತುಂಬುವ ಜೀವಧೀರತೆಯದು! ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಖಂಡಾಳಾ ತಾಲ್ಲೂಕಿನ ಒಂದು ಸಣ್ಣಹಳ್ಳಿ ನಾಯ್‌ಗಾಂವ್ ಸಾವಿತ್ರಿಯ ಊರು ಜ್ಯೋತಿಬಾ ಫುಲೆ ಯಾರಿಗೆ ಗೊತ್ತಿಲ್ಲ? ಜಾತಿ ವ್ಯವಸ್ಥೆಯ ವಿರುದ್ಧ ಸಮರ ಸಾರಿದ ಧೀರ. ಅಕ್ಷರವೆಂಬುದು ಪುರೋಹಿತ ಸ್ವತ್ತಲ್ಲ, ಅಕ್ಷರ ಲೋಕ ಅರಿವಿನ ಹೆಬ್ಬಾಗಿಲೆಂದು ರುಜುಗೊಳಿಸಿದಾತ. ಎಳೆ ಮಗು ಸಾವಿತ್ರಿಯನ್ನು ಪುಣೆಯ ಜ್ಯೋತಿಬಾ ರೊಂದಿಗೆ ಹಿರಿಯರು ಮದುವೆಯೇನೋ ಮಾಡಿದರು. ಆದರೆ ಸಾವಿತ್ರಿ ಮತ್ತು ಜ್ಯೋತಿ ಬಾ, ಕುಟುಂಬ ಮತ್ತು ಸಮಾಜವನ್ನು ಅವಿನಾಭಾವವಾಗಿ ಬೆಸೆದ ಸಂಗಾತಿಗಳಾಗಿದ್ದರು. ಸಮತೆ ನಾಡಿನ ಕನಸು ಕಂಡವರು. ಕನಸ ಬೀಜಗಳನ್ನು ಬಿತ್ತಿ ಬೆಳೆಗಾಗಿ ಶ್ರಮಿಸಿದ್ದು ತಪಸ್ಸಿನಂತೆ. ಹಾಗೆ ನೋಡಿದರೆ ಅವರ ಜೀವನವೇ ಒಂದು ತಪಸ್ಸು, ನಡೆ-ನುಡಿಯನ್ನು ಒಂದುಗೊಳಿಸಿದವರು. ಆ ಹೊತ್ತಿನಲ್ಲಿ ದುಡಿವ ಜನತೆ ಶೂದ್ರರು, ದಲಿತರು, ಮಹಿಳೆಯರು ಉಸಿರುಗಟ್ಟಿ ಅಪಮಾನದಿಂದ ತತ್ತರಿಸುತ್ತಿದ್ದರು. ದಿನವಿಡೀ ದುಡಿದರೂ ಗೇಣು ಹೊಟ್ಟೆ ತುಂಬದ ಸ್ಥಿತಿ. ಉಳ್ಳವರ ಚಾಕರಿಯಲ್ಲಿ ಜೀವನವೇ ಸವೆಯುತ್ತಿತ್ತು. ದಲಿತ ಸಮುದಾಯವಂತೂ ಘನಘೋರ, ಯಾತನೆಯಲ್ಲಿ ಬದುಕುತ್ತಿತ್ತು. ಆಗ ನೋಡಿ, ಈ ನೆಲದುದ್ದಕ್ಕೂ ಪ್ರತಿಭಟನೆಯ ಬಿಸಿಲು ಪಲ್ಲವಿಸತೊಡಗಿತು. ಬಹುಶಃ ಬದುಕಿನ ಎಲ್ಲ ಮಗ್ಗುಲಿನ ಪ್ರಶ್ನೆಗಳನ್ನೆತ್ತಿಕೊಂಡು ಸಮಗ್ರ ಚಳುವಳಿ ರೂಪಿಸದೆ ಸಂಪೂರ್ಣ ಬದಲಾವಣೆ ಸಾಧ್ಯವಿಲ್ಲ ಎಂಬುದು ಸಾವಿತ್ರಿಗೂ ಮನದಟ್ಟಾಗಿಸಿ ಕೊಂಡಿರಬೇಕು. ತಲೆಯೊಳಗಿನ ಆಳುವ ವರ್ಗದ ವಿಚಾರಧಾರೆ ತೊಡೆಯಲು ಅಕ್ಷರವೂ ಬೇಕೇ ಬೇಕು. ಜ್ಯೋತಿ ಬಾರ ಅವಿತರ ಶ್ರಮದ ಫಲವೂ ಸಾವಿತ್ರಿಯ ಸಮಾಜ ಮುಖಿ ಆಸಕ್ತಿಯ ಕಾರಣವಾಗಿಯೂ ಆ ದಲಿತ ಕುಟುಂಬದಲ್ಲಿ ಪ್ರಥಮ ಅಕ್ಷರ ಬಲ್ಲ ಸ್ತ್ರೀಯೊಬ್ಬಳು ನೋಡ ನೋಡುತ್ತಲೇ ಸೂರ್ಯಪ್ರಭೆಯಂತೆ ಅರಳಿದಳು. ಅವಳೇ ಸಾವಿತ್ರಿಬಾಯಿ ಫುಲೆ. ದಲಿತರನ್ನು ಹೆಂಗಸರನ್ನು ಅಕ್ಷರದಂಗಳದಿಂದ ಬಹಿಷ್ಕರಿಸಿದ ಕಾಲವದು. ದಿನವೆಲ್ಲ ದುಡಿದು, ರಾತ್ರಿಯಿಡೀ ಗಂಡನ ನೆರವಿಂದ ಅಕ್ಷರ ಕಲಿತ ಸಾವಿತ್ರಿ ಮರುದಿನಕೆ ಮನೆ-ಮನೆಗೆ ಹೋಗಿ ಸ್ತ್ರೀಯರ ಮನವೊಲಿಸಿ ಅಕ್ಷರ ಕಲಿಸ ತೊಡಗಿದಳು. ಜ್ಯೋತಿಬಾ ಮತ್ತು ಗೆಳೆಯರು ನಡೆಸುವ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕಿಯೂ ಆದಳು. ಅವಳ ಫಲವಾಗಿಯೇ ಕ್ರಮೇಣ ಹುಡುಗಿಯರು ಶಾಲೆಗೆ ಬರತೊಡಗಿದರು. ರಕ್ಮಾ ಎಂಬ ಹದಿಮೂರು ವರ್ಷದ ಹುಡುಗಿಯು 'ನಾನು ಹಾಗೂ ನನ್ನ ಧರ್ಮ' ಎಂಬ ಪ್ರಬಂಧ ಬರೆದು ಓದಿದಳು 'ವೇದಗಳು ಬ್ರಾಹ್ಮಣರ ಸ್ವತ್ತಾದರೆ ವೇದಗಳಲ್ಲಿ ಹೇಳಿದ ಹಾಗೆ ನಡೆಯೋದು ಅವರದೇ ಧರ್ಮ. ನಮಗೆ ಶ್ಲೋಕ ಕಲಿಯೋಕೆ, ಧರ್ಮ ಗ್ರಂಥ ಓದೋಕೆ ಪರವಾನಿಗೆ ಇಲ್ಲ ಅಂದ್ರೆ. ಆ ಧರ್ಮ ಗ್ರಂಥಗಳಲ್ಲಿ ಹೇಳಲಾದ ಧರ್ಮ ನಮಗೆ ಅನ್ವಯವಿಲ್ಲ ಅಂತ ತಾನೇ ಅರ್ಥ?' ಆ ಹುಡುಗಿಯ ಪ್ರಬಂಧದಿಂದ ಸಾವಿತ್ರಿಯಲ್ಲಿ ನೂರು ಕನಸುಗಳು ಗರಿಗೆದರಿದವು. ಸಾವಿತ್ರಿ ಯಾವತ್ತೂ ರಸ್ತೆಗೆ ಬಂದು ಹೋರಾಟದ ಬಾವುಟವೆತ್ತಿ ಜಿಂದಾಬಾದ್ ಹೇಳಲಿಕ್ಕಿಲ್ಲ. ಆದರೆ ಸಾವಿತ್ರಿಯು ಅಸಂಖ್ಯ ಹೋರಾಟದ ಕಿಡಿಗಳಲ್ಲಿ ಕಾವು ತುಂಬಿದವಳು. ಪಾಳೇಗಾರಿ ಪಳಿಯುಳಿಕೆಗಳನ್ನು ಗುಡಿಸಿ ಹಾಕಲು ಸಾವಿತ್ರಿ ಮತ್ತು ಫುಲೆ ಶ್ರಮಿಸಿದ್ದು ಸುಮ್ಮನೆ ಅಲ್ಲ. ಅವರ ಒಡಲೊಳಗಿನ ಮಾನವೀಯತೆ ಅಂತಃಕರಣ, ನ್ಯಾಯಪರ ಛಲದ ಕಾರಣವಾಗಿ ಅಂದು ಹುಟ್ಟಿಕೊಂಡ. ವಿಚಾರ ಕ್ರಾಂತಿಯು ಅನೇಕ ಚಳುವಳಿಗಳ ಭೂಮಿಕೆಯೂ ಹೌದು.

ಸಾವಿತ್ರಿ ಅಕ್ಷರ ಕಲಿಸಲು ದಣಿವರಿಯದೇ ಶ್ರಮಿಸುವಾಗ ಪುರೋಹಿತಶಾಹಿ ವರ್ಗ ಅಪಮಾನ ಮಾಡಿ ಹಿಮ್ಮೆಟ್ಟಿಸಲು ಹೆಣಗಿ ನಿಂದೆ ಮಾಡಿದರು. ಮರೆಯಲ್ಲಿ ನಿಂತು ಕಲ್ಲು, ಸಗಣಿ ಹೊಡೆದರು. ಯಾವುದಕ್ಕೂ ಅಳುಕದ ಸಾವಿತ್ರಿ ಅರಿವಿನ ಬೆಳಕೆತ್ತಿ ಮುನ್ನಡೆದಳು. ಪಯಣದಲ್ಲಿ ಕಂಡದ್ದೇನು? ಬ್ರಾಹ್ಮಣರ ಮತ್ತು ಮೇಲ್ಜಾತಿಯ ಬಾಲೆ ವಿಧವೆಯರ ಗೋಳು, ಹರೆಯದ ವಿಧವೆಯರನ್ನು ರಾತ್ರಿಯಲ್ಲಿ ಬಳಸಿ ಹಗಲಲ್ಲಿ ಬಾವಿಗೆ ತಳ್ಳುವ ಕ್ರೌರ್ಯ, ವಿಧವೆಗೆ ಹುಟ್ಟಿದ ನವಜಾತ ಶಿಸುಗಳ ಹತ್ಯೆ. ಪತಿಯ ಮರಣದ ನಂತರ ಸತಿಯ ಕೇಶ ಮುಂಡನೆ. ಸಾವಿತ್ರಿಯ ಕರುಳು ಚುರ್ರೆಂದಿತು. ಈ ಸಂಕಟ ತಡೆಗಟ್ಟುವ ಹಾದಿ ಹುಡುಕತೊಡಗಿದರು ಗಂಡ-ಹೆಂಡತಿ. ಮೈದುನನ ಚಟಕೆ ಬಲಿಯಾಗಿ ಬಸುರಿಯಾದ ವಿಧವೆಯು ಪ್ರಾಣತ್ಯಾಗಕ್ಕೆಂದು ಬಾವಿಗೆ ಹೋದಾಗ. ಸಾವಿತ್ರಿಯ ದೃಷ್ಟಿಗೆ ಬಿದ್ದು, ತಬ್ಬಿಕೊಂಡು ಮನೆಗೆ ಕರೆ ತಂದಳು. ಹೆರಿಗೆಯಾಗುವವರೆಗೂ ಮನೆಯಲ್ಲಿಟ್ಟ ಕೊಂಡು ತಾನೇ ಹೆರಿಗೆ ಮಾಡಿ ಹೊಕ್ಕಳು ಬಳ್ಳಿ ಹರಿದು ಕಂದನನ್ನು ಎದೆಗಪ್ಪಿಕೊಂಡಳು ಸಾವಿತ್ರಿ. ಆ ತಾಯ ಕಣ್ಣೀರ ತೊಡೆದು ಅವಳೆದೆಯ ಮಾತೆಲ್ಲವನ್ನು ತನ್ನಂತರಂಗದಲ್ಲಿಟ್ಟುಕೊಂಡಳು. ಇಂಥ ಎಷ್ಟೋ ಮೇಲ್ಜಾತಿ ಕೂಸುಗಳ 'ತಾಯಿ' ಯಾದಳು ಸಾವಿತ್ರಿ. ಅವಳ ಹೃದಯ ವೈಶ್ಯಾಲತೆಗೆ ಅಂತಃಕರಣಕ್ಕೆ ಯಾವುದನ್ನು ಹೋಲಿಸುವುದು? ಮುಗಿಲೇ? ಕಡಲೇ?... ಸಾವಿತ್ರಿ ನಿರ್ಮಲ ಜ್ಯೋತಿಯಂತೆ. ಆದೊಂದು ದಿನ ಕ್ಷೌರಿಕರನ್ನೆಲ್ಲಾ ಕರೆದಳು. ಬೇರೆ ಬೇರೆ ಜಿಲ್ಲೆಗಳಿಂದ ನಿಮ್ಮದೇ ಅಕ್ಕ-ತಂಗಿಯರಂತಿರುವ ಮೇಲ್ಜಾತಿ ವಿಧವೆಯರ ಕೇಶ ಮುಂಡನ ಮಾಡಿ ಸ್ತ್ರೀ ಸಂಕುಲಕೆ ಅವಮಾನಿಸಬೇಡಿರೆಂದು ಕೇಳಿಕೊಂಡಳು. ಚರ್ಚಿಸಿ ತಿಳಿ ಹೇಳಿದಳು. ದೋಬಾ ಕೃಷ್ಣಾಜಿ ಹೆಸರಿನ ವೃದ್ಧನಿಗೆ ಸರಿಯೆನ್ನಿಸಿತು. ಸಭೆಗೆ ಅವನೇ ಅಧ್ಯಕ್ಷ ಬಾಬಾಜಿ ಮೋರೆ ತನ್ನ ಅನುಮೋದನೆ ಹೇಳಿದ ವಿಧವೆಯರ ಕೂದಲು ಕತ್ತರಿಸಬಾರದು ಮತ್ತು ಅವರ ಕತ್ತರಿಸಲು ಒತ್ತಾಯಿಸುವ ಮನೆಯ ಗಂಡಸರ ಕೂದಲೂ ಕತ್ತರಿಸಬಾರದೆಂದು ನಿರ್ಣಯ ಕೈಗೊಳ್ಳಲಾಯಿತು. ಮಹಿಳೆಯರ ಸಂಕಟಗಳ ನಿವಾರಣೆಗೆ ಶ್ರಮಿಸಿದ ಶಕ್ತಿಗಳು ಎಷ್ಟಿವೆ ನೋಡಿ. ವೈಯಕ್ತಿಕ ಆದಾಯದ ಆಮಿಷ ತೊರೆದು ಕೈಗೊಂಡ ಆ ನಿರ್ಣಯ ಜೀವಪರ ಹೋರಾಟದಲ್ಲೊಂದು ಮೈಲಿಗಲ್ಲು ಅಲ್ಲವೇ? ಹೀಗೆ ಸಾವಿತ್ರಿಯ ಹೋರಾಟದ ಪಯಣ ಸಾಗುತ್ತಲೇ ಇತ್ತು. ಆ ನಂತರವೇ ಅಂದಿನ ಬ್ರಿಟಿಷ್ ಸರ್ಕಾರವು 25 ಜುಲೈ 1856ರಂದು ವಿಧವಾ ವಿವಾಹ ಕಾಯ್ದೆ ತಂದಿತು.

ಒಂದೆಡೆ 'ಬಾಲ್ಯ ಹತ್ಯಾ ಪ್ರತಿಬಂಧಕ ಗೃಹ' ಆರಂಭಿಸಿದ ಸಾವಿತ್ರಿ ದಂಪತಿಗಳು ಇನ್ನೊಂದೆಡೆ ಅಕ್ರಮ ಗರ್ಭವತಿಯರ ಪ್ರಸವಕ್ಕೆ ತಮ್ಮ ಮನೆಯೇ ತೆರೆದಿಟ್ಟರು. ಆತ್ಮಹತ್ಯೆಯಿಂದ ಪಾರಾಗುವ ಈ ಜಾಹೀರಾತನ್ನು ನಾಸಿಕ, ವಾಯಿ, ಕಾಶೀ ತೀರ್ಥಸ್ಥಾನ(!) ಗಳಲ್ಲಿ ಅಂಟಿಸಿದರು. ಇದೊಂದು ಸಾಹಸವೇ ಸರಿ. ಜ್ಯೋತಿ ಬಾ ಮತ್ತು ಸಾವಿತ್ರಿಗೆ ಜನಿಸಿದ ಮಗುವೇ ತನಗೆಬೇಕೆಂದು ಫುಲೆ ತಂದೆ ಹಠ ಹಿಡಿದಾಗ ಬ್ರಾಹ್ಮಣ ವಿಧವೆಯ ಕೂಸು ಯಶವಂತನನ್ನು ಉಡಿಯಲ್ಲಿಟ್ಟುಕೊಂಡು ಇವನೇ ನಮ್ಮ ಮಗ ಎಂದು ಸಾರಿದರು. ಮಾತ್ರವಲ್ಲ ತಮ್ಮ ಸಾವಿನ ನಂತರ ಆ ಮಗನನ್ನೇ ವಾರಸುದಾರರಾಗಿಸಿದರು. ತಮ್ಮ ಚಿತೆಗೆ ಯಶವಂತನೇ ಸತ್ಯಶೋಧನ ಸಮಿತಿಯ ರಿವಾಜಿಯಂತೆ ಅಂತ್ಯಕಾರ್ಯ ಮಾಡುವುದು ಎಂದರು. ಹಾಗೆಯೇ ನಡೆಯಿತು. ಜ್ಯೋತಿ ಬಾ ಫುಲೆಯ ಮರಣದ ನಂತರ ಸಾವಿತ್ರಿಯೇ ಮಡಕೆ ಹಿಡಿದು ಮುನ್ನಡೆದಳು. ನೋವಿನಲಿದ್ದವರಿಗೆ ಹೆಗಲು ಕೊಡಿ ಎಂದು ಉಸಿರು ಬಿಟ್ಟ ಜ್ಯೋತಿ ಬಾ ಮಾತು ಸಾವಿತ್ರಿ ಕೊನೆ ಉಸಿರವರೆಗೂ ನಡೆಸಿಕೊಟ್ಟಳು. ಪ್ಲೇಗ್ ಪೀಡಿತ ಜನರ ನೆರವಿಗೆ ಧಾವಿಸಿ, ಸೋಂಕಿಗೆ ಬಲಿಯಾಗಿ ಸಾವಿತ್ರಿ ಕೊನೆಯುಸಿರೆಳೆದಳು.. ಸಾವಿತ್ರಿ ಇಲ್ಲವಾದಳೇ? ಇಲ್ಲ. ಮೊದಲ ದಲಿತ ಮಹಿಳಾ ಅಕ್ಷರಸ್ಥೆ ಮಹಿಳಾ ವಿಮೋಚನೆಯ ಹೋರಾಟದ ಹಾದಿಯಲ್ಲಿ ಅಜರಾಮರಳಾದಳು ಚಿರಾಯುವಾದಳು.

ಪ್ರಿಯ ಅಕ್ಷರಸ್ಥ ಗೆಳತಿಯರೇ ನಾವು ಪಡೆದ ಡಿಗ್ರಿಗಳ ಸರ್ಟಿಫಿಕೇಟ್‌ಗಳ ಹಿಂದೆ ಸಾವಿತ್ರಿ ಬಾಯಿಯಂಥ ಅಸಂಖ್ಯ ಸಂಗಾತಿಗಳ ತ್ಯಾಗವಿದೆ. ಅವರ ತ್ಯಾಗದಲ್ಲಿ ಬಲಿದಾನದಲ್ಲಿ ನಮ್ಮ ಹಕ್ಕುಗಳು ಅರಳಿವೆ. ಹೌದು, ಸಮಾಜವಾದದ ಗುರಿ ಮುಟ್ಟಲು ಜನತಾ ಕ್ರಾಂತಿಯತ್ತ ಶ್ರಮಿಸಲು ಪ್ರಜಾಸತ್ತಾತ್ಮಕ ವಿಶಾಲ ತಳಹದಿಯ ಚಳುವಳಿ ಬಲಪಡಿಸಬೇಕು. ಅಕ್ಷರ, ಆರೋಗ್ಯ ಉದ್ಯೋಗಗಳು ಇದಕ್ಕಾಗಿ ಸಮರ ಸಾರಲೇಬೇಕು.

ಬೆಳಕು ಹರಿಯಿತು. ಮುಂಜಾನಿ ನಾನೆದ್ದು ಯಾರ್‍ಯಾರ ನೆನೆಯಲಿ....? ಜನಪದ ಹಾಡು ನೆನಪಾಯ್ತು. 'ಮುಂಜಾನಿ ನಾನೆದ್ದು ಸಾವಿತ್ರಿನ ನೆನೆದೇನ...' ಹೃದಯ ಹಾಡಿತು.

○

ಜಮ್ಮು-ಕಾಶ್ಮೀರ: ಉದ್ಯೋಗಕ್ಕಾಗಿ ಎಡೆಬಿಡದ ಹೋರಾಟ ನಡೆಸಲು ಯುವಜನರ ನಿರ್ಧಾರ

ಜಮ್ಮು-ಕಾಶ್ಮೀರದಲ್ಲಿ ಯುವಜನರು ಹೆಚ್ಚೆಚ್ಚು ಅಸಂತುಷ್ಟರಾಗುತ್ತಿದ್ದಾರೆ, ತುತ್ತತುದಿಯಲ್ಲಿರುವ ಕೆಲವರಿಗೆ ಭಾರೀ ಸಂಬಳದ ಕೆಲಸಗಳು ದೊರೆಯುತ್ತಿವೆ, ಆದರೆ ಸಾಮಾನ್ಯ ಶಿಕ್ಷಣ ಮಾತ್ರ ಪಡೆಯಲು ಸಾಧ್ಯವಿರುವ ಬಹುಪಾಲು ಯುವಜನರಿಗೆ ಯಾವುದೇ ಅವಕಾಶಗಳಿಲ್ಲ, ಆದ್ದರಿಂದ ರಾಜ್ಯದ ಆರ್ಥಿಕ ನೀತಿಗಳನ್ನು ಬದಲಿಸಿ ಉದ್ಯೋಗ ಸೃಷ್ಟಿಯ ನೀತಿಗಳನ್ನು ಅಂಗೀಕರಿಸಬೇಕು, ಅದುವರೆಗೆ ನಿರುದ್ಯೋಗಿ ಯುವಜನರಿಗೆ ಸಾಕಷ್ಟು ಮಾಸಿಕ ಭತ್ಯೆ ನೀಡಬೇಕು ಎಂದು ಜಮ್ಮು ಕಾಶ್ಮೀರ ಪ್ರಜಾಸತ್ತಾತ್ಮಕ ಯುವಜನ ಒಕ್ಕೂಟ ಆಗ್ರಹಿಸಿದೆ. ನವಂಬರ್ 25-26 ರಂದು ಕುಲ್‌ಗಾಂವ್‌ನಲ್ಲಿ ನಡೆದ ಈ ಸಂಘಟನೆಯ ಎರಡನೆ ರಾಜ್ಯ ಸಮ್ಮೇಳನ ಈ ಕುರಿತು ಒಂದು ಠರಾವು ಅಂಗೀಕರಿಸಿ ಈ ಬೇಡಿಕೆಯ ಈಡೇರಿಕೆಗಾಗಿ ಅವಿರತ ಹೋರಾಟ ನಡೆಸಲು ನಿರ್ಧರಿಸಿದೆ. ಮಾನವ ಹಕ್ಕುಗಳ ಉಲ್ಲಂಘನೆ ಈ ರಾಜ್ಯದ ಜನತೆ, ಅದರಲ್ಲೂ ಯುವಜನತೆ ಎದುರಿಸುತ್ತಿರುವ ಇನ್ನೊಂದು ಪ್ರಮುಖ ಸಮಸ್ಯೆ. ಆದ್ದರಿಂದ ಈ ಸಮ್ಮೇಳನ ಮಾನವ ಹಕ್ಕುಗಳ ಉಲ್ಲಂಘನೆಯ ವಿರುದ್ಧ ಹೋರಾಟವನ್ನು ಮುಂದುವರೆಸಲು ನಿರ್ಧರಿಸುತ್ತಾ ಬಂಧನದಲ್ಲಿ ಸಾವುಗಳು, ಯುವಜನರ ಕಾಣೆಯ ಹಿಂದಿರುವ ಸತ್ಯಾಂಶಗಳನ್ನು ಕಂಡುಹಿಡಿಯಲು, ನಿಜವಾದ ತಪ್ಪಿತಸ್ಥರನ್ನು ಗುರುತಿಸಿ ಶಿಕ್ಷಿಸಲು ಒಂದು ಉನ್ನತಾಧಿಕಾರದ ಮಾನವ ಹಕ್ಕು ಆಯೋಗ ರಚಿಸಬೇಕು ಎಂದು ಆಗ್ರಹಿಸಿದೆ.

ಸಮ್ಮೇಳನ 25 ಸದಸ್ಯರುಳ್ಳ ರಾಜ್ಯ ಕಾರ್ಯಕಾರಿ ಸಮಿತಿಯನ್ನು ಆರಿಸಿತು. ಮಹಮ್ಮದ್ ಇಕ್ಬಾಲ್ ಅಧ್ಯಕ್ಷರಾಗಿ, ಮಹಮ್ಮದ್ ಅಮೀನ್ ಧರ್ ಪ್ರಧಾನ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಚುನಾಯಿತರಾದರು.

ಆರಂಭದಲ್ಲಿ ನಡೆದ ಬೃಹತ್ ರ್‍ಯಾಲಿಯನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎಂ.ವೈ.ತರಿಗಾಮಿ ಮಾತಾಡಿದರು. ಬಾರತ ಮತ್ತು ಪಾಕಿಸ್ತಾನದ ನಡುವಿರುವ ತಿಕ್ಕಾಟ ಮತ್ತು ವೈರತ್ವದ ದಾರಿ ಈ ಪ್ರದೇಶದ ಸಾಮಾಜಿಕ-ಆರ್ಥಿಕ ಪ್ರಗತಿಗೆ ಕಂಟಕ ವಾಗಿದೆ, ಎರಡೂ ಕಡೆಯ ಸರಕಾರ ಗಳು ಸಂಕುಚಿತ ಪರಿಗಣನೆಗಳಿಂದ ಮೇಲೆದ್ದು ನಿಲ್ಲಬೇಕು, ಅದಕ್ಕಿಂತಲೂ ಹೆಚ್ಚಾಗಿ ಎರಡೂ ದೇಶಗಳಲ್ಲಿ ಪ್ರಜಾಸತ್ತಾತ್ಮಕ ಆಂದೋಲನಗಳು, ಮುಖ್ಯವಾಗಿ ಯುವಜನರ ಆಂದೋಲನಗಳು ಶಾಂತಿ ಮತ್ತು ಹೊಂದಾಣಿಕೆಯ ಪ್ರಕ್ರಿಯೆಯನ್ನು ಬಲಪಡಿಸಲು ಒತ್ತಡ ಹಾಕಬೇಕು ಎಂದು ಅವರು ಕರೆ ನೀಡಿದರು.

ಕೊನೆ ಮೊದಲಿಲ್ಲದ ಅಪಪ್ರಚಾರಗಳಿಗೆ ಗುರಿಯಾದ 'ನಂದಿಗ್ರಾಮ' ಪ್ರಕರಣದ ಸತ್ಯಗಳೇನು? ಈ ಒಟ್ಟು ಘಟನೆಗಳ ಹಿಂದಿನ ಶಕ್ತಿಗಳು ಯಾವುವು ಎಂಬ ಒಂದು ಅವಲೋಕನ ಇಲ್ಲಿದೆ.

ನಂದಿಗ್ರಾಮದಲ್ಲಿ ಶಾಂತಿಯ ಶತ್ರುಗಳಿಗೆ ಸೋಲು

ಭಾಗ 1

ನಿತ್ಯಾನಂದಸ್ವಾಮಿ

ನಂದಿಗ್ರಾಮದಲ್ಲಿ ಬೆಳಕು ಹರಿಯುತ್ತಿದೆ. ಕಳೆದ ಹನ್ನೊಂದು ತಿಂಗಳುಗಳ ಅವಧಿಯಲ್ಲಿ ಅಲ್ಲಿ ಅನಗತ್ಯವಾಗಿ ಉಂಟು ಮಾಡಲಾದ ಅರಾಜಕತೆಗೆ ಈಗ ತೆರೆ ಬೀಳುತ್ತಿದ್ದು ಎಲ್ಲೆಡೆ ಶಾಂತಿ ಪಸರಿಸತೊಡಗಿದೆ. ಆದರೆ ನಂದಿಗ್ರಾಮದಲ್ಲಿ ಶಾಂತಿ ನೆಲೆಸುವುದನ್ನು ಬಯಸದವರಿದ್ದಾರೆ. ಅವರು ಪಶ್ಚಿಮ ಬಂಗಾಳದಲ್ಲಿಯೂ ಇದ್ದಾರೆ. ಇಲ್ಲಿ ಕರ್ನಾಟಕದಲ್ಲಿಯೂ ಇದ್ದಾರೆ. ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ವಿರುದ್ಧ ಅವರು ಬರೆಯುವುದನ್ನು, ಬೈಯ್ಯುವುದನ್ನು ನಿಲ್ಲಿಸಿಲ್ಲ. ಅವರ ನಿಜವಾದ ಕಾಳಜಿ ನಂದಿಗ್ರಾಮದ ಜನರ ಪರವಾಗಿದ್ದರೆ ಅವರು ಈಗಲಾದರೂ ವಿಷ ಕಾರುವುದನ್ನು ನಿಲ್ಲಿಸಬೇಕಾಗಿತ್ತು. ಅವರ ನಿಜವಾದ ಗುರಿ ಇರುವುದು ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ವಿರುದ್ಧ. ನಂದಿಗ್ರಾಮದ ವಿಷಯ ಅಲ್ಲದಿದ್ದರೆ ಇನ್ನೂ ಯಾವುದಾದರೊಂದು ವಿಷಯವನ್ನು ಎತ್ತಿಕೊಂಡು ಎಡಪಕ್ಷಗಳ ವಿರುದ್ಧ ಮುಖ್ಯವಾಗಿ ಸಿಪಿಐ(ಎಂ) ವಿರುದ್ಧ ಸುಳ್ಳು ಆರೋಪಗಳನ್ನು ಹೊರಿಸುತ್ತಾ ಜನತೆಯನ್ನು ದಾರಿ ತಪ್ಪಿಸುವ ಕೆಲಸವನ್ನು ಅವರು ಮಾಡುತ್ತಾ ಇರುತ್ತಾರೆ.


ಹತಾಶ ಶಕ್ತಿಗಳ ಕೂಟ

2004ರ ಚುನಾವಣೆಗಳ ನಂತರ, ಸಂಸತ್ತಿನಲ್ಲಿ ಎಡಪಕ್ಷಗಳ ಪ್ರಾತಿನಿಧ್ಯ ಗಣನೀಯವಾಗಿ ವೃದ್ಧಿಸಿದ್ದರ ಪರಿಣಾಮವಾಗಿ, ಎಡಪಕ್ಷಗಳು ದೇಶದ ರಾಜಕೀಯದಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸತೊಡಗಿವೆ. ಕಾಂಗ್ರೆಸ್, ಬಿಜೆಪಿ ಮತ್ತಿತರ ಬಲಪಂಥೀಯ ಪಕ್ಷಗಳಿಂದ ಭ್ರಮನಿರಸನಗೊಂಡ ಜನತೆ ಪರ್ಯಾಯಕ್ಕಾಗಿ ಎಡಪಕ್ಷಗಳತ್ತ ನೋಡುವಂತಾಗಿದೆ. ಭಾರತ-ಅಮೇರಿಕ ಪರಮಾಣು ಒಪ್ಪಂದದ ವಿಷಯದಲ್ಲಿ ಎಡಪಕ್ಷಗಳು ತೆಗೆದುಕೊಂಡ ದಿಟ್ಟ ನಿಲುಮೆಗೆ ವ್ಯಾಪಕ ಜನಮನ್ನಣೆ ವ್ಯಕ್ತವಾಗಿದೆ. ಇದರಿಂದಾಗಿ ಅಮೇರಿಕದ ನೇತೃತ್ವದ ಸಾಮ್ರಾಜ್ಯಶಾಹಿ ಶಕ್ತಿಗಳು ಕೆರಳುವಂತಾಗಿವೆ. ಅವರೊಂದಿಗೆ ಕಿರಿಯ ಪಾಲುದಾರಿಕೆಯನ್ನು ಪಡೆದಿರುವ ಭಾರತದ ದೊಡ್ಡ ಬಂಡವಾಳಗಾರರು ಈ ಬೆಳವಣಿಗೆಯಿಂದ ಕಂಗೆಟ್ಟಿದ್ದಾರೆ. ಹಿಂದುತ್ವ ಶಕ್ತಿಗಳು ಅಧಿಕಾರಕ್ಕೆ ಬರುವುದನ್ನು ತಡೆಯುವುದರಲ್ಲಿ ಮುಖ್ಯ ಪಾತ್ರವನ್ನು ನಿರ್ವಹಿಸುತ್ತಾ ಬಂದಿರುವ ಎಡಪಕ್ಷಗಳು ಹೆಚ್ಚೆಚ್ಚು ಜನಮಾನ್ಯತೆ ಪಡೆಯುತ್ತಿರುವುದನ್ನು ಕಂಡು ಸಂಘಪರಿವಾರಕ್ಕೆ ಗಾಬರಿಯಾಗಿದೆ. ಅಲ್ಪಸಂಖ್ಯಾತರ ನಡುವಿನ ಮತಾಂಧತೆಯನ್ನೂ ಅಷ್ಟೇ ದೃಢವಾಗಿ ವಿರೋಧಿಸುವ ಎಡಪಕ್ಷಗಳ ಪ್ರಭಾವ ಹೆಚ್ಚುತ್ತಿರುವುದು ಮೂಲಭೂತವಾದಿ ಶಕ್ತಿಗಳಿಗೂ ಸಹಿಸಲಾಗದ ವಿಷಯವಾಗಿದೆ. ಎಡಪಕ್ಷಗಳನ್ನು ಮುಖ್ಯವಾಗಿ ಸಿಪಿಐ(ಎಂ) ಅನ್ನು ಭಾರತದ ಕ್ರಾಂತಿಯ ಕುರಿತಾದ ತಮ್ಮ ತಪ್ಪು ಧೋರಣೆಯ ನೆಲೆಯಿಂದ ವಿರೋಧಿಸುತ್ತಿರುವ, ಈಗ ಮಾವೋವಾದಿಗಳೆಂದು ಕರೆದುಕೊಳ್ಳುತ್ತಿರುವ ನಕ್ಸಲೀಯರಿಗೂ ಸಹ ಎಡಪಕ್ಷಗಳ ಈ ಮುನ್ನಡೆ ತೀವ್ರ ಹತಾಶೆಯನ್ನು ಉಂಟುಮಾಡಿದೆ. ಈ ಎಲ್ಲ ಹತಾಶ ಶಕ್ತಿಗಳು ನಂದಿಗ್ರಾಮದಲ್ಲಿ ಒಂದಾಗಿವೆ.

ಹೇಯ ಹಿಂಸಾಚಾರಕ್ಕೆ ಯಾರು ಹೊಣೆ?

ಗುಜರಾತ್‌ನಲ್ಲಿ ಮುಖ್ಯಮಂತ್ರಿ ನರೇಂದ್ರ ಮೋದಿ ಅಮಾಯಕರ ರಕ್ತಹರಿಸಿದಷ್ಟು ರಕ್ತ ನಂದಿಗ್ರಾಮದಲ್ಲಿ ಹರಿಯಲಿಲ್ಲ ಎಂಬುದೇನೊ ನಿಜ. ಮಾವೋವಾದಿಗಳೆಂದು ಹೊಸ ಬಿರುದು ಹಾಕಿಕೊಂಡಿರುವ ನಕ್ಸಲೀಯರು ಜಾರ್ಖಂಡ್, ಛತ್ತೀಸ್‌ಘಡ, ಬಿಹಾರ, ಆಂಧ್ರಪ್ರದೇಶ ಮೊದಲಾದ ರಾಜ್ಯಗಳಲ್ಲಿ ಅಮಾಯಕರನ್ನು ಸಾಯಿಸಿದಷ್ಟು ಜನ ನಂದಿಗ್ರಾಮದಲ್ಲಿ ಸತ್ತಿರಲಿಕ್ಕಿಲ್ಲ. ಆದರೂ ಕಳೆದ ಜನವರಿ ತಿಂಗಳಿಂದ ಇಲ್ಲಿಯವರೆಗೆ ನಂದಿಗ್ರಾಮದಲ್ಲಿ ಅನೇಕ ಅಮಾಯಕರು ಜೀವ ಕಳೆದುಕೊಂಡಿದ್ದಾರೆ. ಈ ಜೀವಹಾನಿ ಯಾವ ಕಾರಣಕ್ಕೂ ಸಮರ್ಥನೀಯವಲ್ಲ. ರಾಜ್ಯದ ಎಡರಂಗ ಸರ್ಕಾರ ಇದನ್ನು ಒಪ್ಪಿಕೊಂಡಿದೆ. ಸಿಪಿಐ(ಎಂ) ಪಕ್ಷದ ಪೊಲಿಟ್ ಬ್ಯೂರೋ ಈ ಬಗ್ಗೆ ವಿಷಾದ ವ್ಯಕ್ತಪಡಿಸಿದೆ.

ಆದರೆ ಈ ಹೇಯ ಹಿಂಸಾಚಾರಕ್ಕೆ ಯಾರು ಹೊಣೆ? ಸಾಮ್ರಾಜ್ಯಶಾಹಿ ಸಂಪನ್ಮೂಲಗಳಿಂದ ಕೊಬ್ಬಿರುವ ಎನ್‌ಜಿಒಗಳು, ಮಾಜಿ ಭೂಮಾಲಕ ಶಕ್ತಿಗಳನ್ನು ಪ್ರತಿನಿಧಿಸುವ ತೃಣಮೂಲ ಕಾಂಗ್ರೆಸ್ಸಿನವರು, ರಾಜ್ಯದ ಜನತೆಯಿಂದ ನಿರಂತರವಾಗಿ ತಿರಸ್ಕರಿಸಲ್ಪಡುತ್ತಿರುವ ಕಾಂಗ್ರೆಸ್ಸಿಗರು, ಪಶ್ಚಿಮ ಬಂಗಾಳದಲ್ಲಿ ಹಿಂದುತ್ವದ ವಿಷ ಬೆರೆಸಲು ವಿಫಲವಾದ ಹತಾಶ ಶಕ್ತಿಗಳು, ಮುಗ್ಧ ಮುಸಲ್ಮಾನ ಕಣ್ಣುಗಳಿಗೆ ಮತಾಂಧತೆಯ ಬಟ್ಟೆಕಟ್ಟಿ ದಾರಿತಪ್ಪಿಸುವ ಜಮಾಯಿತ್ ಉಲೇಮಾ



ಹಿಂದ್ ಸಂಘಟನೆಯವರು, ಕೇವಲ ವ್ಯಕ್ತಿಗತ ಸಾಹಸಗಳಿಂದ ವರ್ಗ ವಿಭಜಿತ ಸಮಾಜವನ್ನು ಬದಲಾಯಿಸಬಹುದೆಂಬ ಭ್ರಮೆಯನ್ನು ತುಂಬಿ ಕ್ರಾಂತಿಕಾರಿ ಮನೋಭಾವದ ಯುವಕ ಯುವತಿಯರನ್ನು ಪ್ರಭುತ್ವದ ಬಾಯಿಗೆ ಬಲಿಕೊಡುತ್ತಿರುವ ಮಾವೋವಾದಿಗಳು ಸೇರಿಕೊಂಡು ಕಟ್ಟಿಕೊಂಡಿರುವ 'ಭೂಮಿ ಉಚ್ಛಾಡ್ ಪ್ರತಿರೋಧ ಸಮಿತಿ' ಎಂಬ ಅವಕಾಶವಾದಿ ದುಷ್ಟಕೂಟವೊಂದೇ ನಂದಿಗ್ರಾಮದಲ್ಲಿ ಸಂಭವಿಸಿದ ಸಾವುನೋವುಗಳಿಗೆ ಹೊಣೆಯಾಗಿದೆ. ಇದೊಂದು ರೈತರ ಹೋರಾಟ ಎಂದೋ, ವಿಶೇಷ ಆರ್ಥಿಕ ವಲಯ ಸ್ಥಾಪನೆಯ ವಿರುದ್ಧದ ಹೋರಾಟವೆಂದೋ ಬಿಂಬಿಸುವ ಪ್ರಯತ್ನವನ್ನು ವ್ಯವಸ್ಥಿತವಾಗಿ ರೂಪಿಸುವುದರಲ್ಲಿ ಈ ಅವಕಾಶವಾದಿ ಕೂಟ ಯಶಸ್ವಿಯಾಗಿದೆ.

ಭೂಮಿ ಕಿತ್ತುಕೊಳ್ಳಲಾಗಿತ್ತೇ?

ನಂದಿಗ್ರಾಮದಲ್ಲಿ ರೈತರ ಭೂಮಿಯನ್ನು ಕಿತ್ತುಕೊಂಡು ಅವರನ್ನು ಬೀದಿಪಾಲು ಮಾಡಲಾಗಿತ್ತೇ? ಭೂಮಿಯನ್ನು ಸ್ವಾಧೀನಪಡಿಸುವ ನೋಟಿಸುಗಳನ್ನಾದರೂ ರೈತರಿಗೆ ನೀಡಲಾಗಿತ್ತೇ? ಇದ್ಯಾವುದೂ ಇಲ್ಲದೆ ರೈತರು ಯಾಕೆ ಹೋರಾಟಕ್ಕೆ ಮುಂದಾದರು? ರೈತರಲ್ಲಿಯೂ ಒಂದು ವಿಭಾಗ ಮಾತ್ರ ಯಾಕೆ ಹೋರಾಟಕ್ಕೆ ಇಳಿಯಿತು? ಸಿಪಿಐ(ಎಂ)ಗೆ ನಿಷ್ಠರಾಗಿದ್ದ ರೈತರು ಯಾಕೆ ಹೋರಾಟಕ್ಕೆ ಮುಂದಾಗಲಿಲ್ಲ? ಅವರ ಭೂಮಿಗೆ ರಕ್ಷಣೆಯ ಭರವಸೆ ಏನಾದರೂ ದೊರಕಿತ್ತಾ? ರೈತರಲ್ಲಿ ಒಂದು ವಿಭಾಗ ಭೂಮಿ ಉಚ್ಛಾಡ್ ಪ್ರತಿರೋಧ ಸಮಿತಿಯನ್ನು ಬೆನ್ನುಹತ್ತಲು ಈ ಅವಕಾಶವಾದಿ ಕೂಟದವರು ಅವರಲ್ಲಿ ಹುಟ್ಟಿಸಿದ ಆತಂಕವೇ ಕಾರಣ 'ನಿಮ್ಮ ಭೂಮಿಯನ್ನು ಕಿತ್ತುಕೊಳ್ಳಲಾಗುತ್ತದೆ, ನಿಮ್ಮನ್ನು ಬೀದಿಪಾಲು ಮಾಡಲಾಗುತ್ತದೆ. ನಿಮ್ಮ ಮಸೀದಿಗಳನ್ನು, ಮಂದಿರಗಳನ್ನು ನಾಶ ಮಾಡಲಾಗುತ್ತದೆ. ನಿಮ್ಮ ಸ್ಮಶಾನಗಳ ಭೂಮಿಯನ್ನು ವಶಪಡಿಸಿಕೊಳ್ಳಲಾಗುತ್ತದೆ' ಎಂಬ ಈ ದುಷ್ಟಕೂಟದ ಪ್ರಚಾರದಿಂದ ತೀವ್ರ ಆತಂಕಕ್ಕೆ ಒಳಗಾದ ಒಂದು ವಿಭಾಗ ಪ್ರಚೋದನೆಗೆ ಒಳಗಾಯಿತು. ಆದರೆ ಸಿಪಿಐ(ಎಂ) ಪಕ್ಷಕ್ಕೆ ಕಳೆದ ಎರಡು ಮೂರು ದಶಕಗಳಿಂದ ಬೆಂಬಲ ನೀಡುತ್ತಾ ಬಂದಿರುವ ರೈತ ಹಾಗೂ ಕೃಷಿ ಕಾರ್ಮಿಕ ವಿಭಾಗವು ಈ ದುಷ್ಟ ಕೂಟದ ಪ್ರಚೋದನೆಗಳಿಗೆ ಬಲಿ ಬೀಳಲಿಲ್ಲ. ಎಡರಂಗ ಸರ್ಕಾರ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ನಮ್ಮ ಭೂಮಿಯನ್ನು ವಶಪಡಿಸಿಕೊಳ್ಳುವುದು ಸಾಧ್ಯವೇ ಇಲ್ಲ ಎಂಬ ದೃಢವಾದ ನಂಬಿಕೆ ಅವರಿಗಿತ್ತು. ಭೂಮಿ ಇಲ್ಲದ ನಮಗೆ ಭೂಮಿಯ ಹಕ್ಕನ್ನು ನೀಡಿರುವ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರ ನಮ್ಮಿಂದ ಆ ಭೂಮಿಯನ್ನು ಬಲವಂತವಾಗಿ ಕಿತ್ತುಕೊಂಡು ನಮ್ಮನ್ನು ಬೀದಿಪಾಲು ಮಾಡಲು ಹೊರಟಿದೆ ಎಂಬುದು ಎಡರಂಗ ವಿರೋಧಿಗಳ ಅಪ್ಪಟ ಅಪಪ್ರಚಾರವೆಂದು ಅವರಿಗೆ ಸ್ಪಷ್ಟವಾಗಿತ್ತು. ತಾವು ಬೀಸಿದ ಬಲೆಗೆ ಬೀಳದ ಇವರ ಮೇಲೆ ಈ ಭೂಮಿ ಉಚ್ಛಾಡ್ ಪ್ರತಿರೋಧ ಸಮಿತಿ ಅಮಾನುಷವಾಗಿ ಸೇಡು ತೀರಿಸಿಕೊಂಡಿತು. ಆದ್ದರಿಂದ ನಂದಿಗ್ರಾಮದ ಹೋರಾಟ ರೈತರ ಸ್ವಯಂ ನಿರ್ಧಾರದ ಹೋರಾಟ ಆಗಿರಲಿಲ್ಲ. ಪ್ರಚೋದನೆಗೆ ಒಳಗಾದ ಒಂದು ವಿಭಾಗದ ರೈತರ ದಾರಿ ತಪ್ಪಿದ ಹೋರಾಟ ಅದಾಗಿತ್ತು. ಇಲ್ಲಿ ಸಂಭವಿಸಿದ ಎಲ್ಲ ಪ್ರಾಣಹಾನಿ ಆಸ್ತಿಪಾಸ್ತಿ ನಷ್ಟಕ್ಕೆ ಈ ಭೂಮಿ ಉಚ್ಛಾಡ್ ಪ್ರತಿರೋಧ ಸಮಿತಿಯೇ ಕಾರಣ ಹೊರತು ಬೇರೆ ಯಾರೂ ಅಲ್ಲ.



ಮುಖ್ಯಮಂತ್ರಿ ಭರವಸೆಯ ನಂತರವೂ ಮುಂದುವರೆದ ಹಿಂಸಾಚಾರ

ಪೂರ್ವ ಮಿಡ್ನಾಪುರ ಜಿಲ್ಲೆಯ ನಂದಿಗ್ರಾಮದಲ್ಲಿ ಒಂದು ರಾಸಾಯನಿಕ ಘಟಕವನ್ನು ಸ್ಥಾಪಿಸುವ ಪ್ರಸ್ತಾಪವಿತ್ತು. ಆದರೆ ಈ ರಾಸಾಯನಿಕ ಘಟಕವೇ ವಿಶೇಷ ಆರ್ಥಿಕವಲಯ ಆಗಿರಲಿಲ್ಲ. ಕೇಂದ್ರ ಸರ್ಕಾರವೇ ಈ ರಾಸಾಯನಿಕ ಘಟಕದ ಸ್ಥಾಪನೆಗೆ ಅನುಮತಿ ನೀಡಿತ್ತು. ಈ ಘಟಕಕ್ಕಾಗಿ ಹಲವಾರು ರಾಜ್ಯ ಸರ್ಕಾರಗಳು ಅರ್ಜಿ ಸಲ್ಲಿಸಿ ಪೈಪೋಟಿ ನಡೆಸುತ್ತಿದ್ದವು. ಪಶ್ಚಿಮ ಬಂಗಾಳವನ್ನೇ ಆಯ್ದುಕೊಳ್ಳಲು ಕಾರಣವೇನೆಂದರೆ, ಹತ್ತಿರದಲ್ಲೇ ಇರುವ ಬಂದರು ಸೌಲಭ್ಯ ಮತ್ತು ಹಾಲ್ದಿಯಾದಲ್ಲಿ ಈಗಾಗಲೇ ಅಭಿವೃದ್ಧಿಪಡಿಸಿರುವ ಪೆಟ್ರೋಕೆಮಿಕಲ್ ಘಟಕವು ಸಮೀಪದಲ್ಲೇ ಇದ್ದುದರಿಂದ. ನಂದಿಗ್ರಾಮದಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದ ಈ ಯೋಜನೆಯಲ್ಲಿ ರಾಸಾಯನಿಕ ಘಟಕವೇ ಪ್ರಧಾನ ಘಟಕವಾಗಿದ್ದು, ಉಳಿದಂತೆ ಒಂದು ರಿಫೈನರಿ, ಫಾರ್ಮಾಸ್ಯೂಟಿಕಲ್ಸ್, ಜವಳಿಯಂತಹ ಘಟಕಗಳನ್ನು ಅದು ಒಳಗೊಂಡಿತ್ತು. ಇದು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಕೆಲವು ಖಾಸಗಿ ಕಂಪನಿಗಳ ಜಂಟಿ ಒಡೆತನಕ್ಕೆ ಸೇರಿದ್ದಾಗಿತ್ತು. ನಂದಿಗ್ರಾಮದಲ್ಲಿ ರಾಸಾಯನಿಕ ಘಟಕವನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ಅನುಮತಿ ನೀಡಿದ ನಂತರವಷ್ಟೇ ವಿಶೇಷ ಆರ್ಥಿಕ ವಲಯಕ್ಕಾಗಿ ಇಲ್ಲಿ ಹತ್ತು ಸಾವಿರ ಎಕರೆ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಕುರಿತು ಇಂಡೋನೇಷ್ಯಾದ ಸಲೀಮ್ ಸಮೂಹ ಕಂಪನಿಯೊಂದಿಗೆ ಚರ್ಚೆ ಆರಂಭವಾಗಿತ್ತು.

ಆದರೆ, ನಂದಿಗ್ರಾಮದಲ್ಲಿ ರಾಸಾಯನಿಕ ಘಟಕಕ್ಕಾಗಿಯೂ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ಇನ್ನೂ ಆರಂಭವಾಗಿರಲಿಲ್ಲ. ಸರ್ಕಾರ ರೈತರಿಗೆ ಯಾವುದೇ ನೋಟೀಸ್ ಹೊರಡಿಸಿರಲಿಲ್ಲ. ಅಷ್ಟರಲ್ಲೇ ಭೂಮಿ ಉಚ್ಛಾಡ್ ಪ್ರತಿರೋಧ ಸಮಿತಿ ರಚನೆಯಾಯಿತು ಮತ್ತು ಸುಳ್ಳು ಪ್ರಚಾರದ ಸುರಿಮಳೆ ಆರಂಭವಾಯಿತು. ದೊಡ್ಡ ಪ್ರಮಾಣದ ಭೂಮಿಯನ್ನು ವಶಪಡಿಸಿಕೊಳ್ಳಲಾಗುತ್ತದೆ ಎಂಬ ಭೀತಿಯನ್ನು ನಿವಾರಿಸುವ ಉದ್ದೇಶದಿಂದ ಡಿಸೆಂಬರ್ (2006) 29ರಂದು ಹಾಲ್ದಿಯಾ ಅಭಿವೃದ್ಧಿ ಪ್ರಾಧಿಕಾರವು ಒಂದು ಸೂಚನಾ ಪತ್ರವನ್ನು ಹೊರಡಿಸಿ ರಾಸಾಯನಿಕ ಘಟಕಕ್ಕಾಗಿ ಕೇವಲ 27 ಮೌಜಾಗಳಷ್ಟು ಭೂಮಿಯನ್ನು ಮಾತ್ರವೇ ಸ್ವಾಧೀನಪಡಿಸಿಕೊಳ್ಳಲಾಗುವುದು ಎಂದು ತಿಳಿಸಿತು. ಈ ಸೂಚನಾ ಪತ್ರವನ್ನು ಪಶ್ಚಿಮ ಬಂಗಾಳ ಸರ್ಕಾರ ಹೊರಡಿಸಿರಲಿಲ್ಲ. ಇದು ಒಂದು ವಿಭಾಗದ ಜನರ ಮನಸ್ಸಿನಲ್ಲಿ ಆವರಿಸಿಕೊಂಡಿದ್ದ ಭೀತಿಯನ್ನು ಹೋಗಲಾಡಿಸುವ ಬದಲು ಇನ್ನಷ್ಟು ಹೆಚ್ಚಿಸುವಂತಾಯಿತು.

ಮುಂದಿನ ಘಟಕಕ್ಕೆ

ನಂದಿಗ್ರಾಮದಲ್ಲಿ ಶಾಂತಿಯ ಶತ್ರುಗಳಿಗೆ ಸೋಲು

ಭಾಗ 2


ಅಂದು ಜನವರಿ (2007) [illegible] ಕಾಳಿಚರಣ್‌ಪುರ್ ಪಂಚಾಯತಿಯನ್ನು 'ನಿರ್ಮಲ ಗ್ರಾಮ' ಎಂದು ಘೋಷಿಸಲು ತೆರಳಿದ್ದ ಅಧಿಕಾರಿಗಳ ತಂಡವನ್ನು ಭೂಸ್ವಾಧೀನ ಅಧಿಕಾರಿಗಳ ತಂಡವೆಂದು ಸುಳ್ಳು ಸುದ್ದಿ ಹರಡಿಸಲಾಯಿತು. ತಕ್ಷಣವಲ್ಲೇ ತೃಣಮೂಲ ಕಾಂಗ್ರೆಸ್ ನಾಯಕರ ನೇತೃತ್ವದಲ್ಲಿ ಜನರ ಗುಂಪೊಂದು ಪಂಚಾಯತ್ ಕಛೇರಿಯ ಮೇಲೆ ಧಾಳಿಯಿಟ್ಟಿತು. ಪಂಚಾಯತಿ ಅಧ್ಯಕ್ಷೆ ಶ್ರೀಮತಿ ಸಮೀರುನ್ ಬೀಬಿಯವರ ಮೇಲೂ ಹಲ್ಲೆ ನಡೆಸಲಾಯಿತು. ಪೊಲೀಸ್ ತುರ್ತುದಳದ ಮೇಲೆ ಧಾಳಿ ಮಾಡಿ, ಅವರ ಕೈಯಲ್ಲಿದ್ದ ಬಂದೂಕುಗಳನ್ನು ಕಸಿದುಕೊಂಡು, ಪೊಲೀಸ್ ಜೀಪಿಗೆ ಬೆಂಕಿಹಚ್ಚಿ ಸುಟ್ಟುಹಾಕಲಾಯಿತು. ಅಂದಿನಿಂದ ಆ ಪ್ರದೇಶದಲ್ಲಿ ವ್ಯಾಪಕವಾದ ಹಿಂಸೆ ಆರಂಭವಾಯಿತು.

ಸಮಿತಿಯ ನೇತೃತ್ವದಲ್ಲಿ ಜನಜಂಗುಳಿ ಕೈಯಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು, ಸಿಪಿಐ(ಎಂ) ಬೆಂಬಲಿಗರ ಮನೆಗಳನ್ನು ಹುಡುಕಿ, ಹುಡುಕಿ ಅವುಗಳ ಮೇಲೆ ದಾಳಿ ಮಾಡಿದರು. ಮನೆಗಳನ್ನು ಲೂಟಿ ಮಾಡಿದರು, ಅವುಗಳಿಗೆ ಬೆಂಕಿ ಹಚ್ಚಿದರು. ಸುಮಾರು 5000ದಷ್ಟು ಸಿಪಿಐ(ಎಂ) ಬೆಂಬಲಿಗರನ್ನು ಅವರ ಮನೆಗಳಿಂದ ಓಡಿಸಲಾಯಿತು. ಇವರೆಲ್ಲರೂ ಬಡವರು, ದಲಿತರು, ಗ್ರಾಮೀಣ ಕಸುಬುದಾರರು, ಕೃಷಿ ಕಾರ್ಮಿಕರು ಮತ್ತು ಸಣ್ಣ ರೈತರು. ಇವರೆಲ್ಲರಿಗೆ ಈ ಬೆಳವಣಿಗೆಗಳು ಅನಿರೀಕ್ಷಿತವಾಗಿದ್ದವು. ಅವರು ಅಸಹಾಯಕರಾಗಿದ್ದರು. ತಮ್ಮ ಮನೆಗಳನ್ನು, ಗೃಹಬಳಕೆಯ ಸಾಮಗ್ರಿಗಳನ್ನು, ದನಕರುಗಳನ್ನು ಬಿಟ್ಟು ಅವರು ಓಡಿಹೋಗುವಂತೆ ಮಾಡಲಾಯಿತು. ದೂರದ ನಿರಾಶ್ರಿತರ ಶಿಬಿರಗಳಲ್ಲಿ ಅವರಿಗೆ ಆಶ್ರಯ ಒದಗಿಸಬೇಕಾಯಿತು.

ಜನವರಿ 3ರ ದಾಳಿಯ ನಂತರ, ಜನವರಿ 4 ಮತ್ತು 5ರಂದು ನಂದಿಗ್ರಾಮದ ಎಲ್ಲಾ ಸಂಪರ್ಕ ರಸ್ತೆಗಳನ್ನು ಅಗೆದು ಹಾಕಲಾಯಿತು. ಸೇತುವೆಗಳನ್ನು ನಾಶ ಮಾಡಲಾಯಿತು. ವಿದ್ಯುತ್ ಸಂಪರ್ಕಗಳನ್ನು ಕಡಿದುಹಾಕಲಾಯಿತು. ಸರ್ಕಾರಿ ಅಧಿಕಾರಿಗಳ ಪ್ರವೇಶಕ್ಕೆ ನಿರ್ಬಂಧ ವಿಧಿಸಲಾಯಿತು. ಪೌರ ಆಡಳಿತ ವ್ಯವಸ್ಥೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಯಿತು.

ನಿರಾಶ್ರಿತರ ಶಿಬಿರದ ಮೇಲೂ ಧಾಳಿ

ಜನವರಿ 6ರಂದು ಭೂಮಿ ಉಚ್ಛಾಡ್ ಪ್ರತಿರೋಧ ಸಮಿತಿಯ ಸಶಸ್ತ್ರ ಗುಂಪೊಂದು ನಂದಿಗ್ರಾಮದ ಬಳಿಯ ಖೆಜೂರಿ ಪ್ರದೇಶದಲ್ಲಿದ್ದ ನಿರಾಶ್ರಿತರ ಶಿಬಿರದ ಮೇಲೆ ದಾಳಿ ಮಾಡಿತು. ಶಿಬಿರದಲ್ಲಿದ್ದ ಜನ ಪ್ರತಿರೋಧ ವ್ಯಕ್ತಪಡಿಸಿದರು. ಈ ಗಲಭೆಯಲ್ಲಿ ಧಾಳಿ ಮಾಡಲು ಬಂದ ಮೂವರು ಸತ್ತರು. ಜನವರಿ 7ರಂದು ಸಿಪಿಐ(ಎಂ) ಪಂಚಾಯತ್ ಸದಸ್ಯ ಶಂಕರ ಸಾಮಂತರನ್ನು ಹುಲ್ಲಿನ ಮೆದೆಯೊಳಗೆ ಹಾಕಿ ಜೀವಂತ ಸುಟ್ಟುಹಾಕಲಾಯಿತು. ಫೆಬ್ರವರಿ 7ರಂದು ಸಾಧುಚರಣ್ ಚಟರ್ಜಿ ಎಂಬ ಪೊಲೀಸ್ ಪೇದೆಯನ್ನು ಅಪಹರಿಸಿ, ಕೊಲೆ ಮಾಡಿ ದೇಹವನ್ನು ನದಿಗೆ ಎಸೆಯಲಾಯಿತು. ಫೆಬ್ರವರಿ 9ರಂದು ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯರು 'ನಂದಿಗ್ರಾಮದಲ್ಲಿ ರೈತರ ಯಾವುದೇ ಭೂಮಿಯನ್ನು ಸ್ವಾಧೀನಪಡಿಸಲಾಗುವುದಿಲ್ಲ; ನಂದಿಗ್ರಾಮದಲ್ಲಿ ಶಾಂತಿ ನೆಲೆಸುವಂತೆ ಮಾಡಲು ಎಲ್ಲರೂ



ಮಾವೋವಾದಿಗಳಿಂದ ರಸ್ತೆ ಧ್ವಂಸ

ಸಹಕರಿಸಬೇಕು' ಎಂದು ಮನವಿ ಮಾಡುವ ಹೇಳಿಕೆಯನ್ನು ನೀಡಿದರು. ಆದರೂ ಗಲಭೆ ನಿಲ್ಲಲಿಲ್ಲ.

ಸರಣೀ ಹಿಂಸೆ

ಸಿಪಿಐ(ಎಂ) ಕಛೇರಿಗಳನ್ನು, ಪಂಚಾಯತ್ ಸದಸ್ಯರ ಮನೆಗಳನ್ನು ಸುಡುವ ಮತ್ತು ಲೂಟಿ ಮಾಡುವ ವಿಧ್ವಂಸಕ ಕೃತ್ಯಗಳು ಅವ್ಯಾಹತವಾಗಿ ಮುಂದುವರೆದವು. ಫೆಬ್ರವರಿ 10ರಂದು ಹತ್ತನೆಯ ತರಗತಿಯ ವಿದ್ಯಾರ್ಥಿನಿ ಸುನಿತಾ ಮಂಡಲ್‌ಳನ್ನು ಚಿತ್ರಹಿಂಸೆ ನೀಡಿ ಕೊಲ್ಲಲಾಯಿತು. ಮರುದಿನವೇ, ನಂದಿಗ್ರಾಮ ಸಮೀಪ ಒಂದು ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಮುಖ್ಯಮಂತ್ರಿ "ಜನರಿಗೆ ಇಲ್ಲೊಂದು ರಾಸಾಯನಿಕ ಘಟಕ ಸ್ಥಾಪನೆ ಮಾಡುವುದು ಇಷ್ಟವಿಲ್ಲ ಎನ್ನುವುದಾದರೆ ಅಂತಹ ಘಟಕವನ್ನು ಇಲ್ಲಿ ಸ್ಥಾಪನೆ ಮಾಡುವುದಿಲ್ಲ" ಎಂದು ಬಹಿರಂಗವಾಗಿ ಹೇಳಿದರು. ಅನಂತರ ಅನೇಕ ಸಲ ಅವರು ತಮ್ಮ ಈ ಮಾತನ್ನು ಪುನರುಚ್ಚರಿಸಿದರು. ಆದರೆ ಸಿಪಿಐ(ಎಂ) ಅನ್ನು ವಿರೋಧಿಸುವ ಏಕೈಕ ಉದ್ದೇಶದಿಂದ ಒಟ್ಟಾದ ಈ ಗ್ಯಾಂಗ್ ಸರ್ಕಾರದ ಈ ಯಾವ ಭರವಸೆಯನ್ನು ಸ್ವೀಕರಿಸಲು ತಯಾರಿರಲಿಲ್ಲ. ಮಾರ್ಚ್ 3ರಂದು ಸಿಪಿಐ(ಎಂ) ಬೆಂಬಲಿಗರ ಒಂದು ಮನೆಯ ಮಹಿಳೆಯೊಬ್ಬರ ಮೇಲೆ ಸ್ಥಳೀಯ ತೃಣಮೂಲ ಕಾಂಗ್ರೆಸ್ ನಾಯಕರ ನೇತೃತ್ವದಲ್ಲಿ ಸಾಮೂಹಿಕ ಅತ್ಯಾಚಾರ ನಡೆಸಲಾಯಿತು.

ಸರ್ಕಾರ ನೀಡಿದ ಸ್ಪಷ್ಟ ಭರವಸೆಯಿಂದ ಚಳುವಳಿಗಾರರ ಬೇಡಿಕೆ ಈಡೇರಿದಂತಾಗಿತ್ತು. ಅಲ್ಲಿಗೆ ಚಳುವಳಿ ನಿಲ್ಲಬೇಕಾಗಿತ್ತು. ಆದರೆ ಹಾಗಾಗಲಿಲ್ಲ. ಅರಾಜಕತೆಯನ್ನು ಬಲವಂತವಾಗಿ ಮುಂದುವರೆಸಲಾಯಿತು.

ಇದರಿಂದಾಗಿ ಒಂದು ಮಾತು ಸ್ಪಷ್ಟವಾಯಿತು. ನಂದಿಗ್ರಾಮದ ಚಳುವಳಿ ರೈತರ ಭೂಮಿಗಾಗಿ ನಡೆದ ಚಳುವಳಿ ಅಲ್ಲ. ಅದು ಕೇವಲ ರಾಜಕೀಯ ದುರುದ್ದೇಶದ ಚಳುವಳಿ. ಸಿಪಿಐ(ಎಂ) ಮತ್ತು ಎಡಪಕ್ಷಗಳು ಪಶ್ಚಿಮ ಬಂಗಾಳದಲ್ಲಿ ಬಲಗೊಳ್ಳುವುದನ್ನು ಹೇಗಾದರೂ ಮಾಡಿ ವಿಫಲಗೊಳಿಸಬೇಕೆಂಬ ಉದ್ದೇಶದ ಚಳುವಳಿ ಅದು. ಭೂಸುಧಾರಣೆಗಳ ಮೂಲಕ, ಲಕ್ಷಾಂತರ ಭೂಹೀನ ಬಡವರಿಗೆ ಭೂಮಿಯನ್ನು ವಿತರಿಸುವ ಮೂಲಕ ಗ್ರಾಮೀಣ ಬಡವರ ವಿಶ್ವಾಸಗಳಿಸಿರುವ ಸಿಪಿಐ(ಎಂ) ಈಗ ಕೈಗಾರೀಕರಣದ ಮೂಲಕ ನಿರುದ್ಯೋಗಿ ಯುವಕರಿಗೆ ಉದ್ಯೋಗ ಒದಗಿಸಲು ಯಶಸ್ವಿಯಾದರೆ, ಪಶ್ಚಿಮ ಬಂಗಾಳವನ್ನು ಸಿಪಿಐ(ಎಂ)ಗೆ ಶಾಶ್ವತವಾಗಿ ಬಿಟ್ಟುಕೊಡಬೇಕಾಗುತ್ತದೆ ಎಂಬುದೇ ಈ ಅವಕಾಶವಾದಿ ದುಷ್ಟಕೂಟಕ್ಕೆ ಹತ್ತಿರುವ ಹೊಟ್ಟೆನೋವು.

ಸಿಪಿಐ(ಎಂ)ನಿಂದ ಮರು ಆಕ್ರಮಣ ಎಂಬ ಗುಲ್ಲು

ಭೂಮಿ ಉಚ್ಛಾಡ್ ಪ್ರತಿರೋಧ ಸಮಿತಿಯು ಕಳೆದ 11 ತಿಂಗಳುಗಳಿಂದ ನಂದಿಗ್ರಾಮ ಪ್ರದೇಶವನ್ನು ಪ್ರತ್ಯೇಕಗೊಳಿಸಿ ಅಲ್ಲಿನ ಆಡಳಿತ ಮತ್ತು ಅಭಿವೃದ್ಧಿ ಕೆಲಸವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿತ್ತು. ಈ ಅವಧಿಯಲ್ಲಿ ಅಲ್ಲಿಯ ಸುಮಾರು 15,000 ಶಿಶುಗಳಿಗೆ ಪಲ್ಸ್ ಪೊಲಿಯೋ ಡ್ರಾಪ್ಸ್ ನೀಡುವುದು ಸಾಧ್ಯವಾಗಲಿಲ್ಲ. ಆರೋಗ್ಯ ಸೌಲಭ್ಯಗಳಿಗೆ ಸಂಬಂಧಪಟ್ಟ ಸುಮಾರು 2 ಕೋಟಿ ರೂ. ವೆಚ್ಚದ ಮೂಲ ಸೌಕರ್ಯಗಳನ್ನು ಕೈಬಿಡಬೇಕಾಯಿತು. ವಿದ್ಯುತ್ ಸಂಪರ್ಕ ವಿಸ್ತರಣೆಯಲ್ಲಿ 2 ಕೋಟಿ ರೂ. ಮೌಲ್ಯದ ಹೂಡಿಕೆ ಸಾಧ್ಯವಾಗದೆ ಹೋಯಿತು.

ತಮ್ಮ ಮನೆ ಮಠಗಳನ್ನು ಕಳೆದುಕೊಂಡು ಕಳೆದ 11 ತಿಂಗಳುಗಳಿಂದ ನಿರಾಶ್ರಿತರಾಗಿ ದೂರದ ಶಿಬಿರಗಳಲ್ಲಿ ಕಾಲ ಕಳೆಯುತ್ತಿದ್ದವರ ಪರಿಸ್ಥಿತಿ ಏನಾಗಿರಬಹುದು. ಅವರು ತಮ್ಮ ಗ್ರಾಮಗಳಿಗೆ ಮರಳುವಂತೆ ಸರ್ಕಾರ ಅವರಿಗೆ ಮನವಿ ಮಾಡುತ್ತಾ ಇತ್ತು. ಆದರೆ ಅವರಿಗೆ ವಾಪಸ್ ಹೋಗಲು ಧೈರ್ಯವೇ ಇಲ್ಲದಂತಾಗಿತ್ತು. ಎಷ್ಟು ಕಾಲ ಅವರು ಹಾಗೇ ಇರಲು ಸಾಧ್ಯ? ಕೊನೆಗೊಂದು ದಿನ ಅವರು ತಮ್ಮ ಶಿಬಿರಗಳನ್ನು ಬಿಟ್ಟು ತಂಡ ತಂಡಗಳಾಗಿ ತಮ್ಮ ಮನೆಗಳಿಗೆ ಹಿಂತಿರುಗಲು ನಿರ್ಧರಿಸಿದರು. ತಮ್ಮ ಸ್ವಂತ ಒಡೆತನದ ಮನೆಗಳಿಗೆ ಅವರು ಹಿಂತಿರುಗುವುದು ಅಪರಾಧವೇ? ಅವರು


ಪುಟ 13ಕ್ಕೆ

ಸಿಪಿಐ(ಎಂ) ರೈತರನ್ನು ಗುಂಡಿಕ್ಕಿ ಕೊಂದಿತೆ?

ನಂದಿಗ್ರಾಮದಲ್ಲಿ ಯಾವುದೇ ರಾಸಾಯನಿಕ ಘಟಕವನ್ನು ಸ್ಥಾಪನೆ ಮಾಡುವ ಉದ್ದೇಶವಿಲ್ಲವೆಂದು ಸರ್ಕಾರ ಅನೇಕ ಸಲ ಸ್ಪಷ್ಟಪಡಿಸಿದರೂ ರಾಜಕೀಯ ದುರುದ್ದೇಶದ ಚಳುವಳಿ ನಿಲ್ಲಲಿಲ್ಲ. ಸಿಪಿಐ(ಎಂ)ನ ಕ್ರಿಯಾಶೀಲ ಕಾರ್ಯಕರ್ತರನ್ನೆಲ್ಲ ಅಲ್ಲಿಂದ ಓಡಿಸಿದ್ದರಿಂದ ಮತ್ತು ಜನವರಿ 3ರಿಂದ ಅಲ್ಲಿ ಪೊಲೀಸರಿಗೆ ಯಾವುದೇ ಕೆಲಸ ಮಾಡಲು ಆಸ್ಪದ ಕೊಡದಿದ್ದರಿಂದ ಸಮಿತಿಯ ಸುಳ್ಳು ಪ್ರಚಾರಗಳನ್ನು, ಚಳುವಳಿಯ ಹಿಂದಿನ ದುರುದ್ದೇಶವನ್ನು ಜನರಿಗೆ ಮನವರಿಕೆ ಮಾಡಲು ಸಾಧ್ಯವಾಗಲಿಲ್ಲ.

ಗಲಭೆಗ್ರಸ್ತ ಪ್ರದೇಶದಲ್ಲಿ ಶಾಂತಿ ನೆಲೆಸುವಂತೆ ಮಾಡುವುದು, ಅಲ್ಲಿ ಪೌರ ಆಡಳಿತವನ್ನು ಪುನರ್ ಸ್ಥಾಪಿಸುವುದು ಸರ್ಕಾರದ ಜವಾಬ್ದಾರಿಯಾಗಿತ್ತು. ಪರಿಸ್ಥಿತಿಯನ್ನು ಕುರಿತು ಚರ್ಚಿಸಲು ಜಿಲ್ಲಾಡಳಿತ ಕರೆದ ಸರ್ವಪಕ್ಷಗಳ ಸಭೆಗಳಲ್ಲಿ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ ಹಾಗೂ ಭೂಮಿ ಉಚ್ಛಾಡ್ ಪ್ರತಿರೋಧ ಸಮಿತಿ ಸದಸ್ಯರು ಭಾಗವಹಿಸುತ್ತಿರಲಿಲ್ಲ. ಮಾರ್ಚ್-10ರಂದು ಕರೆದ ಒಂದು ಸಭೆಯಲ್ಲಿ ಎಡಪಕ್ಷಗಳು ಮತ್ತು ಬಿಜೆಪಿಯವರು ಮಾತ್ರ ಭಾಗವಹಿಸಿದ್ದರು. ಈ ಸಭೆಯಲ್ಲಿ, ನಂದಿಗ್ರಾಮ ಪ್ರದೇಶದಲ್ಲಿ ಕಳೆದ ಎರಡುವರೆ ತಿಂಗಳಿಂದ [illegible] ಸಂಪರ್ಕ [illegible] ಪೊಲೀಸರು ಅಲ್ಲಿಗೆ ಹೋಗಿ ಸಾಮಾನ್ಯ ಸ್ಥಿತಿ ಮರಳುವಂತೆ ಪ್ರಯತ್ನಿಸಬೇಕೆಂದು ಸರ್ಕಾರ ನಿರ್ಧರಿಸಿತು.

ಮಾರ್ಚ್ 14ರಂದು ಪೊಲೀಸರು ನಂದಿಗ್ರಾಮವನ್ನು ಪ್ರವೇಶಿಸಿದಾಗ ಅವರ ಮೇಲೆ ಕೈಬಾಂಬುಗಳಿಂದ ಹಾಗೂ ಬಂದೂಕುಗಳಿಂದ ದಾಳಿ ಮಾಡಲಾಯಿತು. ಜಿಲ್ಲಾಡಳಿತ ಮತ್ತು ಪೊಲೀಸರು ಇದುವರೆಗೂ ತಾಳ್ಮೆಯಿಂದ ಇದ್ದರು. ಪ್ರಚೋದನೆಗೆ



ಮಾವೋವಾದಿಗಳಿಗೆ ಬಲಿಯಾದ ಸಿಪಿಐ(ಎಂ) ಮುಖಂಡ

ಒಳಗಾಗದಂತೆ ಎಚ್ಚರಿಕೆ ವಹಿಸಿದ್ದರು. ಆದರೆ ಅಂದು ಅವರ ಮೇಲೆ ಸಶಸ್ತ್ರ ದಾಳಿ ಆರಂಭವಾದಾಗ ಆತ್ಮರಕ್ಷಣೆಗಾಗಿ ಅವರೂ ಗುಂಡುಹಾಕಿಸಿದರು. 14 ಜನ ಅಸುನೀಗಿದರು. ಇಂತಹ ಘಟನೆಗಳಲ್ಲಿ ಅಮಾಯಕರು ಬಲಿಯಾಗುವುದೇ ಹೆಚ್ಚು. ಈ 14 ಮಂದಿಯಲ್ಲಿ ಕೆಲವರು ಅಮಾಯಕರೇ ಇರುತ್ತಾರೆ.

ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ಇತಿಹಾಸದಲ್ಲಿ ಇದೊಂದು ಅತ್ಯಂತ ದುರ್ಭಾಗ್ಯಕರ ಘಟನೆ. ಪೊಲೀಸರ ಈ ಕಾರ್ಯಾಚರಣೆ ಯಾವ ಕಾರಣಕ್ಕೂ ಸಮರ್ಥನೀಯವಲ್ಲ. ಮುಖ್ಯಮಂತ್ರಿ [illegible] ತೀವ್ರ [illegible] ಸರ್ಕಾರದ ವಿಫಲತೆಯನ್ನು ಒಪ್ಪಿಕೊಂಡಿದ್ದಾರೆ. ಸಿಪಿಐ(ಎಂ) ಪಕ್ಷದ ಪೊಲಿಟ್ ಬ್ಯೂರೋ ಸಹ ತೀವ್ರ ಕಳವಳ ವ್ಯಕ್ತಪಡಿಸಿ, ಎಡರಂಗದ ಘಟಕ ಪಕ್ಷಗಳು ತಮ್ಮ ಅಸಮಾಧಾನವನ್ನು ಬಹಿರಂಗವಾಗಿ ವ್ಯಕ್ತಪಡಿಸಿವೆ. ಎಡರಂಗದ ಸ್ನೇಹಿತರು, ಪ್ರಗತಿಪರ ಬುದ್ಧಿಜೀವಿಗಳು ಸಹ ತೀವ್ರ ಆಘಾತವನ್ನು ವ್ಯಕ್ತಪಡಿಸಿದ್ದಾರೆ.

ಯಾವುದೇ ಪೋಲೀಸ್ ಗೋಲಿಬಾರ್ ಸಮರ್ಥನೀಯವಾಗಿರುವುದಿಲ್ಲ. ಆದರೆ ಮಾರ್ಚ್ 14ರಂದು ನಂದಿಗ್ರಾಮದಲ್ಲಿ ನಡೆದ ಗೋಲಿಬಾರ್ ಯಾವ ಹಿನ್ನೆಲೆಯಲ್ಲಿ ನಡೆಯಿತು ಎಂಬುದನ್ನು ತಾಳ್ಮೆಯಿಂದ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಬೇಕು. ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಜನರ ಮೇಲೆ ಗುಂಡುಹಾರಿಸುವ ಸರ್ಕಾರ ಅಲ್ಲ. ಜನರನ್ನು ಸಾಯಿಸಿ ಅದು ಸಾಧಿಸಬೇಕಾದ್ದು ಏನೂ ಇಲ್ಲ. ಪೊಲೀಸರ ಗುಂಡಿಗೆ ಎದೆಕೊಟ್ಟ ತ್ಯಾಗ ಬಲಿದಾನಗಳ ಮೂಲಕ ಕಟ್ಟಿದ ಎಡರಂಗವದು. ನಂದಿಗ್ರಾಮದಲ್ಲಿ ಗೋಲಿಬಾರ್ ಮಾಡುವುದೇ ಆಗಿದ್ದರೆ ಎರಡುವರೆ ತಿಂಗಳು ಕಾಯುವ ಅಗತ್ಯವಿರಲಿಲ್ಲ. ಇವತ್ತು ಸರಿಯಾಗಬಹುದು, ನಾಳೆ ಸರಿಯಾಗಬಹುದೆಂದು ತಾಳ್ಮೆಯಿಂದ ಇರುವ ಅಗತ್ಯವಿರಲಿಲ್ಲ. ಆದಾಗ್ಯೂ ಮಾರ್ಚ್ 14ರ ಗೋಲಿಬಾರ್ ಖಂಡನಾರ್ಹವಾಗಿದೆ. ಅಂತಹ ಪ್ರಸಂಗ ಮರುಕಳಿಸದಿರಲಿ ಎನ್ನುವುದೇ ಎಡರಂಗ ಸರ್ಕಾರದ ಪ್ರಧಾನ ಕಾಳಜಿ ಆಗಬೇಕು.

ಮಾವೋವಾದಿಗಳ ಕುಖ್ಯಾತ ಪಾತ್ರ

ಕನ್ನಡ ಪತ್ರಿಕೆಗಳು ನಂದಿಗ್ರಾಮದ ಬೆಳವಣಿಗೆಗಳನ್ನು ಮುಂದಿಟ್ಟುಕೊಂಡು ಸಿಪಿಐ(ಎಂ) ಬಗ್ಗೆ ಅಪಪ್ರಚಾರ ಮಾಡಲು ಸಾಕಷ್ಟು ಶ್ರಮಪಟ್ಟಿವೆ. ವಿಜಯಕರ್ನಾಟಕ, ಸಂಯುಕ್ತ ಕರ್ನಾಟಕ, ಉದಯವಾಣಿ, ಕನ್ನಡಪ್ರಭ, ಟೈಮ್ಸ್ ಆಫ್ ಇಂಡಿಯಾದಂತಹ ಪತ್ರಿಕೆಗಳು ಸಿಪಿಐ(ಎಂ) ವಿರುದ್ಧ ಸಂಘ ಪರಿವಾರದ ದಾಳಿಗೆ ವಾಹಕವಾಗಿ ಕೆಲಸ ಮಾಡಿವೆ. ಆಶ್ಚರ್ಯವೇನಿಲ್ಲ. ಗೌರಿ, ಶಿವಸುಂದರ್ ಮೊದಲಾದವರು ತಮ್ಮ ನಕ್ಸಲೀಯ ಬದ್ಧತೆಗೆ ಅನುಗುಣವಾಗಿ ಸಿಪಿಐ(ಎಂ) ಅನ್ನು ಟಾರ್ಗೆಟ್ ಮಾಡಿ ಬರೆದಿದ್ದಾರೆ. ಇನ್ನೂ ಬರೆಯುತ್ತಾರೆ.

ನಂದಿಗ್ರಾಮ ಬೆಳವಣಿಗೆಗಳಲ್ಲಿ 'ಮಾವೋವಾದಿ'ಗಳ ಪಾತ್ರವನ್ನು ಸಾಬೀತು ಪಡಿಸಲು ಇದೂ ಒಂದು ಸಾಕ್ಷಿಯಾಗಿದೆ. ನಂದಿಗ್ರಾಮದ ಚಳುವಳಿಗಾರರಿಗೆ ಶಸ್ತ್ರಾ ಸ್ತ್ರಗಳನ್ನು ಒದಗಿಸಿದ್ದೇ ಇವರು. ಜನವರಿ 3 ರಿಂದ ಆ ಪ್ರದೇಶಗಳಿಗೆ ಪೊಲೀಸರು ಹೋಗದಂತಾದಾಗ ಈ ಮಾವೋವಾದಿಗಳಿಗೆ ಹೊರಗಿನಿಂದ ಶಸ್ತ್ರಾಸ್ತ್ರಗಳನ್ನು ಅಲ್ಲಿಗೆ ಸಾಗಿಸಲು ಸಾಧ್ಯವಾಯಿತು. ಮಾರ್ಚ್ 14ರಂದು ಸಾವಿಗೀಡಾದ 14 ಜನರ ಪೈಕಿ 8 ಜನ ಮಾತ್ರ ಪೊಲೀಸರ ಗುಂಡಿಗೆ ಬಲಿಯಾದವರು ಎಂದು ಪರಿಶೀಲನೆಯಿಂದ ಸಾಬೀತಾಗಿದೆ. ಉಳಿದ 6 ಜನ ಪೊಲೀಸರೊಂದಿಗಿನ ಚಕಮಕಿಯಲ್ಲಿ ಸತ್ತವರು ಇವರು ಮಾವೋವಾದಿಗಳ ಗುಂಡಿಗೆ ಬಲಿಯಾದವರು. ಪೊಲೀಸರೊಂದಿಗೆ ಗುಂಡಿನ ಕಾಳಗ ನಡೆಸುವುದು ಅವರಿಗೇ ಕರಗತವಾಗಿದೆ. ನಂದಿಗ್ರಾಮ ಪ್ರದೇಶದಲ್ಲಿ ಮಾವೋವಾದಿಗಳು ನುಸುಳಿದ್ದನ್ನು ಕೇಂದ್ರ ಸರ್ಕಾರವೇ ಒಪ್ಪಿಕೊಂಡಿದೆ. ನಂದಿಗ್ರಾಮ ಪ್ರದೇಶದಲ್ಲಿ ಮಾವೋವಾದಿಗಳು ಇರುವುದನ್ನು ಗೂಢಚರ್ಯ ಮಂಡಳಿ ಸಹ ಒಪ್ಪಿಕೊಂಡಿದೆ. ನೆಲ ಬಾಂಬುಗಳನ್ನು ಇಟ್ಟು ಉಡಾಯಿಸುವುದು ಮಾವೋವಾದಿಗಳ ಧಾಳಿಗೆ ವಿಶಿಷ್ಟವಾದುದು. ಇದನ್ನು ಮಾವೋವಾದಿಗಳೇ ಒಪ್ಪಿಕೊಂಡಿದ್ದಾರೆ. ನಂದಿಗ್ರಾಮದ ಚಳುವಳಿ ತಮ್ಮ ನೇತೃತ್ವದಲ್ಲಿ ನಡೆಯುತ್ತಿದೆ ಎಂದು ಅವರು ಹೇಳಿಕೊಳ್ಳುತ್ತಿದ್ದಾರೆ. ಸೋನಾಚುರಾ, ಗರ್ಚಾಕ್ರಾಬೇರಿಯಾ, ಗೋಕುಲ್‌ನಗರ್ ಮೊದಲಾದ ರಸ್ತೆಗಳಲ್ಲಿ ನೆಲ ಬಾಂಬ್ ಇಟ್ಟಿರುವುದನ್ನು ಅವರು ಒಪ್ಪಿಕೊಂಡಿದ್ದಾರೆ. ಅವರು ಇದನ್ನು 'ಕೇಶ್‌ಪುರ್ ಲೈನ್' ಎಂದು ಕರೆಯುತ್ತಾರೆ. ಅಂದರೆ ಒಂದು ಪ್ರದೇಶಕ್ಕೆ ನುಸುಳಿ, ವಿಧ್ವಂಸಕ ಕೃತ್ಯಗಳ ಮೂಲಕ ಜನರನ್ನು ಬೆದರಿಸಿ ಅವರನ್ನು ಹೊರಗಟ್ಟುವ ವಿಧಾನ. ಆದರೆ ಪಶ್ಚಿಮ ಬಂಗಾಳಕ್ಕೆ ಇದೇನು ಹೊಸದಲ್ಲ. ಹಿಂದೆ ಮೂರು ಸಲ ಆಗಿದೆ. ಇದು ನಾಲ್ಕನೆಯ ಸಲ. ಇಂತಹ ಅರೆ ಫ್ಯಾಸಿಸ್ಟ್ ದಬ್ಬಾಳಿಕೆಯನ್ನು ಎದುರಿಸಿ ಗಟ್ಟಿಗೊಂಡಿರುವ ಪಶ್ಚಿಮ ಬಂಗಾಳದ ಸಮರಶೀಲ ಜನತೆ ನಾಲ್ಕನೆಯ ಸಲದ ದಾಳಿಯನ್ನು ಅವರು ಎದುರಿಸಿ ಯಶಸ್ವಿಯಾಗಿ ಹಿಮ್ಮೆಟ್ಟಿಸುತ್ತಾರೆ.

ಪುಟ 12 ರಿಂದ

ಬೇಸಾಯ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ಅವರ ಭೂಮಿಗೆ ಮರಳಿ ಬರುವುದು ಅಪರಾಧವೇ? ಒಂದು ವರ್ಷದಿಂದ ಶಾಲೆಗಳಿಗೆ ಹೋಗಲಾಗದ ಮಕ್ಕಳು ಮರಳಿ ಶಾಲೆಗೆ ಹೋಗಲು ಬಯಸಿದ್ದು ಅಪರಾಧವೇ?

ಮತ್ತೊಂದು ಸುತ್ತಿನ ಅಪಪ್ರಚಾರದ ಸುರಿಮಳೆ! ಸಿಪಿಐ(ಎಂ) ಕಾರ್ಯಕರ್ತರು ದೌರ್ಜನ್ಯದಿಂದ ನಂದಿಗ್ರಾಮವನ್ನು 'ಮರು ಆಕ್ರಮಣ' ಮಾಡುತ್ತಿದ್ದಾರೆ! ಅಮಾಯಕರನ್ನು ಸಾಯಿಸುತ್ತಿದ್ದಾರೆ! ಮಹಿಳೆಯರ ಮೇಲೆ ಅತ್ಯಾಚಾರ ಮಾಡುತ್ತಿದ್ದಾರೆ. ಮಕ್ಕಳನ್ನು ಸಹ ಕೊಂದುಹಾಕಿದ್ದಾರೆ!

ನಂದಿಗ್ರಾಮವನ್ನು ಸಿಪಿಐ(ಎಂ) ಕಾರ್ಯಕರ್ತರು 'ಮರು ಆಕ್ರಮಣ' ಮಾಡುತ್ತಿದ್ದಾರೆ ಎನ್ನುವುದಾದರೆ ಅದನ್ನು ಮೊದಲು ಆಕ್ರಮಣ ಮಾಡಿದವರು ಯಾರು? ಸಿಪಿಐ(ಎಂ) ಬೆಂಬಲಿಗರನ್ನು ಓಡಿಸಿ ಅವರ ಮನೆಗಳನ್ನು ಲೂಟಿ ಮಾಡಿದ್ದು 'ಆಕ್ರಮಣ' ಅಲ್ಲವೇ? ತಮ್ಮ ಸ್ವಂತ ಮನೆಗಳಿಗೆ ಮರಳಿ ಬರುವುದು ಆಕ್ರಮಣವೇ?

ಹನ್ನೊಂದು ತಿಂಗಳ ನಂತರ ಅವರು ತಮ್ಮ ಮನೆಗಳಿದ್ದ ಸ್ಥಳಕ್ಕೆ ವಾಪಸ್ ಬರುವಾಗ ಈ ದುಷ್ಟಕೂಟದವರು ಅವರಿಗೆ ಪ್ರತಿರೋಧ ವ್ಯಕ್ತಪಡಿಸಿದ್ದೇಕೆ? ಇವರ ಅಕ್ರಮ ಪ್ರತಿರೋಧ ಇಲ್ಲದೆ ಹೋಗಿದ್ದರೆ ಯಾವ ಸಂಘರ್ಷವೂ ಇರುತ್ತಿರಲಿಲ್ಲ ಎಲ್ಲವನ್ನು ಕಳೆದುಕೊಂಡ ಆ ಜನ 'ಮಾಡು ಇಲ್ಲವೇ ಮಡಿ' ಎಂಬ ನಿರ್ಧಾರ ಕೈಕೊಂಡು, ಸರ್ಕಾರದ ಯಾವುದೇ ರಕ್ಷಣೆಗೆ ಕಾಯದೆ ಹಿಂತಿರುಗುತ್ತಿದ್ದರು. ಅವರನ್ನು ಅವರ ಪಾಡಿಗೆ ಬಿಡುವ ಬದಲು ಸಮಿತಿಯವರು ಅವರನ್ನು ತಡೆಯಲು ಪ್ರಯತ್ನಪಟ್ಟಾಗ ಹಿಂಸಾಚಾರ ನಡೆಯದೇ ಇರಲು ಸಾಧ್ಯವೇ? ಅವರು ಹಿಂಸೆಯನ್ನು ಎದುರಿಸಿದ್ದಾರೆಯೇ ಹೊರತು ಹಿಂಸೆ ಮಾಡುವುದೇ ಅವರ ಉದ್ದೇಶವಾಗಿರಲಿಲ್ಲ.

ಅದಕ್ಕೆಷ್ಟು ಗುಲ್ಲು! ಎಷ್ಟೊಂದು ಹಾಹಾಕಾರ!! ಮಾಧ್ಯಮಗಳಲ್ಲಿ ಎಷ್ಟೊಂದು 'ಛೀಕೆ'! ನಾಲ್ಕೈದು ಸಾವಿರ ಜನ ಬಡವರು ತಮ್ಮ ಮನೆಗಳನ್ನು, ಮನೆಯಲ್ಲಿದ್ದ ಆಹಾರಧಾನ್ಯಗಳನ್ನು ದನಕರುಗಳನ್ನು ಕಳೆದುಕೊಂಡು ಸ್ವಂತ ದೇಶದಲ್ಲೇ ನಿರಾಶ್ರಿತರಾಗಿ ಹತ್ತು ಹನ್ನೊಂದು ತಿಂಗಳುಗಳ ಕಾಲ ವನವಾಸ ಅನುಭವಿಸುತ್ತಿದ್ದಾಗ ಅವರ ಬಗ್ಗೆ ಕಾಳಜಿ ವ್ಯಕ್ತಪಡಿಸಲು ಹೆಚ್ಚಿನ ಮಾಧ್ಯಮದವರೂ ಮುಂದೆ ಬಂದಿರಲಿಲ್ಲ.

ಸಿಪಿಐ(ಎಂ) ಬೆಂಬಲಿಗರು ಹಿಂತಿರುಗುವಾಗ ಸಂಭವಿಸಿದ ಹಿಂಸಾಚಾರ ಸಿಪಿಐ(ಎಂ)ನಿಂದ ಪೂರ್ವನಿಯೋಜಿತವಾಗಿದ್ದರೆ ಅಲ್ಲಿಗೆ ಸಿಆರ್‌ಪಿಎಫ್ ಅನ್ನು ಏಕೆ ಕರೆಯಿಸಲಾಗುತ್ತಿತ್ತು? ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಕೋರಿಕೆಯನ್ನು ಮನ್ನಿಸಿ ಕೂಡಲೇ ಸಿಆರ್‌ಪಿಎಫ್ ಪಡೆಗಳನ್ನು ಕಳುಹಿಸಿದ್ದರೆ ಹಿಂಸಾಚಾರವನ್ನು ಇನ್ನೂ ಪೂರ್ಣ ಪ್ರಮಾಣದಲ್ಲಿ ತಡೆಯಬಹುದಾಗಿತ್ತು. ಈ ಅವಧಿಯಲ್ಲಿ ಸಿಪಿಐ(ಎಂ) 27 ಜನ ಕಾರ್ಯಕರ್ತರು ಸತ್ತಿದ್ದಾರೆ. ಅವರೂ ಮನುಷ್ಯರಲ್ಲವೇ? ಅವರನ್ನು ಕೊಂದವರು ಯಾರು?

ನಂದಿಗ್ರಾಮಕ್ಕೆ ಸಿಪಿಐ(ಎಂ) ಬೆಂಬಲಿಗರು ವಾಪಸ್ಸಾಗುವುದನ್ನು ವಿರೋಧಿಸುತ್ತಿದ್ದವರಿಗೆ "ಅದೇ ನಾಣ್ಯದಿಂದ ತಿರುಗೇಟು ನೀಡಲಾಗಿದೆ" ಎಂದು ಹೇಳಿದ್ದಕ್ಕೆ ಮುಖ್ಯಮಂತ್ರಿ ಬುದ್ಧದೇವ್ ಅವರು ವಿಷಾದ ವ್ಯಕ್ತಪಡಿಸಿದ್ದಾರೆ. ನಂದಿಗ್ರಾಮದ ಬೆಳವಣಿಗೆಗಳನ್ನು ನಿಭಾಯಿಸುವ ಸಂದರ್ಭದಲ್ಲಿ ತಪ್ಪುಗಳಾಗಿವೆ ಎಂಬುದನ್ನು ಅವರು ಒಪ್ಪಿಕೊಂಡಿದ್ದಾರೆ. ಇಂತಹ ಪ್ರಕರಣ ಮತ್ತೆ ಮರುಕಳಿಸದಂತೆ ಎಚ್ಚರವಹಿಸಬೇಕಾಗಿದೆ ಎಂದೂ ಅವರು ಹೇಳಿದ್ದಾರೆ.

ಘಟನೆಯಲ್ಲಿ ಪ್ರಾಣ ಕಳೆದುಕೊಂಡವರ ಮತ್ತು ನೊಂದವರ ಕುಟುಂಬಗಳಿಗೆ ಪರಿಹಾರ ಕಾರ್ಯ ಆರಂಭವಾಗಿದೆ. ಜನಜೀವನ ಸಾಮಾನ್ಯ ಸ್ಥಿತಿಗೆ ಮರಳುತ್ತಿದೆ. ನಂದಿಗ್ರಾಮದಲ್ಲಿ ಶಾಂತಿಯ ಶತ್ರುಗಳಿಗೆ ಸೋಲಾಗಿದೆ. ಆದರೆ ಹತಾಶ ಶಕ್ತಿಗಳು ಇದರಿಂದ ಪಾಠ ಕಲಿಯುತ್ತವೆ ಎಂದು ಹೇಳುವುದು ಕಷ್ಟ. ತೃಣಮೂಲ ಕಾಂಗ್ರೆಸ್ಸಿನ ನಾಯಕಿಗೆ ತೀವ್ರ ಮುಖಭಂಗವಾಗಿದೆ. ಬೆಂಕಿ ಉಗುಳುವ ಕೆಲಸವನ್ನು ಆಕೆ ಮುಂದುವರೆಸಿದ್ದಾಳೆ. ಇದರಿಂದ ಆಕೆಗಾಗಲಿ ಆಕೆಯ ಹಿಂಬಾಲಕರಿಗಾಗಲಿ ಪ್ರಯೋಜನವಾಗದು. ○

ಅದ್ದೂರಿಯೂ ಜಾತ್ರೆ......

ಪುಟ 8 ರಿಂದ

ಊಟದ ಸವಿ

ಸಮ್ಮೇಳನದ ಏರ್ಪಾಟು ಸಾಕಷ್ಟು ಅಚ್ಚುಕಟ್ಟಾಗಿ ನಡೆದಿದೆಯೆಂಬುದರಲ್ಲಿ ಅನುಮಾನವಿಲ್ಲ. ಅದರಲ್ಲೂ ಉಡುಪಿಯೆಂದರೆ ಊಟವೇ ಮುಖ್ಯ. ಊಟ, ತಿಂಡಿ ಚನ್ನಾಗಿದ್ದರೆ ಸಮ್ಮೇಳನ ಚೆನ್ನಾಗಿತ್ತೆಂದೇ ಅರ್ಥ. ಸಮ್ಮೇಳನದ ಮಾರನೇ ದಿನ ಮಧ್ಯಾಹ್ನವಂತೂ ಊಟಕ್ಕಾಗಿ ಮುಗಿಬಿದ್ದ ಜನಜಂಗುಳಿಯನ್ನು ಕಾಲ್ತುಳಿತದಿಂದ ಪಾರು ಮಾಡಲು ಪೊಲೀಸರು ಹರಸಾಹಸ ಪಡಬೇಕಾಯಿತು. ಸಮ್ಮೇಳನ ಅದ್ದೂರಿಯಾದಷ್ಟೇ ಅವ್ಯವಸ್ಥೆಗಳು ಹೆಚ್ಚಾದವು. ಸಮ್ಮೇಳನಾಧ್ಯಕ್ಷರ ಭಾಷಣದ ಮುದ್ರಿತ ಪ್ರತಿಗಳು ಹೆಚ್ಚಿನ ಪ್ರತಿನಿಧಿಗಳಿಗೆ ಸಿಗಲೇ ಇಲ್ಲ. ಶೇಷಗಿರಿರಾಯರೂ ತನ್ನ ಮುದ್ರಿತ ಭಾಷಣವನ್ನು ಓದದೇ ಅದರ ಆಯ್ದ ಭಾಗಗಳನ್ನು ಆಶುಭಾಷಣ ರೂಪದಲ್ಲಿ ಹೇಳಿದರು. ಹಾಗಾಗಿ ಸಮ್ಮೇಳನಾಧ್ಯಕ್ಷರ ಭಾಷಣದಲ್ಲಿ ಏನಿದೆಯೆನ್ನುವುದು ಬೇರೆ ಬೇರೆ ಗೋಷ್ಠಿಗಳಲ್ಲಿ ಪಾಲುಗೊಂಡವರಿಗೆ ತಿಳಿಯಲೇ ಇಲ್ಲ. ಧ್ವನಿವರ್ಧಕ ವ್ಯವಸ್ಥೆ ಸಮರ್ಪಕವಾಗಿಲ್ಲವೋ ಅಥವಾ ಜನಜಾತ್ರೆಯ ಗದ್ದಲವೋ ಅಂತೂ ಯಾರಿಗೂ ಭಾಷಣಗಳನ್ನು ಸರಿಯಾಗಿ ಕೇಳಲಾಗಲಿಲ್ಲ.

ಕೊರತೆಗಳು

ಕಾರ್ಯಕ್ರಮದ ಪಟ್ಟಿಯಂತೆ 'ಶಿವರಾಮ ಕಾರಂತ ಮಹಾಮಂಟಪ'ದ 'ಎಂ.ಗೋಪಾಲಕೃಷ್ಣ ಅಡಿಗ' ವೇದಿಕೆಯಲ್ಲಿ ಕನ್ನಡದ ನಾಡುನುಡಿಗೆ ಸಂಬಂಧಿಸಿದಂತೆ ಹದಿನೇಳು ಗೋಷ್ಠಿಗಳನ್ನು ಏರ್ಪಡಿಸಲಾಗಿತ್ತು. ಇದಲ್ಲದೆ ಟಿ.ಎಂ.ಎ.ಪೈ ಶಿಕ್ಷಣ ಮಹಾವಿದ್ಯಾಲಯದ ಮುದ್ದಣ ಮಂಟಪದ ಮಾಧವ ವೇದಿಕೆಯಲ್ಲಿ ವಿವಿಧ ವಿಷಯಗಳನ್ನು ಕುರಿತಂತೆ ನಾಲ್ಕು ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿದೆ. ಆದರೂ ಕನ್ನಡದಲ್ಲಿ ವೈಜ್ಞಾನಿಕ ಸಾಹಿತ್ಯವನ್ನು ಕುರಿತಂತೆ ಇಡೀ ಸಮ್ಮೇಳನದಲ್ಲಿ ಯಾವುದೇ ಗೋಷ್ಠಿ ನಡೆಯದಿರುವುದು ಒಂದು ಗಂಭೀರ ಕೊರತೆ. ಎರಡನೇ ದಿನ ನಡೆದ 'ಕರಾವಳಿಯ ಇತ್ತೀಚಿನ ಸ್ಥಿತ್ಯಂತರಗಳು' ಎಂಬ ಗೋಷ್ಠಿಯಲ್ಲಿ ಸಾಮಾಜಿಕ ಸ್ಥಿತ್ಯಂತರಗಳನ್ನು ಕುರಿತಂತೆ ಸಿಪಿಐ(ಎಂ)ನ ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯ ಕಾ.ಬಿ.ಮಾಧವ ಉಪನ್ಯಾಸ ನೀಡಿದರು. ಕರಾವಳಿಯಲ್ಲಿ ಹೆಚ್ಚುತ್ತಿರುವ ಭೂಮಾಫಿಯಾದ ಚಟುವಟಿಕೆ, ನಕ್ಸಲೀಯ ಸಮಸ್ಯೆಯೆಂಬ ವಿಕೃತಿ ಮತ್ತು ಉಲ್ಬಣಿಸುತ್ತಿರುವ ಕೋಮುವಾದದ ಬಗ್ಗೆ ಸಂಗಾತಿ ಬಿ.ಮಾಧವ ಸಮ್ಮೇಳನದ ಗಮನ ಸೆಳೆದರು.

ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಒದಗಿಸುವ ಕುರಿತು ಮಾಜಿ ಮುಖ್ಯಮಂತ್ರಿ ಶ್ರೀ ವೀರಪ್ಪ ಮೊಯ್ಲಿ ಭಾಷಣ ಮಾಡಿದಾಗ ಸಭಿಕರು ಅವರನ್ನು ತರಾಟೆಗೆ ತೆಗೆದುಕೊಂಡರು. ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಎಂಬ ಮಾನ್ಯತೆ ದೊರಕಿಸುವ ಪ್ರಶ್ನೆಯಲ್ಲಿ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವುದಕ್ಕಿಂತಲೂ 'ತಮಿಳಿಗೆ ಸಿಕ್ಕಿದೆ, ನಮಗ್ಯಾಕಿಲ್ಲ' ಎನ್ನುವ ಅಸೂಯೆಯೇ ಪ್ರಧಾನವಾಗಿರುವಂತಿದೆ. ○

ದಿಕ್ಸೂಚಿ ಇಲ್ಲದ ಭಾಷಣ

ಸಮ್ಮೇಳನಾಧ್ಯಕ್ಷ ಶ್ರೀ ಎಲ್.ಎಸ್.ಶೇಷಗಿರಿರಾಯರ ಭಾಷಣದಲ್ಲಿ ಯಾವುದೇ ದಿಕ್ಸೂಚಿ ಇರಲಿಲ್ಲ. ಅವರು ಕೆಲವು ಸಮಸ್ಯೆಗಳನ್ನು ಕುರಿತು ಪ್ರಸ್ತಾಪಿಸಿದರೇ ಹೊರತು ಪರಿಹಾರ ಸೂಚಿಸಲಿಲ್ಲ. ಜನತೆಯ ಬದುಕಿನ ಜ್ವಲಂತ ಪ್ರಶ್ನೆಗಳನ್ನು ಅದರೊಂದಿಗೆ ಭಾಷೆಯ ಬೆಸುಗೆಯನ್ನು ಪ್ರಸ್ತಾಪಿಸಲಿಲ್ಲ. ಕೋಮುಸಾಮರಸ್ಯ-ಕೋಮುವಾದದ ಬೆದರಿಕೆ ಅಲ್ಲಿ ಪ್ರಸ್ತಾಪಿತವಾಗಲಿಲ್ಲ. ಅವರ ಭಾಷಣದ ಆಶಯದೊಂದಿಗೆ ವಿವಿಧಗೋಷ್ಠಿಗಳಲ್ಲಿ ಭಾಗವಹಿಸಿದವರು ಯಾರೂ ಹೆಚ್ಚಾಗಿ ದನಿಗೂಡಿಸಲಿಲ್ಲ. ಅನೇಕರಿಗೆ ಅಧ್ಯಕ್ಷರ ಭಾಷಣ ಏನೇನು ಅಂಶಗಳನ್ನು ಒಳಗೊಂಡಿತ್ತು ಎಂಬುದೇ ಗೊತ್ತಿರಲಿಲ್ಲ ಎಂಬ ಎಲ್ಲ ದೂರುಗಳ ಹೊರತಾಗಿಯೂ ಶ್ರೀ ಎಲ್.ಎಸ್. ಶೇಷಗಿರಿರಾಯರು ವ್ಯಕ್ತಪಡಿಸಿದ ಕೆಲವು ಅಭಿಪ್ರಾಯಗಳ ಬಗ್ಗೆ ಬಹಳ ತಕರಾರು ಇರಲ್ಲಿಕ್ಕಿಲ್ಲ. ಅವರು ಭಾಷಣದಲ್ಲಿ ಹೇಳದೇ ಬಿಟ್ಟಿರುವುದನ್ನು ಎರಡನೇ ದಿನ ನಡೆದ ಸಂವಾದ ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಿದ್ದಾರೆ. ಅಧ್ಯಕ್ಷರ ಭಾಷಣ ಮತ್ತು ಅವರೊಂದಿಗಿನ ಸಂವಾದದ ಕೆಲವಂಶಗಳು ಇಂತಿವೆ.

- ಈಗ ಆಗುತ್ತಿರುವುದು ಜಾಗತೀಕರಣ ಅಲ್ಲ; ಇದು ಅಮೇರಿಕೀಕರಣ. ನಮಗೆ ಗೊತ್ತಿಲ್ಲದಂತೆ ನಾವು ಅಮೇರಿಕದ ಕೊಳ್ಳುಬಾಕ ಸಂಸ್ಕೃತಿಯ ಬಂಧನಕ್ಕೆ ಒಳಗಾಗುತ್ತಿದ್ದೇವೆ.
- ಇಂಗ್ಲಿಷ್ ಭಾಷೆಯ ಮುಂದೆ ಅನ್ಯ ಭಾಷೆಗಳು ಸಾಯುತ್ತಿವೆ. ಯುರೋಪಿನಲ್ಲೇ ಇಂಗ್ಲಿಷ್ ಎದುರು ಇತರ ಯುರೋಪಿಯನ್ ಭಾಷೆಗಳನ್ನು ಉಳಿಸಲು ಕಳಕಳಿ ಪ್ರಾರಂಭವಾಗಿದೆ. ಭಾರತದಲ್ಲಂತೂ ಹೀಗೇ ಮುಂದುವರೆದರೆ ಈ ಶತಮಾನದ ಅಂತ್ಯಕ್ಕೆ 2 ಸಾವಿರ ಭಾಷೆಗಳಲ್ಲಿ ನೂರಕ್ಕೂ ಅಧಿಕ ಭಾಷೆಗಳು ಮುಗಿದೇ ಹೋಗಲಿವೆ.
- ಪ್ರಾದೇಶಿಕ ಅಸಮಾನತೆ ಹೋಗಲಾಡಿಸುವುದು ಸಾಹಿತಿಗಳಿಗೆ ಸೀಮಿತವಾದ ಕೆಲಸವಲ್ಲ. ಅದರಲ್ಲಿ ರಾಜಕೀಯ ಸಂಕಲ್ಪಕ್ಕೆ ಅಧಿಕ ಜವಾಬ್ದಾರಿ ಇದೆ. ರಾಜಕೀಯ ಸಂಕಲ್ಪದ ಹೊರತಾಗಿ ಅದು ಸಾಕ್ಷಿಪ್ಯ ಅಲ್ಲ. ಜನಸಮೂಹ, ಸಾಹಿತಿಗಳು, ಮಾಧ್ಯಮಗಳು ಒಂದಾಗಿ ರಾಜಕೀಯ ಸಂಕಲ್ಪವನ್ನು ಪ್ರೇರೇಪಿಸುವ ಕೆಲಸ ಮಾಡಬಹುದು.
- ಡಾ.ನಂಜುಂಡಪ್ಪ ವರದಿ ಕಾರ್ಯಗತ ಮಾಡಲು ಸರಕಾರ ಮನಸ್ಸು ಮಾಡಬೇಕು.
- ರಾಜಧಾನಿಯಲ್ಲಿ ಕನ್ನಡಪರ ವಾತಾವರಣ ಮೂಡಿಸಲು ಸಮಿತಿ ರಚಿಸಬೇಕು.

ಇನ್ನುಳಿದಂತೆ ಅಧ್ಯಕ್ಷರು, 'ಕನ್ನಡಪರ' ಹೋರಾಟಗಾರರು ಎತ್ತಿರುವಂತಹ ರಾಜ್ಯದಲ್ಲಿ ಯಾವುದೇ ಉದ್ಯೋಗಕ್ಕೂ ಕನ್ನಡ ತಿಳುವಳಿಕೆ ಕಡ್ಡಾಯವಾಗಬೇಕು, ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಕನ್ನಡಿಗರಿಗೆ ಮೀಸಲಾತಿ, ಸರೋಜಿನಿ ಮಹಿಷಿ ವರದಿ ಜ್ಯಾರಿ ಮುಂತಾದ ಪ್ರಶ್ನೆಗಳನ್ನು ಎತ್ತಿದ್ದಾರೆ. ಕರ್ನಾಟಕದಲ್ಲಿ ವ್ಯಾಪಿಸುತ್ತಿರುವ ನಿರುದ್ಯೋಗದ ಸಮಸ್ಯೆ, ಕೃಷಿರಂಗದಲ್ಲಿ ಕಾಣಿಸಿರುವ ಬಿಕ್ಕಟ್ಟು, ರೈತರ ಆತ್ಮಹತ್ಯೆ ಮುಂತಾದ ಸಮಸ್ಯೆಗಳಿಗಿಂತ ಕನ್ನಡಿಗರ ಭಾವನಾತ್ಮಕ ಬೇಡಿಕೆಗಳಿಗೆ ಅವರ ಭಾಷಣ ವಿಶೇಷ ಒತ್ತು ಕೊಟ್ಟಿದೆ.

ಜಗದಗಲ


ಶರತ್‌ಚಂದ್ರ

ಆಸ್ಟ್ರೇಲಿಯಾ ಚುನಾವಣೆಯಲ್ಲಿ ಬುಶ್‌ಗೆ ಪರಾಭವ

ಆಸ್ಟ್ರೇಲಿಯಾದಲ್ಲಿ ಅಮೆರಿಕದ ಅಧ್ಯಕ್ಷ ಹೇಗೆ ಸೋಲುವುದು ಎಂದಿರಾ ?! ಹೌದು. ಬುಶ್ ನೀತಿಗಳನ್ನು ಅಕ್ಷರಶಃ ಅನುಸರಿಸಿ ಆತನ ಭಟ್ಟಂಗಿಯಂತೆ ಆಡಿದ್ದಕ್ಕೆ ಮತ್ತು ಆಸ್ಟ್ರೇಲಿಯಾವನ್ನು ಅಮೆರಿಕದ 'ಜೂನಿಯರ ಪಾರ್ಟನರ್' ಮಾಡಿದ್ದು, ಹಿಂದಿನ ಪ್ರಧಾನಿ ಹೊವಾರ್ಡ್ ಮತ್ತು ಅವರ ಲಿಬರಲ್ ಪಕ್ಷದ ಪರಾಭವಕ್ಕೆ ಒಂದು ಪ್ರಮುಖ ಕಾರಣವಾಗಿತ್ತು. ಇದರೊಂದಿಗೆ ಹೊವಾರ್ಡ ಎರಡು ವಿಕ್ರಮ ಸ್ಥಾಪಿಸಿದ್ದಾರೆ. ನಾಲ್ಕು ಅವಧಿಗಳ ಕಾಲ ಅವರ ಆಳ್ವಿಕೆ ಎರಡನೇ ಅತಿ ದೀರ್ಘ ಆಳ್ವಿಕೆ ಆಗಿತ್ತು. ಅದೇ ರೀತಿ ಪ್ರಧಾನಿಯಾಗಿದ್ದು ಸ್ವತಃ ಚುನಾವಣೆ ಸೋತ ಎರಡನೇ ಪ್ರಧಾನಿ ಅವರು! ಅವರು ಈ ಬಾರಿ ಸೋತ ಕ್ಷೇತ್ರವನ್ನು 33 ವರ್ಷಗಳಿಂದ ಪ್ರತಿನಿಧಿಸುತ್ತಿದ್ದರು.


ಗೆದ್ದ ಪ್ರಧಾನಿ ಕೆವಿನ್ ರುದ್

ಹೊವಾರ್ಡ ಬುಶ್ ನೀತಿಗಳ ಭಾರೀ ಬೆಂಬಲಿಗರಾಗಿದ್ದು ಇದು ಅವರಿಗೆ ಅವರ ದೇಶದಲ್ಲಿ ಬಹಳ ಅಪಖ್ಯಾತಿ ತಂದು ಕೊಟ್ಟಿತ್ತು. ಇರಾಕ್ ಗೆ ಸೈನ್ಯ ತುಕಡಿ ಕಳಿಸಿದ್ದು ಅವರು ಜನತೆಯ ತೀವ್ರ ವಿರೋಧ ಧಿಕ್ಕರಿಸಿ. ಅದೇ ರೀತಿ ಪರಿಸರ ರಕ್ಷಣೆಯ ಉದ್ದೇಶ ಹೊತ್ತ ಕ್ಯೋಟೋ ಒಪ್ಪಂದಕ್ಕೆ ಸಹಿ ಹಾಕಲು (ಅಮೆರಿಕವನ್ನು ಅನುಸರಿಸಿ) ನಿರಾಕರಿಸಿದ ಬೆರಳೆಣಿಕೆಯ ದೇಶದ ಪಟ್ಟಿಯಲ್ಲಿ ಆಸ್ಟ್ರೇಲಿಯಾವನ್ನು ಸೇರಿಸಿದರು. ಅದೇ ರೀತಿ 'ಭಯೋತ್ಪಾದನೆಯ ವಿರುದ್ಧ ಯುದ್ಧ'ದ ಹೆಸರಲ್ಲಿ ವಿದೇಶಿ ವಲಸೆಗಾರರ ಹಕ್ಕುಗಳನ್ನು ಮೊಟಕುಗೊಳಿಸುವ, ಧಾರ್ಮಿಕ-ಜನಾಂಗೀಯ ಅಲ್ಪ ಸಂಖ್ಯಾತರ ವಿರುದ್ಧ ದ್ವೇಷ-ಸಂಶಯದ ವಾತಾವರಣ ಮೂಡಿಸುವಲ್ಲೂ ಅವರು ಬುಶ್ ಮೇಲ್ಪಂಕ್ತಿ ಅನುಸರಿಸಿದರು.


ಸೋತ ಹೊವಾರ್ಡ್

ಇದು ಮಾತ್ರವಲ್ಲ ಅವರು ತಂದ ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸುವ 'ವರ್ಕ ಛಾಯ್ಸಸ್' ಎಂಬ ಕಾನೂನು ಭಾರೀ ಅತೃಪ್ತಿಗೆ ಕಾರಣವಾಗಿತ್ತು. ಈ ಕಾನೂನು ಮಾಲಕರ ಪರವಾಗಿದ್ದು, ಕಾರ್ಮಿಕರನ್ನು ಕೆಲಸದಿಂದ ತೆಗೆಯುವ ಮತ್ತು ಅವರ ಸವಲತ್ತುಗಳನ್ನು ಕಸಿದುಕೊಳ್ಳುವುದನ್ನು ಸುಲಭ ಮಾಡುತ್ತದೆ.

ಚುನಾಯಿತ ಪ್ರಧಾನಿ ಕೆವಿನ್ ರುದ್ ಚುನಾವಣೆ ಪ್ರಚಾರದ ಸಮಯದಲ್ಲಿ ತಮ್ಮ ಪಕ್ಷ ಆಯ್ಕೆಯಾದರೆ - ಇರಾಕ್ ನಿಂದ ಸೈನ್ಯ ವಾಪಸು ಕರೆಸುವ, ಕ್ಯೋಟೋ ಒಪ್ಪಂದಕ್ಕೆ ಸಹಿ ಹಾಕುವ, 'ವರ್ಕ ಛಾಯ್ಸಸ್' ಕಾನೂನು ರದ್ದು ಮಾಡುವ - ಭರವಸೆ ನೀಡಿದ್ದರು. ಲೇಬರ್ ಪಕ್ಷ ಹಲವು ವರ್ಷಗಳ ನಂತರ ಸರ್ಕಾರ ರಚಿಸಲಿದ್ದು ಎಷ್ಟರ ಮಟ್ಟಿಗೆ ತನ್ನ ವಚನಗಳನ್ನು ಪಾಲಿಸುವುದು ಎಂದು ಕಾದು ನೋಡಬೇಕಾಗಿದೆ. ವಿರೋಧ ಪಕ್ಷದಲ್ಲಿದ್ದಾಗ 'ಎಡ ಪಂಥೀಯ' ಬಾಷೆ ಮಾತಾಡುವುದು, ಅಧಿಕಾರಕ್ಕೆ ಬಂದ ಕೂಡಲೇ 'ಬಲಪಂಥೀಯ' ಭಾಷೆಗೆ ಬದಲಾಗುವುದು - ಲೇಬರ್ ಪಕ್ಷಗಳಿಗೆ ಅಪರೂಪವೇನಲ್ಲ.

ರಶ್ಯಾದಲ್ಲಿ ಪುಟಿನ್ ಪಕ್ಷಕ್ಕೆ ಭಾರೀ ಜಯ

ರಶ್ಯಾದಲ್ಲಿ ಇತ್ತೀಚೆಗೆ ನಡೆದ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಪುಟಿನ್ ಅವರ 'ಯುನೈಟೆಡ್ ರಶ್ಯಾ' ಮೂರನೇ-ನಾಲ್ಕು ಭಾಗದಷ್ಟು ಸೀಟುಗಳನ್ನು ಪಡೆದು ಭಾರೀ ಜಯಗಳಿಸಿದೆ. ಈ ಬಾರಿ ಚುನಾವಣೆ ಪದ್ಧತಿಯಲ್ಲಿ ಬದಲಾವಣೆ ಅದರ ಸೀಟುಗಳ ಸಂಖ್ಯೆ ಹೆಚ್ಚಲು ಕಾರಣವಾಗಿದೆ ಎನ್ನಲಾಗಿದೆ. ಕೇವಲ ಮೂರು ಇತರ ಪಕ್ಷಗಳು ಸೀಟುಗಳನ್ನು ಗಳಿಸಿದವು. ಅನುಪಾತ ವ್ಯವಸ್ಥೆ ಅನುಸರಿಸುವ ರಶ್ಯಾದಲ್ಲಿ ಸೀಟು ಪಡೆಯಲು ಬೇಕಾದ ಕನಿಷ್ಟ ಶೇಕಡಾವಾರು ಮತಗಳಿಕೆಯನ್ನು ಶೇ.5 ರಿಂದ 7 ಕ್ಕೆ ಏರಿಸಲಾಗಿತ್ತು. ಇದು ಇನ್ನಷ್ಟು ಪಕ್ಷಗಳನ್ನು ಪಾರ್ಲಿಮೆಂಟಿನಿಂದ ಹೊರಗಿಟ್ಟು ಕೊನೆಗೆ ಏಕಪಕ್ಷೀಯ ವ್ಯವಸ್ಥೆ ಸ್ಥಾಪಿಸುವ ಹುನ್ನಾರ ಎಂದು ವಿರೋಧ ಪಕ್ಷಗಳು ಆರೋಪಿಸಿವೆ. ಕಮ್ಯುನಿಸ್ಟ್ ಪಕ್ಷ ಶೇ.11 ಮತ ಗಳಿಸಿ ಪ್ರಧಾನ ವಿರೋಧ ಪಕ್ಷದ ಸ್ಥಾನದಲ್ಲಿದೆ. ರಶ್ಯಾದ ಆರ್ಥಿಕ ಉತ್ತಮಗೊಂಡಿರುವುದು, ಪುಟಿನ್ ಸರ್ಕಾರ ಅಮೆರಿಕನ್ ಸಾಮ್ರಾಜ್ಯಶಾಹಿ ವಿರುದ್ಧ ಸೆಡ್ಡು ಹೊಡೆದು ನಿಂತಿರುವುದು, ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಸ್ವತಂತ್ರ ನೀತಿ ಅನುಸರಿಸುತ್ತಿರುವುದು, - ಇತ್ಯಾದಿ ಪುಟಿನ್ ಪಕ್ಷದ ವಿಜಯದಲ್ಲಿ ಮಹತ್ವದ ಪಾತ್ರ ವಹಿಸಿದೆ ಎನ್ನಲಾಗಿದೆ. ಆದರೆ ರಶ್ಯಾದ ಆರ್ಥಿಕ ಚೇತರಿಕೆ ಮುಖ್ಯವಾಗಿ ತೈಲ-ಗ್ಯಾಸ್ ಬೆಲೆ ಏರಿಕೆ, ತೈಲ-ಗ್ಯಾಸ್ ವ್ಯಾಪಾರದಲ್ಲಿ ಮುತುವರ್ಜಿ ವಹಿಸಿದ್ದು, ರಕ್ಷಣಾ ಸಂಬಂಧಿ ಕೈಗಾರಿಕೆಯಲ್ಲಿ ಚೇತರಿಕೆ ಮೇಲೆ ಅವಲಂಬಿಸಿದೆ. ಹಿಂದೆ ಇದ್ದಂತೆ ವಿಶಾಲ ವಿಜ್ಞಾನ-ತಂತ್ರಜ್ಞಾನ ಮತ್ತು ಕೈಗಾರಿಕಾ ಬಲದ ಆಧಾರದ ಮೇಲೆ ಇಲ್ಲ ಎಂಬ ಟೀಕೆಯೂ ಇದೆ.

ಮುಂದಿನ ವರ್ಷ ಪುಟಿನ್ ಅಧಿಕಾರ ಅವಧಿ ಕೊನೆಗೊಳ್ಳಲಿದ್ದು, ರಶ್ಯಾದ ಸಂವಿಧಾನದ ಪ್ರಕಾರ ಅವರು ಮೂರನೇ ಬಾರಿ ಚುನಾವಣೆಗೆ ಸ್ಪರ್ಧಿಸುವಂತಿಲ್ಲ. ಅವರ ಪಕ್ಷ ಈಗ ಪ್ರಥಮ ಪ್ರಧಾನಿಯಾಗಿರುವ ಡಿಮಿಟ್ರಿ ಮೆಡ್ ವೆಡೆವ್ ಅವರನ್ನು ಅಧ್ಯಕ್ಷ ಅಭ್ಯರ್ಥಿಯಾಗಿ ಸೂಚಿಸಿದೆ. ಪುಟಿನ್ ಅವರು ಜನಪ್ರಿಯ ನಾಯಕರಾಗಿದ್ದು, ಅವರು ಪ್ರಧಾನಿಯಾಗಿ ಸಕ್ರಿಯ ರಾಜಕೀಯದಲ್ಲಿ ಮುಂದುವರೆಯಬೇಕು ಎಂದು ಸೂಚಿಸಿದ್ದಾರೆ.

ಇರಾನ್ ಅಣ್ವಸ್ತ್ರ ಕಾರ್ಯಕ್ರಮ 2003 ರಲ್ಲೇ ನಿಂತಿದೆ : ಅಮೆರಿಕನ್ ವರದಿ

ಅಮೆರಿಕನ್ ಭದ್ರತಾ ಅಂದಾಜು ವರದಿ 16 ವಿವಿಧ ಅಮೆರಿಕನ್ ಬೇಹುಗಾರಿಕೆ ಸಂಸ್ಥೆಗಳ ಮಾಹಿತಿ-ವಿಶ್ಲೇಷಣೆಗಳ ಆಧಾರದ ಮೇಲೆ ತಯಾರಿಸುವ ವರದಿ. ಈ ವರ್ಷದ ಭದ್ರತಾ ಅಂದಾಜು ವರದಿ ಇರಾನ್ ಈಗ ಅಣ್ವಸ್ತ್ರ ಕಾರ್ಯಕ್ರಮ ಸಕ್ರಿಯವಾಗಿ ಮುಂದುವರೆಸುತ್ತಿಲ್ಲ. ಮೊದಲು ಆರಂಭಿಸಿದ್ದ ಕಾರ್ಯಕ್ರಮವನ್ನು 2003 ರಲ್ಲಿ ನಿಲ್ಲಿಸಲಾಗಿದ್ದು ಆ ಮೇಲೆ ಅದನ್ನು ಮುಂದುವರೆಸಿದ್ದರ ಬಗ್ಗೆ ಪುರಾವೆ ಇಲ್ಲ ಎಂದಿದೆ. 2005 ರಿಂದ ಈ ವರೆಗೆ ಇರಾನ್ ಇಂತಹ ಕಾರ್ಯಕ್ರಮ ನಡೆಸುತ್ತಿರಬಹುದು ಎಂಬ ಅಂದಾಜು ನಿಜವಲ್ಲ ಎಂದಿದೆ. ಈ ವರದಿ ಇರಾನ್ ಮತ್ತು ಜಗತ್ತಿನ ಎಲ್ಲೆಡೆ ಹರ್ಷ ತಂದಿದೆ. ಆದರೆ ಅಮೆರಿಕ ಸರ್ಕಾರ ಮತ್ತು ಅದರ ಬೆಂಬಲಿಗರಿಗೆ ನಡುಕ-ನಿರಾಸೆ ತಂದಿದೆ. ಇರಾನ್ ಅಣ್ವಸ್ತ್ರ ಕಾರ್ಯಕ್ರಮ ಜಗತ್ತಿಗೆ ಅಪಾಯಕಾರಿ. ಅದನ್ನು ನಿಲ್ಲಿಸಲು ಆರ್ಥಿಕ-ಮಿಲಿಟರಿ ದಿಗ್ಬಂಧನ ಹೊರಿಸಬೇಕು. ಇರಾನ್ ಮೇಲೆ ಯುದ್ಧ ಹೂಡಿ ಅದರ 'ವಿನಾಶಕಾರಿ' ಕ್ಷಮತೆ ನಾಶ ಮಾಡಬೇಕು. ಎಂದೆಲ್ಲಾ ಪ್ರಚಾರ ಮಡುತ್ತಿದ್ದ ಅಮೆರಿಕನ್ ಸರ್ಕಾರಕ್ಕೆ ಇದರಿಂದ ಮುಖಭಂಗವಾಗಿದೆ. ಮಾತ್ರವಲ್ಲ ವಿಶ್ವ ಸಂಸ್ಥೆ ಮತ್ತು ಇತರ ಅಂತರ್ರಾಷ್ಟ್ರೀಯ ವಲಯಗಳಲ್ಲಿ ಅಮೆರಿಕದ ಇರಾನ್ ವಿರುದ್ಧ ಆಕ್ರಾಮಕ ನೀತಿಗಳಿಗೆ ಪ್ರತಿರೋಧ ಒಡ್ಡಿದ ರಶ್ಯಾ, ಚೀನಾಗಳಿಗೆ ಇದು ಬಲ ತಂದಿದೆ. ಇರಾನ್ ಸರ್ಕಾರ ಇದನ್ನು ಸ್ವಾಗತಿಸಿದೆ. ಆದರೆ ಬುಶ್ ಸರ್ಕಾರ ವಿದೇಶ-ರಕ್ಷಣಾ ಸಚಿವಾಲಯದ ಮಾಹಿತಿ-ವಿಶ್ಲೇಷಣೆ ಪ್ರಕಾರ ಇರಾನ್ ಯುರೇನಿಯಂ ಪುನರ್- ಸಂಸ್ಕರಣವನ್ನು ಮುಂದುವರೆಸುತ್ತಿರುವುದು ಮಿಲಿಟರಿ ಉದ್ದೇಶಗಳಿಗಾಗಿ. 2012 ರೊಳಗೆ ಇದರಿಂದ ಅಣ್ವಸ್ತ್ರ ತಯಾರಿಸುವ ಕ್ಷಮತೆ ಬರುತ್ತದೆ. ಇರಾನ್ ಕಾರ್ಯಕ್ರಮ ನಿಧಾನಗೊಳಿಸಿದ್ದರೆ, ಅದು ಅದರ ಮೇಲೆ ಹೊರಿಸಲಾದ ಒತ್ತಡದ ಫಲ. ಆದ್ದರಿಂದ ಇರಾನ್ ಮೇಲೆ ಒತ್ತಡ ಮುಂದುವರೆಸಬೇಕು ಎಂದಿದೆ. ಅಡಿಗೆ ಬಿದ್ದರೂ ಮೂಗು ಮೇಲು!

ಸಿಪಿಐ(ಎಂ) ಕುಂದಾಪುರ ತಾಲ್ಲೂಕು 19ನೇ ಸಮ್ಮೇಳನ ಕೋಮುವಾದವನ್ನು ಹಿಮ್ಮೆಟ್ಟಿಸಲು ಕರೆ

ಸಿಪಿಐ(ಎಂ) ಕುಂದಾಪುರ ತಾಲ್ಲೂಕು 19ನೇ ಸಮ್ಮೇಳನದ ಉದ್ಘಾಟನೆಯು ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಭವನದಲ್ಲಿ ತಾರೀಖು 02.12.2007 ರಂದು ನಡೆಯಿತು. ಪ್ರಾರಂಭದಲ್ಲಿ ಕಾಂ: ವಿ.ನರಸಿಂಹನವರು ಧ್ವಜಾರೋಹಣ ಮಾಡಿ ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳನ್ನು ಇನ್ನಷ್ಟು ಬಲಗೊಳಿಸಲು ಹೇಳಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಕಾಂ:ಯು.ದಾಸ್‌ಭಂಡಾರಿ ಯವರು ವಹಿಸಿದರು. ವೇದಿಕೆಯಲ್ಲಿ ಮುಖ್ಯ ಅತಿಥಿಯಾಗಿ ಶ್ರೀಯುತ ಕೆ.ಶಂಕರ್ ಮತ್ತು ಚಂದ್ರಶೇಖರ.ವಿ ಉಪಸ್ಥಿತರಿದ್ದರು. ಉದ್ಘಾಟನಾ ಸಮಾರಂಭದಲ್ಲಿ ಸಮ್ಮೇಳನವನ್ನು ಉದ್ಘಾಟನೆ ಮಾಡುತ್ತಾ ಕಾಂ: ನಿತ್ಯಾನಂದಸ್ವಾಮಿಯವರು ಮಾತನಾಡಿ ಅಂತರರಾಷ್ಟ್ರೀಯ, ರಾಷ್ಟ್ರೀಯ ರಾಜಕೀಯ ಪರಿಸ್ಥಿತಿ ಕುರಿತು ವಿವರಿಸಿದರು. ಕೋಮುವಾದಿ ಶಕ್ತಿಗಳು ಜಿಲ್ಲೆಯಲ್ಲಿ ಹಾಗೂ ರಾಜ್ಯದಲ್ಲಿ ಧಾರ್ಮಿಕ ಭಾವನೆಯನ್ನು ಕೆರಳಿಸುವ ಮೂಲಕ ಜನರನ್ನು ತಮ್ಮ ದೈನಂದಿನ ಸಮಸ್ಯೆಗಳಿಂದ ವಿಮುಖಗೊಳಿಸುತ್ತಿದೆ. ಕೆಲವು ಪ್ರದೇಶಗಳಲ್ಲಿ ನಿರಂತರ ಗಲಭೆಗಳನ್ನು ಸೃಷ್ಟಿಸುವ ಪ್ರಯತ್ನ ನಡೆಯುತ್ತಿವೆ. ಹಿಂದೂ ಕೋಮುವಾದ ಹಾಗೂ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಮೂಲಭೂತವಾದಿಗಳ ವಿರುದ್ಧ ಹೋರಾಟ ನಿರಂತರ ಮಾಡಬೇಕಾಗಿದೆ. ಕಾರ್ಮಿಕ ವರ್ಗ ತನ್ನ ಮುಖ್ಯ ವೈರಿಗಳ ಬಗ್ಗೆ ತಿಳಿದುಕೊಳ್ಳಬೇಕು. ಯಾವುದೇ ಸಂದರ್ಭದಲ್ಲಿ ತಮ್ಮ ವೈರಿಗಳನ್ನು ಬೆಂಬಲಿಸದಂತೆ ಅವರನ್ನು ಜಾಗೃತಿಗೊಳಿಸುವ ಕೆಲಸ ಪಕ್ಷದ ಸದಸ್ಯರು ಮಾಡಬೇಕು ಎಂದು ಕರೆ ನೀಡಿದರು. ಸಾಮ್ರಾಜ್ಯಶಾಹಿ ಪಿತೂರಿಗಳ ವಿರುದ್ಧ ವಿಶ್ವದಾದ್ಯಂತ ತೀವ್ರ ಪ್ರತಿರೋಧ ಬೆಳೆಯುತ್ತಿದೆ. ನಮ್ಮ ದೇಶದಲ್ಲಿ ಸಾಮ್ರಾಜ್ಯಶಾಹಿ ವಿರುದ್ಧ ಚಳುವಳಿಯನ್ನು ಬಲಪಡಿಸುತ್ತಾ ನಮ್ಮ ದೇಶದ ಸಾರ್ವಭೌಮತೆಯನ್ನು, ಸ್ವಾತಂತ್ರ್ಯವನ್ನು ಹಾಗೂ ದುಡಿಯುವ ವರ್ಗದ ಹಿತವನ್ನು ರಕ್ಷಿಸುವುದು ನಮ್ಮ ಸಹಜವಾದ ಕರ್ತವ್ಯವಾಗಿದೆ.

ಕೇಂದ್ರದ ಯುಪಿಎ ಸರ್ಕಾರವು ಪರಮಾಣು ಸಹಕಾರ ಒಪ್ಪಂದವನ್ನು ಜಾರಿಗೊಳಿಸಬಾರದು. ದೇಶದ ಐಕ್ಯತೆ ಮತ್ತು ಸಾರ್ವಭೌಮತೆಯು ವಿಷಯವಾಗಿದೆ. ಸಾಮಾನ್ಯ ಕನಿಷ್ಟ ಕಾರ್ಯಕ್ರಮವನ್ನು ಜಾರಿಗೊಳಿಸಬೇಕು. ಕೋಮುವಾದಿ ಶಕ್ತಿಗಳ ನಿದಾರ್ಕ್ಷಿಣ್ಯವಾಗಿ ಕ್ರಮ ಜರುಗಿಸಬೇಕು. ಅಸಂಘಟಿತ ಕಾರ್ಮಿಕರಿಗಾಗಿ ಸಮಗ್ರ ಕಾನೂನನ್ನು ಸಂಸತ್ತಿನಲ್ಲಿ ಮಂಡಿಸಬೇಕು. ಬೆಲೆ ಏರಿಕೆಗೆ ಕೂಡಲೇ ಕಡವಾಣ ಹಾಕಬೇಕು ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಉತ್ತಮಗೊಳಿಸಬೇಕೆಂದು ವಿವರಿಸಿದರು. ಕೊನೆಯಲ್ಲಿ ಶ್ರೀಯುತ ಎಚ್.ನರಸಿಂಹನವರು ಎಲ್ಲರಿಗೂ ಧನ್ಯವಾದವನ್ನು ಅರ್ಪಿಸಿದರು.



ಚಿಕ್ಕಮಗಳೂರನ್ನು ಬಾಧಿಸುತ್ತಿರುವ ಪಿಡುಗುಗಳು

ಭ್ರಷ್ಟಾಚಾರ, ಜಾತಿ ರಾಜಕೀಯ, ಸ್ವಜನ ಪಕ್ಷಪಾತ ಮುಂತಾದವುಗಳ ಜೊತೆಗೆ ಚಿಕ್ಕಮಗಳೂರನ್ನು ಕೋಮುವಾದ ಹಾಗೂ ನಕ್ಸಲ್ ವಾದದ ಪಿಡುಗುಗಳು ಬಾಧಿಸುತ್ತಿವೆ. ಇಡೀ ಸಮಾಜವನ್ನು ಒಳಗಿನಿಂದಲೇ ಬಾಧಿಸುತ್ತಿರುವ ಸಮಸ್ಯೆಗಳು ಇವು. ಚಿಕ್ಕಮಗಳೂರಿನ ಪಕ್ಕದ ದಕ್ಷಿಣ ಕನ್ನಡದಲ್ಲಿ ಕೋಮುವಾದದ ವಿಷ ಬೀಜ ಬಿತ್ತಿ ಅದರ ರಾಜಕೀಯ ಲಾಭ ಪಡೆದ ಸಂಘಪರಿವಾರ ಚಿಕ್ಕಮಗಳೂರಿನಲ್ಲಿ ಅದರ ಪ್ರಯೋಗಕ್ಕೆ ಮುಂದಾಯಿತು. ಜನತೆಯ ಬದುಕಿನ ಪ್ರಶ್ನೆಗಳ ಕುರಿತು ಯಾವಾಗಲೂ ಎಲ್ಲಿಯೂ ಮಾತನಾಡದ ಸಂಘಪರಿವಾರದ ರಾಜಕೀಯ ಮುಖ ಬಿಜೆಪಿಯು ಚಿಕ್ಕಮಗಳೂರಿನಲ್ಲಿ ಸೂಫಿ ಪರಂಪರೆಯ ಬಾಬಾಬುಡನ್‌ಗಿರಿಯನ್ನು ವಿವಾದದ ಕೇಂದ್ರವನ್ನಾಗಿಸಿತು. ತೋಟಗಳಲ್ಲಿ ಕಾರ್ಮಿಕರ ಸಂಖ್ಯೆಯ ಕಡಿತದಿಂದ, ಯಾವುದೇ ಕೈಗಾರಿಕೆ ಸ್ಥಾಪನೆಯಾಗದೆ ಉದ್ಯೋಗ ಸೃಷ್ಟಿಯಾಗದೆ ನಿರುದ್ಯೋಗದಿಂದ ಬೇಸತ್ತಿದ್ದ ಯುವಜನತೆ ವ್ಯವಸ್ಥೆಯ ವಿರುದ್ಧ ತಿರುಗದಂತೆ ದಾರಿ ತಪ್ಪಿಸುವ ಹೊಣೆಯನ್ನು ಹೊತ್ತಿರುವ ಸಂಘಪರಿವಾರ ಚಿಕ್ಕಮಗಳೂರಿನಲ್ಲಿ ಯುವಜನರನ್ನು ಭಜರಂಗಿಗಳಾಗಿಸಿ ಅವರಿಗೆ ಮತಾಂಧತೆಯ ಆಧಾರದಲ್ಲಿ ಬ್ರೈನ್‌ವಾಶ್ ಮಾಡಿ ರಾಜಕೀಯ ಬೇಳೆ ಬೇಯಿಸುತ್ತಿದೆ. ಆದರ ಫಲವಾಗಿ 2004ರ ಚುನಾವಣೆಯಲ್ಲಿ ಅದು ಎಂ.ಪಿ. ಸ್ಥಾನ ಮತ್ತು 5 ಎಂ.ಎಲ್.ಎ ಸ್ಥಾನ ಪಡೆಯಿತು. ಇದಕ್ಕೆ ಸತತವಾಗಿ ಜಿಲ್ಲೆಯನ್ನು ಪ್ರತಿನಿಧಿಸಿದ ಕಾಂಗ್ರೆಸ್ ಜನತೆಯನ್ನು ಮರೆತ ಪರಿಣಾಮವೂ ಸೇರಿತು ಎನ್ನಬಹುದು. ರಾಜಕೀಯ ಚಂಚಲತೆ, ಪ್ರಗತಿಪರ ಶಕ್ತಿಗಳ ಏಕತೆ ಹಾಗೂ ಪ್ರತಿರೋಧದ ಕೊರತೆಯಿಂದ ಕೋಮುವಾದ ಬೆಳೆಯಿತು. ದಕ್ಷಿಣ ಕನ್ನಡ ಜನತೆಯು ಕೋಮುವಾದಿಗಳನ್ನು ಎದುರಿಸಲು ಪ್ರಗತಿಪರ ಶಕ್ತಿಗಳನ್ನು ಬೆಳೆಸಿ ಪ್ರತಿರೋಧ ಒಡ್ಡಲು ಆರಂಭಿಸಿರುವಂತೆ ಚಿಕ್ಕಮಗಳೂರಿನ ಜನತೆಯೂ ಮಾಡಬೇಕಾಗಿದೆ. ಆ ಮೂಲಕ ಮಾತ್ರ ಕೋಮುವಾದವನ್ನು ಹಿಮ್ಮೆಟ್ಟಿಸಲು ಸಾಧ್ಯ.

ಜನರ ಬವಣೆಗಳ ದುರ್ಬಳಕೆ

ಇದೇ ಅವಧಿಯಲ್ಲಿ ಜಿಲ್ಲೆಯಲ್ಲಿ ನಕ್ಸಲೀಯ ಚಟುವಟಿಕೆಗಳು ಬೆಳೆದುಬಂದವು. ಇಡೀ ಪ್ರಜಾಸತ್ತಾತ್ಮಕ ಚಳುವಳಿಯನ್ನು ದಾರಿ ತಪ್ಪಿಸುವ ಕೆಲಸವನ್ನು ಮಾಡುತ್ತಿರುವ ನಕ್ಸಲೀಯರು, ಸರ್ಕಾರ ಕುದುರೆಮುಖ ರಾಷ್ಟ್ರೀಯ ಅರಣ್ಯದಲ್ಲಿನ ಗಿರಿಜನರನ್ನು ಒಕ್ಕಲೆಬ್ಬಿಸಲು ಬಲಪ್ರಯೋಗಕ್ಕೆ ಇಳಿದಿದ್ದನ್ನು ಹಾಗೂ ಅರಣ್ಯ ಪ್ರದೇಶದಲ್ಲಿನ ಸಮಸ್ಯೆಗಳಿಂದ ರೋಸಿಹೋಗಿರುವ ಜನರನ್ನು ಬಳಸಿಕೊಂಡು ಚಟುವಟಿಕೆಗಳನ್ನು ಆರಂಭಿಸಿದರು. ಅಲ್ಲಿನ ಯುವಕರಿಗೆ ಬಂದೂಕಿನ ಬಲದಿಂದ ಕ್ರಾಂತಿ ಮಾಡಿಸುವ ಭ್ರಮೆಯನ್ನು ತುಂಬಿದರು. ಇದರಿಂದ ನಕ್ಸಲೀಯರು ಮಾತ್ರವಲ್ಲ ಅವರ ಬೆಂಬಲಿಗರು, ಅಮಾಯಕರು ಬಲಿಯಾದರು. ಪ್ಯಾಕೇಜ್‌ಗಳ ಪ್ಯಾಕಪ್ ಈ ಸಂದರ್ಭದಲ್ಲಿ ಹಲವು ಪ್ಯಾಕೇಜ್‌ಗಳನ್ನು ಘೋಷಿಸಲಾಯಿತು. ಆದರೆ ಯಾವ ಪ್ಯಾಕೇಜ್‌ಗಳು ಅಲ್ಲಿನ ಜನರಿಗೆ ತಲುಪಲಿಲ್ಲ. ಆಸ್ಪತ್ರೆ, ಶಾಲೆ, ರಸ್ತೆಗೆ ಬರಲು ನಾಲ್ಕಾರು ಕಿ.ಮಿ ನಡೆಯುವ, ಹಳ್ಳದ ನೀರನ್ನು ಕುಡಿಯುವ ಸ್ಥಿತಿ ಬದಲಾಗಲಿಲ್ಲ. ಹೀಗೆ ಎಲ್ಲಾ ಪ್ಯಾಕೇಜ್‌ಗಳು ಪ್ಯಾಕಪ್ ಆದವು. ಆದರೆ ಈ ಯಾವ ವಿಷಯಗಳೂ ಜನಪ್ರತಿನಿಧಿಗಳಿಗೆ ಪ್ರಸ್ತಾಪಿಸಲು ವಿಷಯಗಳಾಗಲಿಲ್ಲ. ಬದಲಿಗೆ ಕೋಮುಭಾವನೆಯನ್ನು ಹರಡಲು ಪ್ರಯತ್ನಿಸಿದರು. ನಕ್ಸಲೀಯರು ಕಾಡೊಳಗೆ ಬಂದೂಕು ಹಿಡಿದು ಕ್ರಾಂತಿ ಮಾಡುವ ಭ್ರಮೆಯಲ್ಲಿ ಉಳಿದರು. ಜನರು ಈ ಸಮಸ್ಯೆಗಳ ಪರಿಹಾರಕ್ಕೆ ಪ್ರಜಾಸತ್ತಾತ್ಮಕ ಜಾತಿಯ ಹೋರಾಟಕ್ಕೆ ಬರದಂತೆ ತಡೆದರು. ಹೀಗೆ ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ನಕ್ಸಲರು ಸಮಸ್ಯೆಗಳನ್ನು ಜೀವಂತವಾಗಿಡಲು ಪೂರಕವಾಗಿ ಸಹಕರಿಸಿದರು. ಆಡಳಿತವು ಜನತೆಯ ಬದುಕಿನ ಪ್ರಶ್ನೆಗಳಿಗೆ ಸರಿಯಾಗಿ ಸ್ಪಂದಿಸುವ ಮೂಲಕ ನಕ್ಸಲೀಯ ಚಟುವಟಿಕೆಗಳನ್ನು ದುರ್ಬಲಗೊಳಿಸಲು ಕಾರ್ಯಕ್ರಮ ರೂಪಿಸಬೇಕು. ಜೊತೆಗೆ ಸೌಹಾರ್ದತೆ ರಕ್ಷಣೆಗೆ ದೃಢವಾದ ಹಾಗೂ ಕಠಿಣವಾದ ನಿರ್ಧಾರಗಳನ್ನು ಕೈಗೊಳ್ಳಬೇಕಾಗಿದೆ.

ಪ್ಯಾಕೇಜ್ ಲಾಭ ಕಾರ್ಮಿಕರಿಗಿಲ್ಲ : ತೋಟ ಕೈಗಾರಿಕೆ ಜಿಲ್ಲೆಯ ಪ್ರಮುಖ ಉದ್ಯಮ. ಆದರೆ ತೋಟ ಉತ್ಪನ್ನಗಳಿಗೆ ಸರಿಯಾದ ಧಾರಣೆಯಿಲ್ಲದೆ ಸಂಕಷ್ಟಕ್ಕೆ ಸಿಲುಕಿತ್ತು. ಹಲವಾರು ಪ್ಯಾಕೇಜ್‌ಗಳಿಂದ ತೋಟ ಉದ್ಯಮ ಈಗ ಚೇತರಿಸಿಕೊಳ್ಳುತ್ತಿದೆ. ಆದರೆ ಪ್ಯಾಕೇಜ್‌ಗಳ ಲಾಭ ಅಲ್ಲಿಯ ಕಾರ್ಮಿಕರಿಗೆ ಸಿಕ್ಕುತ್ತಿಲ್ಲ. ಗುತ್ತಿಗೆ ಹಾಗೂ ತಾತ್ಕಾಲಿಕ ಕಾರ್ಮಿಕರಿಗೆ ಭದ್ರತೆಯಿಲ್ಲ. ಖಾಯಂ ಕಾರ್ಮಿಕರು ಇಲ್ಲದಂತಾಗಿದ್ದಾರೆ. ಹೀಗೆ ಮುಂದುವರೆದರೆ ತೋಟಗಳಲ್ಲಿ ಕೆಲಸ ಮಾಡಲು ಕಾರ್ಮಿಕರಿಲ್ಲದಂತಾಗಿ ತೋಟ ಉದ್ಯಮ ಮತ್ತೊಂದು ರೀತಿಯ ಸಮಸ್ಯೆಗೆ ಒಳಗಾಗುತ್ತದೆ ಎಂದು ಸಿಐಟಿಯು ನಾಯಕರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

(ಸಂಚಿಕೆ 28ರಲ್ಲಿ ಪ್ರಕಟವಾದ ಹಾಸನ - ಚಿಕ್ಕಮಗಳೂರು ಸಿಪಿಐ(ಎಂ) ಸಮ್ಮೇಳನದಲ್ಲಿ ವಿಶ್ಲೇಷಿಸಲಾದ ಚಿಕ್ಕಮಗಳೂರಿನ ಪರಿಸ್ಥಿತಿ)

ವಲಸೆ ನಾಯಕರು ಎತ್ತ, ಏನು?

ಪುಟ 3 ರಿಂದ

ಕಾಂಗ್ರೆಸ್‌ನೊಂದಿಗೆ ಮಾತುಕತೆಗೆ ದೆಹಲಿ ಯಾತ್ರೆ ನಡೆಸಿದ್ದು ಎಂ.ಪಿ.ಪಿ.ಯವರೇ. ಇದಕ್ಕೆ ಶಾಸಕರ ಒತ್ತಡ ಇತ್ತು ಎಂಬುದು ಪೂರಕ ಅದು ಬಿಜೆಪಿಯಾಗಿರಲಿ ಅಥವಾ ಕಾಂಗ್ರೆಸ್ ಜೊತೆ ಮೈತ್ರಿಯೇ ಆಗಲಿ. ಆಗ ವಿಧಾನಸಭೆಯ ವಿಸರ್ಜನೆಗೆ ಪಟ್ಟು ಹಿಡಿದು ಶಾಸಕರನ್ನು ಮನಒಲಿಸುವ ಬದಲು ಹೇಗೋ 'ಒಂದು ಸರ್ಕಾರ' ರಚನೆಗೆ ಅಹೋರತ ಪ್ರಯತ್ನ ಮಾಡಿದ್ದು ಅವರು ಪ್ರತಿನಿಧಿಸುತ್ತೇನೆಂಬ ಸಿದ್ಧಾಂತಕ್ಕೆ ವ್ಯತಿರಿಕ್ತವಾಗಿಯೇ. ಅವರಿಗೊಂದು ಸೈದ್ಧಾಂತಿಕ ಬದ್ಧತೆಯಿದ್ದರೆ ಸಂದರ್ಭಸಾಧಕತೆಯ ವಿರುದ್ಧ ಬಂಡಾಯ ಹೂಡಬೇಕಿತ್ತು. ಹಾಗೆ ಮಾಡಲೇ ಇಲ್ಲ. ಆದ್ದರಿಂದ ಈಗಿನ ಬಂಡಾಯವೆಂಬುದು ಸುರಕ್ಷಿತ ರಾಜಕೀಯ ತಾಣವನ್ನು ಆರಿಸುವ ಜಾಣ ಬೆಕ್ಕಿನ ಮೊದಲ ಹೆಜ್ಜೆಗಳು...

ಇದೀಗ ಅಂಗಳದಿಂದ ಆಚೆಗೆ ಹೊರಟು ನಿಂತಿರುವ ಎಂ.ಪಿ.ಪಿ. ಹಾಗೂ ಅವರೊಂದಿಗೆ ಇರುವವರ ಮುಂದಿನ ಹಾದಿ ಏನೆಂದು ಕೇಳಿದಾಗ ನೀಡಿದ ಉತ್ತರ ವಿಚಿತ್ರವಾಗಿತ್ತು. ಪಕ್ಷದ ಹುಡುಕಾಟದ ಮಾತು ಮುಂದುವರಿಸುತ್ತಾ, ಬಿಜೆಪಿ ಪಕ್ಷವೂ ಆಗಬಹುದು. 'ಯಾಕಾಗಬಾರದು' ಎಂದು ಹೇಳಿಬಿಟ್ಟರು. ಕೇಂದ್ರದಲ್ಲಿಯೂ- ರಾಜ್ಯದಲ್ಲಿಯೂ ಬಿಜೆಪಿ ನಡೆಸಿದ ಆಡಳಿತ ಅದರ ಹಿಂದಿನ ಆರ್.ಎಸ್.ಎಸ್. ಕಾರ್ಯತಂತ್ರ ಕಣ್ಣಿಗೆ ರಾಚುತ್ತಿರುವಾಗ ಒಬ್ಬ 'ಸಮಾಜವಾದಿ' ಚಿಂತಕನಾಗಿ ಹೇಗೆ ಪ್ರತಿಕ್ರಿಯಸಬಹುದಿತ್ತು? ಕನಿಷ್ಠ ಕಾಂಗ್ರೆಸ್-ಬಿಜೆಪಿಗೆ ಪರ್ಯಾಯ ಕಟ್ಟುವ ಮಾತನ್ನಾಡಬಹುದಿತ್ತು... ಹಾಗೆ ಮಾಡಲಿಲ್ಲ ಯಾಕೆ ಎಂಬುದರಲ್ಲಿ ಬಹುತೇಕ ಈ ಸಮಾಜವಾದಿಗಳ (ಲೋಹಿಯಾ ವಾದಿ)-ಸಮಾಜವಾದದ ಸೋಲು ಇದೆ.

ಸ್ವತಃ ಪ್ರಕಾಶರೇ ಈ ಹಿಂದೆ ಸಂಯುಕ್ತ ಜನತಾದಳದಲ್ಲಿದ್ದು, ನಂತರ ಬಿಜೆಪಿಯೊಂದಿಗೆ ಚುನಾವಣೆ ಮೈತ್ರಿ ಮಾಡಿಕೊಂಡು 'ಮಡಿ-ಮೈಲಿಗೆ ಅಲ್ಲ' ದ ಸಿದ್ಧಾಂತವನ್ನು ಹೊಸೆದಿದ್ದರು. ಬಂಗಾರಪ್ಪನಂತಹವರು ಬಿಜೆಪಿಯ ಕದ ತಟ್ಟಿ ಕಟ್ಟಿ ಕೊನೆಗೆ ಹೊರಬಂದರು;ಜಾರ್ಜ್ ಫರ್ನಾಂಡೀಸ್‌ರಂಥವರು ಬಿಜೆಪಿ ಅಲ್ಲಲ್ಲ... ಆರ್‌ಎಸ್‌ಎಸ್ ಗೇ ನಿಷ್ಠ ಸ್ವಯಂ ಸೇವಕರಾಗಿದ್ದಾರೆ. ಪ್ರಖ್ಯಾತ ಜೆ.ಹೆಚ್.ಪಟೇಲರೂ ಆರ್‌ಎಸ್‌ಎಸ್-ಬಿಜೆಪಿ ಕ್ಯಾನ್ಸರ್ ಎಂದು ಕರೆದು ಮರುದಿನವೇ ಅವರ ಕೈ ಕುಲುಕಲಿಲ್ಲವೇ? ಸಮಾಜವಾದಿಗಳ ಸಿದ್ಧಾಂತ ವ್ಯಾಧಿಯಿಂದಾಗಿ ಅವರೆಲ್ಲಾ ಅತ್ಯಂತ ಬಲ ಪ್ರತಿಗಾಮಿಗಳ ಸೇವೆಗೆ -ಅದನ್ನು ಬಲಪಡಿಸಲು ದುಡಿಯುತ್ತಿದ್ದಾರೆ.

ಇವತ್ತು ಎಂ.ಪಿ.ಪ್ರಕಾಶ್‌ರೊಂದಿಗೆ, ಬಳ್ಳಾರಿಯ ಸೂರ್ಯನಾರಾಯಣರೆಡ್ಡಿ, ಅನಿಲ್ ಲಾಡ್, ಹಾಗೂ ಬಿ.ಸಿ.ಪಾಟೀಲ್, ಶರಣಬಸವ ದರ್ಶನಾಪುರ, ಅಮರೇಗೌಡ ಬಯ್ಯಾಪುರ,ಮುಂತಾದವರಿದ್ದಾರೆ. ಇವರ ಜೊತೆಗಿದ್ದ ಚೆಲುವರಾಯಸ್ವಾಮಿ, ಅಲಂಗೂರು ಶ್ರೀನಿವಾಸ್, ಮುಂತಾದವರು ಕುಮಾರಸ್ವಾಮಿ 'ಪ್ರೀತಿಗೆ' ಮನ 'ಸೋತು' ಜೆಡಿ(ಎಸ್)ನಲ್ಲೇ ಉಳಿಯಲಿದ್ದಾರಂತೆ. ಹುಣಸೂರಿನ ಜಿ.ಟಿ.ದೇವೇಗೌಡ ಬಿಜೆಪಿಗೆ ಸೇರಿ ಕಮಲಧಾರಿಯಾಗಿ ಯಡ್ಯೂರಪ್ಪ ನವರನ್ನು ಮುಖ್ಯಮಂತ್ರಿ ಮಾಡಿಯೇ ತೀರಲು ಟೊಂಕಕಟ್ಟಿ ನಿಂತಿದ್ದಾರೆ (ಉತ್ಸಾಹ ಗಮನಿಸುವಂತಹದ್ದೇ).

ದಿನಗಳೆದಂತೆ ಎಂ.ಪಿ.ಪಿ. ಬಣ ಏನಾದರೊಂದು 'ದಾರಿ' -ಸೂರು ಹುಡುಕಿಕೊಳ್ಳಬೇಕಿದೆ. ಸದ್ಯದ ವರದಿಗಳಂತೆ ಬಹುತೇಕರು ಕಾಂಗ್ರೆಸ್‌ಗೆ ಹೋಗಬಹುದಂತೆ.. ಇವರು ಬರಬಹುದೇನೋ ಎಂದು ಬಿ.ಎಸ್.ಪಿ.ಯವರು ಬಾಗಿಲು ತೆರೆದಿಟ್ಟು ಕಾದಿದ್ದಾರೆ. ಇವರಿಗೆ ತಮ್ಮ ಕ್ಷೇತ್ರಗಳಲ್ಲಿ ತಮ್ಮ ಭವಿಷ್ಯ ಚಿಂತೆ, ಎಲ್ಲಿಗೆ ಹೋಗಲಿ ಗುಂಪಾಗಿ ಹೋದರೇನೇ 'ಚೌಕಾಸಿ' ಗೆ ಬಲವೆಂದು ನಂಬಿದವರು.

ಎಂ.ಪಿ.ಪಿ.ಯವರಿಗೆ ರಾಷ್ಟ್ರ ರಾಜಕಾರಣದಲ್ಲಿ ಸೇವೆ ಸಲ್ಲಿಸುವ ಬಯಕೆಯಂತೆ, ಅವರ ನಿವೃತ್ತಿಯಾದ ಸ್ಥಾನವನ್ನು ಉದಯೋನ್ಮುಖ ಗಣಿ ಇತ್ಯಾದಿ ಸಾಹಸೋದ್ಯಮಿ ಅವರ ಪುತ್ರ ತುಂಬಬೇಕಂತೆ. ಉಳಿದವರಿಗೆ 'ಟಿಕೆಟ್' ನ ಖಾತ್ರಿ ಬೇಕಂತೆ. ಅಂತೂ ಕರ್ನಾಟಕದ ಜನರ ಬದುಕಿಗೆ ಇವರ್‍ಯಾರು ಖಾತ್ರಿ ಕೊಡುತ್ತಿಲ್ಲ.

......

ಬಿಜೆಪಿ ನಾಯಕರು ಜನರನ್ನು ಉತ್ಸಾಹಗೊಳಿಸಲು ಕೆಲವರನ್ನು ಸೆಳೆದುಕೊಳ್ಳಲು ಯಾತ್ರೆ ಹೊರಟಿದ್ದಾರೆ. ರಾಜ್ಯ ಕಾರ್ಯಕಾರಿಣಿಯನ್ನು ದಾವಣಗೆರೆಯಲ್ಲಿ ನಡೆಸಿದ್ದಾರೆ. 'ಪೂರ್ಣ ಬಹುಮತ - ಸಂಪೂರ್ಣ ಅಭಿವೃದ್ಧಿ', ಇದು ಅವರ ಹೊಸ ಘೋಷಣೆ, ದೇಶಕ್ಕೆ ಆದ್ವಾನಿ... ರಾಜ್ಯಕ್ಕೆ ಯಡಿಯ್ಯೂರಪ್ಪ' ಎಂಬುದೀಗ... ಬಿಜೆಪಿ' ಎಂದಾಗಿದೆ. ಕಾರಣ ಹೊಸದೇನಲ್ಲ. ಯಡ್ಯೂರಪ್ಪ ಸಿ.ಎಂ. ಎಂಬುದಕ್ಕೆ ಪ್ರಬಲ ಆಕ್ಷೇಪ ಬಿಜೆಪಿಯೊಳಗೇ ವ್ಯಕ್ತವಾಗಿದೆ. ಈ ಬಳಿಕವೂ ಯಶವಂತ ಸಿನ್ಹಾ 'ಯಡ್ಡಿ' ಹೆಸರನ್ನು ಪುನರುಚ್ಚರಿಸಿದ್ದಾರೆ.

ಬಿಜೆಪಿ ಯಾತ್ರೆ ಹೋದಲ್ಲೆಲ್ಲಾ ಭಾರೀ ಉತ್ಸಾಹದಾಯಕ ಪ್ರತಿಕ್ರಿಯೆ ಸಿಗುತ್ತಲಿದೆ ಎಂದು ಬಣ್ಣಿಸಲಾಗುತ್ತಿದೆ. ಈ ಹೊಸ ಶೋ ನೋಡಲು ಒಂದಿಷ್ಟು ಜನ ಬರುತ್ತಿರಬಹುದು. ಆದರೆ ನೂರಾರು ಜನರನ್ನು ಈ ಯಾತ್ರೆಯೊಂದಿಗೆ ಕರೆದೊಯ್ಯುತ್ತಿದ್ದಾರೆ. ಉಳಿದಂತೆ ಅದೇನಿದ್ದರೂ ಮಾಧ್ಯಮಗಳ ಮಾಯೆ! ಇಲ್ಲಿ ಜನರ ಪ್ರಶ್ನೆಗಳ ಪ್ರಸ್ತಾಪ ತೀರಾ ಕಡಿಮೆ. ಏನಿದ್ದರೂ 'ಕುರ್ಚಿ' ಯ ಸುತ್ತಲೇ ಮಾತುಗಳು, ಜೆಡಿ(ಎಸ್) ನ ವಿಶ್ವಾಸದ್ರೋಹದ ಮಾತುಗಳು ಕಡಿಮೆ ಮಾಡಿ ಕಾಂಗ್ರೆಸ್ ಮೇಲೆ ಧಾಳಿ ಕೇಂದ್ರೀಕರಿಸಲು ಯತ್ನ ಆರಂಭವಾಗಿದೆ. ಬಿಜೆಪಿ-ಕಾಂಗ್ರೆಸ್ ಎಂದು ಬಂದರೆ ಕಾಂಗ್ರೆಸ್ ವಿರೋಧಿ ಮತಗಳನ್ನು (ಜೆಡಿಎಸ್ ಮತಗಳನ್ನು) ಸೆಳೆಯಬಹುದು ಎಂಬ ಸರಳ ಲೆಕ್ಕಾಚಾರ, ಅದಕ್ಕಾಗಿ ದಕ್ಷಿಣ ಕರ್ನಾಟಕದಲ್ಲೇ ಯಾತ್ರೆ ಗಮನ ಕೇಂದ್ರೀಕರಿಸಿದೆ. ಮುಖ್ಯವಾಗಿ ಜೆಡಿ(ಎಸ್)ನಲ್ಲಿರುವ ಹಾಗೂ ಹೊರ ನಡೆದಿರುವ, ಪ್ರಮುಖ ನಾಯಕರನ್ನು ಸೆಳೆಯಲು ಪ್ರಯತ್ನ ನಡೆಸಲಾಗಿದೆ. ಮೈಸೂರಿನಲ್ಲಿ ಜಿ.ಟಿ.ದೇವೇಗೌಡರ ಸೇರ್ಪಡೆ, ಬೆಂಗಳೂರಿನ ಎಂ.ಶ್ರೀನಿವಾಸ್‌ರ ಪುನರ್ ಸೇರ್ಪಡೆ ಇಡೀ ದಳವೇ ತನ್ನ ಬಲಿಗೆ ಬರುತ್ತಿದೆ ಎಂಬ ಪೋಜ್ ನೀಡಲಾಗುತ್ತಿದೆ ಸಿ.ಎಂ.ಇಬ್ರಾಹಿಂ ಸಹ ಬರುವ ಎಂದೂ ಪ್ರಚಾರ. ಒಂದು ರೀತಿಯಲ್ಲಿ ಬಿಜೆಪಿಯೇ ಬಲಗೊಳ್ಳುತ್ತಿರುವ ಪಕ್ಷ ಎಂದು ಬಿಂಬಿಸಲು ಹೆಣಗಲಾಗುತ್ತಿದೆ. ದೇವೇಗೌಡ-ಕುಮಾರಸ್ವಾಮಿಯವರಿಗೆ ಯಡ್ಡಿಯೂರಪ್ಪ ಸೆಡ್ಡು ಹೊಡೆದು ಹಗರಣ ಹೊರ ತೆಗೆಯುವುದಾಗಿ ಹೇಳುತ್ತಿದ್ದಾರೆ. ಪ್ರತಿಯಾಗಿ ರೇವಣ್ಣ ಸಹ ಎಚ್ಚರಿಸುತ್ತಿದ್ದಾರೆ. ಆದರೆ ಯಾರೂ ಹಗರಣ ಹೊರ ತೆಗೆಯುತ್ತಿಲ್ಲ. ಅದು ಅವರವರ ಬ್ಲಾಕ್ ಮೇಲ್ ರಾಜಕಾರಣಕ್ಕೆ ಮಾತ್ರ ಸೀಮಿತವಾದ ಖಾಸಗಿ ಆಸ್ತಿ ಎಂದು ಭಾವಿಸಿದ್ದಾರೆ. ದಿನಗಳೆದಂತೆ ಈ ಬ್ಲೂ ಜಾಕಲ್‌ಗಳ (ನೀಲಿ ನರಿಯ) ಬಣ್ಣ ಬಯಲಾದೀತು.

ಈವಾರ ಕಾಂಗ್ರೆಸ್ ನಾಯಕರೂ ಸವಾರಿ ಹೊರಟಿದ್ದಾರೆ. ತಾವೇನೂ ಕಡಿಮೆ ಇಲ್ಲ ಎಂದು ಜನಾಂದೋಲನ ಹೊರಟಿದ್ದಾರೆ. ಇಲ್ಲಿ ದೂಷಣೆಯೇ ಭಾಷಣ.... ಈ ನಡುವೆ ಕಾಂಗ್ರೆಸ್‌ನಲ್ಲಿ 'ವರ್ಚಸ್ಸಿ' ನಾಯಕರಿಲ್ಲ ಎಂಬುದು ಕೆಲವರಿಗೆ ಗೋಚರ ವಾಗಿದೆಯಂತೆ. ಅದಕ್ಕೆ ಪುನಃ ಎಸ್.ಎಂ.ಕೃಷ್ಣರನ್ನು ಕರೆದು ತರಬೇಕು ಎಂದು ಡಿಕೆಎಸ್ ಮುಂತಾದವರು ವಾದಿಸುತ್ತಿದ್ದಾರೆ. ಕೃಷ್ಣ ಬೇಡ ಎಂಬುದನ್ನೇ ಖರ್ಗೆ ನಾಯಕತ್ವವೇ ಇರಲಿ' ಎಂಬುದು ಧರಂಸಿಂಗ್ ಮುಂತಾದವರ ಹೇಳುತ್ತಿದ್ದಾರೆ. ಒಟ್ಟಾರೆ ಕಾಂಗ್ರೆಸ್ ಪಕ್ಷದೊಳಗೆ ನಾಯಕತ್ವದ ಹುಡುಕಾಟ, ಮುಂತಾದ ಆತ್ಮವಿಶ್ವಾಸ.

ಇಡೀ ಈ ಅವಧಿಯಲ್ಲಿ ಜನರ ಪ್ರಶ್ನೆಗಳನ್ನು ಕೈಬಿಟ್ಟು ಕೇವಲ ವ್ಯಕ್ತಿಗತ ದೋಷಾರೋಪಣೆ ಹಾಗೂ ಅದೇ ಹಿತಾಸಕ್ತಿಗಳಿಗೆ ಜೋತುಬಿದ್ದು, ವಿರೋಧ ಪಕ್ಷವಾಗಿ ವಿಫಲವಾಗಿರುವಾಗ ಆತ್ಮವಿಶ್ವಾಸ ಎಲ್ಲಿಂದ ಬಂದೀತು? ಇಲ್ಲಿ ಜನರನ್ನು ಕೈಬಿಟ್ಟು.

....

ದೇವೇಗೌಡರು ಸಹ ಜನರ ನಡುವೆ, ನಡೆಯಲು ಸಿದ್ಧವಾಗಿದ್ದಾರೆ. ಹೊರ ಹೋಗುತ್ತೇವೆ ಎಂದವರಿಗೆ ಹೋಗಬೇಡಿ ಎಂದೇನೋ ಅನ್ನುತ್ತಾರೆ. ಆದರೆ ಹೋಗಿಯೇ ತೀರುತ್ತೇವೆ ಎಂಬುವವರಿಗೆ ಶುಭ ವಿದಾಯ ಹೇಳುತ್ತಿದ್ದಾರೆ. 'ಸತ್ಯ' ವಿವರಿಸಿ ಕೆಳಹಂತದಿಂದ ಪಕ್ಷ ಕಟ್ಟಿ ಅಧಿಕಾರ ಗಿಟ್ಟಿಸುವ ವಿಶ್ವಾಸವನ್ನು ಕುಮಾರ ಹೇಳುತ್ತಿದ್ದಾರೆ. ಜನ ಏನು ಹೇಳುವರು ನೋಡಬೇಕು.



■ ನಕುಲ

‘ಲವಕುಶ’ ಈ ಜಮಾನಕ್ಕಲ್ಲ

ಎಂತೆಂಥಾ ನಮ್ಮ ಹಿಂದಿನ ನಿರ್ದೇಶಕರೇ ಈಗಿನ ಜಮಾನಕ್ಕೆ ನಾವಲ್ಲ ಅನ್ನೋದನ್ನು ಅರ್ಥ ಮಾಡ್ಕೊಂಡು ಮನೇಲಿ ತೆಪ್ಪಗಿದ್ದಾರೆ. ಆದರೆ ಈ ಸಾಯಿಪ್ರಕಾಶ್ ಮಾತ್ರ ಬಡಪೆಟ್ಟಿಗೆ ಜಗ್ಗುವಹಾಗೆ ಕಾಣೋಲ್ಲ. ತನ್ನ ಅಖಂಡ ಪ್ರತಿಭೆಯನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟೇ ತೀರಬೇಕೆಂದು ತೀರ್ಮಾನಿಸಿದಂತಿದೆ. ಅಣ್ಣ-ತಂಗಿ, ತಾಯಿ, ತವರು ಸೀರೀಸ್ ಸಾಕಾದ ಹಾಗೆ ಕಾಣುತ್ತದೆ, ಈಗ ಸ್ನೇಹಿತರ ಸಹವಾಸಕ್ಕೆ ಕೈ ಹಾಕಿದ್ದಾರೆ. ಅದೂ 80 ರ ದಶಕದ ನಾಲ್ಕೈದು ಕನ್ನಡ-ಹಿಂದಿ ಚಿತ್ರಗಳ ಕಥೆಯನ್ನು ಕದ್ದ ಹಾಗೆ ಕಾಣುತ್ತದೆ.

ಚಿನ್ನಿ-ಚಕ್ರಿ ಗಳಸ್ಯ-ಕಂಠಸ್ಯ ಸ್ನೇಹಿತರು. ಎಷ್ಟೆಂದರೆ ಸಿನಿಮಾದ ಮಧ್ಯಂತರದವರೆಗೂ ಅವರ ಗೆಳೆತನಕ್ಕೆ ಸಾಕ್ಷಿ, ಪುರಾವೆ, ಸಮಜಾಯಿಷಿಗಳದ್ದೇ ಕಾರುಬಾರು. ಇಷ್ಟೇ ಆದರೆ ಸಿನಿಮಾ ಮುಂದುವರೆಯಬೇಕಲ್ಲ? ಒಬ್ಬರಲ್ಲ, ಇಬ್ಬರು ವಿಲನ್‌ಗಳು, ಅವರ ಕರಿನೆರಳು ಈ ಸ್ನೇಹಿತರ ಮೇಲೆ! ದೋಸ್ತಿ ಖತಂ- ದುಷ್ಮನ್ ಶುರು. ಇಷ್ಟಾಗುವಷ್ಟರಲ್ಲಿ ಇಬ್ಬರು ಹೀರೋಯಿನ್ ಮತ್ತು ಅವರೊಂದಿಗೆ ಫಾರಿನ್ ಟೂರ್ ಮುಗಿದಿರುತ್ತದೆ! (ಫಾರಿನ್ ಸೀನ್ ಇದ್ದರೆ ಜನ ಬರ್ತಾರೆ ಅಂತ ಯಾವ ಪುಣ್ಯಾತ್ಮ ಹೇಳಿದ್ದಾನೋ ಗೊತ್ತಿಲ್ಲ. ಅಥವಾ ಕಂಡೋರು ದುಡ್ಡಲ್ಲಿ ಪರದೇಶ ಸುತ್ತೋ ಖಯ್ಯಾಲಿಯೋ?). ಇದರ ಮಧ್ಯೆ ಜೋಕೋ ಜೋಕು! ಇವನ್ನೆಲ್ಲಾ ಯಾವ್ಯಾವ ಸಿನಿಮಾದಿಂದ ಕದ್ದಿದ್ದೋ ಗೊತ್ತಿಲ್ಲ, ನೋಡೋರಂತೂ ಸುಸ್ತೋ ಸುಸ್ತು!

ಹೇಗಾದರೂ ಮಾಡಿ ಚಿತ್ರಕ್ಕೆ ಅಂತ್ಯ ಹಾಡಬೇಕಲ್ಲ! ಸಾಯಿಪ್ರಕಾಶ್ ಕೀರ್ತಿಗೂ ಮುಕ್ಕಾಗಬಾರದಲ್ಲ! ಸೆಂಟಿಮೆಂಟ್ ಶುರು. ಚೆನ್ನಾಗಿ ಬಾಳಿ ಬದುಕುತ್ತಿದ್ದ ಒಂದು ಕುಟುಂಬ. ಅವರ ದುರದೃಷ್ಟಕ್ಕೆ ಕಾರಣ ಕೇಳಬೇಡಿ, ಅಲ್ಲೂ ಖಳನಾಯಕರ ಕರಿನೆರಳು ಆ ಕುಟುಂಬದ ಮೇಲೆ. ಅದೂ ಈಗಿನ ವಿಲನ್‌ನದ್ದೇ! ಕುಟುಂಬ ದಿಕ್ಕಾಪಾಲು - ಗಂಡ, ಹೆಂಡತಿ, ಇಬ್ಬರು ಮಕ್ಕಳೂ ಸೇರಿ ನಾಲ್ವರೂ ನಾಲ್ಕು ಪಾಲು. ಆ ಮಕ್ಕಳಿಬ್ಬರೇ ಚಿನ್ನಿ-ಚಕ್ರಿ. ಅವರಿಗೆ ಗೊತ್ತೇ ಆಗಿರುವುದಿಲ್ಲ ತಾವು ಅಣ್ಣತಮ್ಮಂದಿರೆಂದು!

ಅಂತೂ ಇಂತೂ ಕ್ಲೈಮಾಕ್ಸ್ ಬಂದೇಬಿಡ್ತು. ಎಲ್ಲರೂ ಒಂದೇ ಕಡೆ ಸೇರಿಬಿಡ್ತಾರೆ (ಅದ್ಹೇಗೆ ಅಂತ ಸಾಯಿಪ್ರಕಾಶ್‌ಗೆ ಮಾತ್ರ ಗೊತ್ತು). ಅಬ್ಬಾ! ಕೊನೆಗೆ ಗೆಳೆಯರಿಬ್ಬರಿಗೂ ತಾವು ಸಹೋದರರೆಂದು ಗೊತ್ತಾಗೇಬಿಡುತ್ತೆ! ಅವರೇ



ಲವ-ಕುಶ. ಈಗ ದುಷ್ಮನ್ ಖತಂ - ದೋಸ್ತಿ ಶುರು. ಸಹೋದರರ ಸವಾಲ್ ಸ್ಟಾರ್ಟ್. ವಿಲನ್‌ಗಳು ಮತ್ತವರ ಹಿಂಬಾಲಕರನ್ನು ಅಟ್ಟಾಡಿಸಿಕೊಂಡು ಬಡಿಯುತ್ತಾರೆ. ಅದನ್ನು ಕಂಡ ತಾಯಿಗೆ ಆನಂದಬಾಷ್ಪ! ನೂರಾರು ಜನರ ಗುಂಡಿನ ದಾಳಿಗೆ ಗೆಳಯರಿಬ್ಬರ ಕೂದಲೂ ಸೋಕುವುದಿಲ್ಲ - ಇದು ಸಾಯಿಪ್ರಕಾಶ್ ಕೈಚಳ ಅಂತಿರೋ ಅಥವಾ ಅವರು ನಂಬಿರೋ ಸಾಯಿಬಾಬನ ಪವಾಡವೋ! ತೀರ್ಮಾನ ನಿಮಗೇ ಬಿಟ್ಟಿದ್ದು.

ಕೊನೆಗೆ ದುರದೃಷ್ಟ ಕುಟುಂಬದ ಸಂಕಟಗಳೆಲ್ಲಾ ಕಳೆದು ಗ್ರೂಪ್ ಫೋಟೋಗೆ ಒಂದು ಪೋಸ್ - ಇಲ್ಲಿಗೆ ಮುಗಿತು ಸಿನಿಮಾ ಕಥೆ! ಇನ್ನು ನಿರ್ಮಾಪಕನ ಅದೃಷ್ಟ ಹೇಗಿದೆಯೋ ನೋಡಬೇಕು

ನಟನೆಯಿಂದ ದೂರವುಳಿಯುವುದಾಗಿ ಹೇಳುತ್ತಿರುವ ಗಿರೀಶ್‌ಕಾರ್ನಾಡ್‌ರಂತಹವರಿಗೆ ಇ ಲಾಯಕ್ಕಾದ ಸಿನಿಮಾ ಅಲ್ಲ. ಅವರ ಪಾತ್ರ ತುಂಬಾ ಪೇಲವವಾಗಿದೆ. ಇನ್ನೂ ಶಿವಣ್ಣ-ಉಪೇಂದ್ರರಿಗೆ ಇದು ಹತ್ತರ ಜೊತೆ ಹನ್ನೊಂದು ಅಷ್ಟೇ!.

ಟಿ.ವಿ. ಸೀರಿಯಲ್ ಚೆನ್ನಾಗಿ ಕಂಡ್ರೇ ಅದನ್ನೂ ಸಿನಿಮಾಕ್ಕೆ ಭಟ್ಟಿ ಇಳಿಸಿಬಿಡುವ ಕಿಲಾಡಿ ಸಾಯಿಪ್ರಕಾಶ್‌ರ ಈ ಚಿತ್ರವೂ ಕನ್ನಡ ದೈನಂದಿನ ಮಹಾ ಧಾರವಾಹಿಗಳ ಆರ್ಭಟಕ್ಕೆ ಕಡಿಮೆಯಿಲ್ಲ, ಹೀರೋ ಕುಂತರೂ ಫ್ಲಾಶ್, ನಿಂತರೂ ಫ್ಲಾಶ್ ಮುಖ ಎತ್ತ ತಿರುವಿದರೂ ಫ್ಲಾಶ್.... ಗುಡುಗು ಸಿಡಿಲು ಮಿಂಚು....



ಇಂತಹ ದುಡಿಮೆಗೆ ಕೊನೆ ಇದೆಯೇ? ಎಂದು ?

ದೇವರೇ ಗತಿ !



ಪೊಳ್ಳುಮತದಲ್ಲಿ ಜೊಳ್ಳುನಂಬಿಗೆ ತುಂಬಿದ
ಜನರಿಗೆ ದೇವರೇ ಗತಿ!
ತಾವು ನೇಯುದ ಬಟ್ಟೆಯಿಂದ ಬತ್ತಲೆತನ
ಮುಚ್ಚುವವರು
ಬಿತ್ತಿ ಬೆಳೆಯದೆ ರೊಟ್ಟಿಗಾಗಿ ಬಾಯ್ಬಿಡುವ ಹೊಟ್ಟೆ
ಬಾಕರು ತಮ್ಮ ಕುಡಿತಕ್ಕಾಗಿ ಇನ್ನೊಬ್ಬರ ಮುಖ
ನೋಡುವ ತೃಷಾರ್ತರು
ಇಂಥ ಜನರಿಗೆ ದೇವರೇಗತಿ!
ದೃಷ್ಟ-ದುಷ್ಟರನ್ನು ವೀರರೆಂದೂ ಲಂಚ
ಬೀರುವವನಿಗೆ ದಾನಿಯೆಂದೂ ತಿಳಿಯುವ
ಜನರಿಗೆ ದೇವರೇಗತಿ!
ಸಂತಾಪ ಸಭೆಗಳಲ್ಲಿ ದನಿ ಎತ್ತರಿಸುವವರು
ಗತವೈಭವದ ಹಾಳಿಗೆ ಬಣ್ಣ ಬಳಿಯುವವರು
ಕುತ್ತಿಗೆಗೆ ಬರದೇ ತುಟಿ ಬಿಚ್ಚದವರು
ಈ ಜನರಿಗೆ ದೇವರೇಗತಿ!
ಯಾರ ಮಂತ್ರಿಯು ಊಳುವ ನರಿ
ವೇದಾಂತಿ ಕಣ್ಕಟ್ಟಾಡುವ ಮಾತಿನ ಮರಿ
ಕಲೆಗಾರ ಕವುದಿ-ಶಿಂಪಿಗ; ‘ಬ್ಯಾಂ’ ಅನ್ನುವ ಕು
ಇಂಥ ಜನರಿಗೆ ದೇವರೇಗತಿ!
ಬಿದ್ದವನಿಗೆ ಕಲ್ಲೆಸೆದು ಗೆದ್ದವನ ಬಾಲ ಬಡಿಯುವ
ಜನರಿಗೆ ದೇವರೇಗತಿ!
ರಾಷ್ಟ್ರವನ್ನು ಖಂಡ-ತುಂಡು ಮಾಡಿ ತುಂಡು
ಪಾಳೇಗಾರಿಕೆಯ ಬಂಡು ಎಬ್ಬಿಸುವ ಪುಂಡರಿ
ದೇವರೇಗತಿ

- ಖಲೀಲ್ ಜಿಬ್ರಾನ್

ಅನುವಾದ: ದ.ರಾ.ಬೇಂದ್ರೆ (1962

(‘ಕಾವ್ಯೋದ್ಯೋಗ’ ಎಂಬ ತಮ್ಮ ಆತ್ ವೃತ್ತಾಂತದಲ್ಲಿ ‘ಗುರುಚತುರ್ಮುಖ’ ಭಾಗದಲ್ಲಿ ವರಕವಿ ಬೇಂದ್ರೆ ತಮ್ಮ ಮೇಲೆ ಪ್ರಭಾವ ಬೀರಿದ ಅರೆಬಿಕ್-ಇಂಗ್ಲೀಷ್- ಕವಿ - ದಾರ್ಶನಿ ಖಲೀಲ್ ಜಿಬ್ರಾನ್‌ರನ್ನು ನೆನೆಸುತ್ತಾ ಉಲ್ಲೇಖಿಸಿದ ವಚನ ಇದು)



ಖಲೀಲ್ ಗಿಬ್ರಾನ್

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH